# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಶಾಸನಬದ್ಧ ಸಹಕಾರಿ ಸಂಸ್ಥೆ

'ಸೌಹಾರ್ದ ಸಹಕಾರಿ ಸೌಧ', ನಂ.68, 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, ದೂರವಾಣಿ: 080–23378375–80,
ವೆಬ್‌ಸೈಟ್ : www.souharda.coop, ಇ–ಮೇಲ್: souharda@souharda.coop


ಪತ್ರ ಸಂಖ್ಯೆ:ಸಂಸ/ವಾಸಾಸ/25/2026–27 / 0881/A ದಿನಾಂಕ:06.10.2026

<u>ಇವರಿಗೆ:</u>
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

ವಿಷಯ : ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕಳುಹಿಸುತ್ತಿರುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 25ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 08 ಸೆಪ್ಟೆಂಬರ್ 2026, ಮಂಗಳವಾರದಂದು ರಾಯಲ್ ತ್ರಿಪುರವಾಸಿನಿ, ಗೇಟ್ ಸಂಖ್ಯೆ 02, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ, ಬೆಂಗಳೂರು–560080 ಇಲ್ಲಿ ಅರ್ಥಪೂರ್ಣವಾಗಿ ಜರುಗಿತು.

ನೋಂದಣಿಗೊಂಡ ಒಟ್ಟು 6818 ಸೌಹಾರ್ದ ಸಹಕಾರಿಗಳಲ್ಲಿ ಈ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದ 4511 ಸೌಹಾರ್ದ ಸಹಕಾರಿಗಳಲ್ಲಿ 2704 ಸೌಹಾರ್ದ ಸಹಕಾರಿಗಳ ಡೆಲಿಗೇಟ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು. 29 ಸೌಹಾರ್ದ ಸಹಕಾರಿಗಳು ಗೈರು ಹಾಜರಿಗೆ ಅನುಮತಿ ಕೋರಿ ಪತ್ರಗಳನ್ನು ಕಳುಹಿಸಿದ್ದು, ಸದರಿ ಸೌಹಾರ್ದ ಸಹಕಾರಿಗಳ ಗೈರು ಹಾಜರಿಗೆ ಸಭೆಯು ಅನುಮತಿ ನೀಡಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ಹಾಗೂ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ 17ರ ನಿರ್ಣಯದಂತೆ, ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಲಾಗುತ್ತಿದೆ. ಈ ನಡವಳಿ ಮತ್ತು ನಿರ್ಣಯಗಳ ಕುರಿತು ತಮ್ಮ ಅಭಿಪ್ರಾಯ/ಸಲಹೆ/ಅನಿಸಿಕೆಗಳೇನಾದರೂ ಇದ್ದಲ್ಲಿ ದಿನಾಂಕ 06 ನವೆಂಬರ್ 2026ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ಮೇಲ್ಕಂಡ ವಿಳಾಸಕ್ಕೆ ತಲುಪುವಂತೆ ಕಳುಹಿಸಲು ತಿಳಿಸಿದೆ.

ವಂದನೆಗಳೊಂದಿಗೆ,

Karnataka State Souharda Federal Co-operative Ltd. Reg. No. RSR / SOU / ACM 136 / Regn. 081 / 2001-02 dated 04-01-2002 * Bengaluru *

ತಮ್ಮ ವಿಶ್ವಾಸಿ

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ದಿನಾಂಕ 08 ಸೆಪ್ಟೆಂಬರ್ 2026ರಂದು ನಡೆದ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು ಹಾಗೂ ನಿರ್ಣಯಗಳು

**ಸಭೆಯು ಪ್ರಾರಂಭವಾದ ಸಮಯ:ಬೆಳಿಗ್ಗೆ 10:05** **ಸಭೆಯು ಮುಕ್ತಾಯವಾದ ಸಮಯ:ಮಧ್ಯಾಹ್ನ 12:36**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 25ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 08 ಸೆಪ್ಟೆಂಬರ್ 2026, ಮಂಗಳವಾರದಂದು ರಾಯಲ್ ತ್ರಿಪುರವಾಸಿನಿ, ಗೇಟ್ ಸಂಖ್ಯೆ 02, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ, ಬೆಂಗಳೂರು-560080 ಇಲ್ಲಿ ಜರುಗಿತು.

ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಸಹಕಾರ ಧ್ವಜಾರೋಹಣವನ್ನು ನೆರವೇರಿಸಿದ ನಂತರ ನೆರೆದಿರುವ ಎಲ್ಲಾ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಬೋಧಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ಹಾಗೂ ಎಲ್ಲಾ ಮಾನ್ಯ ನಿರ್ದೇಶಕರು ಮತ್ತು ರಾಜ್ಯದ ವಿವಿಧ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ವಿಶೇಷ/ ವಿಭಿನ್ನ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಂತ್ರಾಂಶ (Software) ಪೂರೈಕೆದಾರರು, ವಿಮಾ ಉತ್ಪನ್ನ ಅಥವಾ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ (Technology) ಹಾಗೂ ಸುರಕ್ಷತಾ (Security) ಉಪಕರಣಗಳ ಪೂರೈಕೆದಾರರು ತಮ್ಮ ತಮ್ಮ ಸೇವೆ/ ಉಪಕರಣಗಳ ಪ್ರದರ್ಶನ/ ಮಾಹಿತಿ ನೀಡಲು ಏರ್ಪಡಿಸಲಾಗಿದ್ದ "ಸಹಕಾರಿ ತಾಂತ್ರಿಕ ಮೇಳ" (Cooperative Techno Fare) ವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರುಗಳು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳ ಉತ್ಪನ್ನಗಳ ಮಾರಾಟ ಮಳಿಗೆಯನ್ನೂ ಸಹ ವ್ಯವಸ್ಥೆ ಮಾಡಲಾಗಿತ್ತು. ಹಾಗೆಯೇ, ಸಂಯುಕ್ತ ಸಹಕಾರಿಯಿಂದ ಪ್ರಕಟಣೆಗಳ ಮಾರಾಟಕ್ಕಾಗಿ 2 ಮಾರಾಟ ಮಳಿಗೆಯನ್ನು ತೆರೆಯಲಾಗಿತ್ತು. ಒಟ್ಟಾರೆಯಾಗಿ ಈ ತಾಂತ್ರಿಕ ಮೇಳದಲ್ಲಿ 40+1 ಮಳಿಗೆಗಳಿದ್ದವು.

ನಂತರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 25ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಮೈಸೂರ್ ಮಹಾಲಿಂಗ್ ಹಾಗೂ ತಂಡದವರಿಂದ ಪ್ರಾರ್ಥನೆ, ಸಹಕಾರ ಗೀತೆ, ರೈತ ಗೀತೆ ಹಾಗೂ ನಾಡ ಗೀತೆಯೊಂದಿಗೆ ಪ್ರಾರಂಭವಾಯಿತು.

ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯರ ಸ್ವಾಗತ ಮತ್ತು ಪರಿಚಯವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್ ಇವರು ನಡೆಸಿಕೊಟ್ಟರು. ತಮ್ಮ ಸ್ವಾಗತ ಭಾಷಣದಲ್ಲಿ 25ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರಿಗೆ, ಸಂಯುಕ್ತ ಸಹಕಾರಿಯ ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಸಿ.ಪಿ.ವಿಜಯ್, ಶ್ರೀ ರಘುರಾಮ ರೆಡ್ಡಿ, ಶ್ರೀ ಪ್ರಭುದೇವ್.ಎಂ.ಆರ್., ಶ್ರೀಮತಿ ಭಾರತಿ ಜಿ ಭಟ್, ಶ್ರೀ ಮಂಜುನಾಥ, ಶ್ರೀ ಗುರನಗೌಡ ನಿಂಗನಗೌಡ ಪಾಟೀಲ, ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ಶ್ರೀ ಕೆ.ಶಿವಲಿಂಗಪ್ಪ, ಶ್ರೀ ನಾಗರಾಜ ರಂಗಪ್ಪಯ್ಯ ದೇಶಪಾಂಡೆ, ಶ್ರೀ ಮೋಹನದಾಸ ಜೆ. ನಾಯಕ, ಶ್ರೀ ಸಂಜಯ ಬಿ. ಪಾಟೀಲ, ಶ್ರೀಮತಿ ಶೈಲಜಾ ವಿ. ತಪಲಿ, ಶ್ರೀ ಹೆಚ್.ಜೆ. ಹನುಮಂತಯ್ಯ, ಶ್ರೀ ಆರ್ ತಿಮ್ಮಯ್ಯ ಶೆಟ್ಟಿ, ಶ್ರೀ

ಜಿ.ಶ್ರೀಧರ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಶ್ರೀ ಮಹದೇವಸ್ವಾಮಿ ಇವರಿಗೆ ಮತ್ತು ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ ಹೆಗಡೆ & ಕೋ., ಬೆಂಗಳೂರು ಇವರಿಗೆ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರುಗಳಿಗೆ ಮತ್ತು ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಗೌರವಾನ್ವಿತ ಮಾನ್ಯ ಡೆಲಿಗೇಟುಗಳಿಗೆ, ಈ ಸಭೆಯಲ್ಲಿ ಉಪಸ್ಥಿತರಿರುವ ಮಾನ್ಯ ಮಾಜಿ ಹಾಗೂ ಹಾಲಿ ಶಾಸಕರುಗಳಿಗೆ, ಮಾಧ್ಯಮ ಮಿತ್ರರಿಗೆ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಆದರದ ಸ್ವಾಗತವನ್ನು ಕೋರಿದರು. ಹಾಗೆಯೇ, ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸ್ವಾಗತವನ್ನು ಕೋರಿದರು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಮತ್ತು ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರು ದೀಪ ಪ್ರಜ್ವಲಿಸುವುದರ ಮೂಲಕ 25ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳಿಗೆ ಚಾಲನೆ ನೀಡಿದರು.

ನಂತರ 2025-26ನೇ ಸಾಲಿನಲ್ಲಿ ಹಾಗೂ ಇತ್ತೀಚಿಗೆ ನಿಧನರಾದ ಗಣ್ಯರು, ಸಹಕಾರಿಗಳು, ರೈತರು, ಸೈನಿಕರು, ರಾಜಕೀಯ ಧುರೀಣರು, ಸಂಗೀತ, ಚಲನಚಿತ್ರರಂಗ ಹಾಗೂ ನೆರೆ ಪ್ರವಾಹದಿಂದ ನಿಧನರಾದವರು ಸೇರಿದಂತೆ ಮೃತರಾದ ಕೆಲವು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರುಗಳು ಹಾಗೂ ಹಿರಿಯ ಸಹಕಾರಿಗಳ ಪಟ್ಟಿಯನ್ನು ಸಭೆಯಲ್ಲಿ ಓದಲಾಯಿತು. ಮೃತರಾದ ಎಲ್ಲಾ ಗಣ್ಯರುಗಳಿಗೆ ಒಂದು ನಿಮಿಷ ಮೌನವನ್ನು ಆಚರಿಸುವುದರ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ನಂತರ, ಇಂದು ನಡೆಯುತ್ತಿರುವ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬೇಕಾಗಿದ್ದ 4511 ಅರ್ಹ ಸೌಹಾರ್ದ ಸಹಕಾರಿಗಳಲ್ಲಿ ಅಗತ್ಯವಿರುವ ಕೋರಂನ ಸಂಖ್ಯೆ 10% ಅಂದರೆ 452 ಆಗಿದ್ದು, ಭಾಗವಹಿಸಿರುವ ಅಧಿಕೃತ ಡೆಲಿಗೇಟ್‌ಗಳ ಸಂಖ್ಯೆ 2704 ಆಗಿರುತ್ತದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

ನಂತರ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಕಾರಣಾಂತರಗಳಿಂದಾಗಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿ, ಗೈರು ಹಾಜರಿಗೆ ಅನುಮತಿಯನ್ನು ಕೋರಿರುವ ಸೌಹಾರ್ದ ಸಹಕಾರಿಗಳ ಹೆಸರುಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿ ಓದಿ ಹೇಳಿದರು. ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಕಾರಣಾಂತರಗಳಿಂದಾಗಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿ, ಗೈರು ಹಾಜರಿಗೆ ಅನುಮತಿಯನ್ನು ಕೋರಿರುವ ಈ ಕೆಳಗಿನ 29 ಸೌಹಾರ್ದ ಸಹಕಾರಿಗಳ ಗೈರು ಹಾಜರಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

| ಕ್ರ. ಸಂ. | ಸದಸ್ಯತ್ವ ಸಂಖ್ಯೆ | ಸೌಹಾರ್ದ ಸಹಕಾರಿಯ ಹೆಸರು | ತಾಲ್ಲೂಕು | ಜಿಲ್ಲೆ |
|---|---|---|---|---|
| 1 | ವಿಜೆಪಿ-0248 | ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸೌಹಾರ್ದ ಸಹಕಾರಿ ನಿ., | ಸಿಂದಗಿ | ವಿಜಯಪುರ |
| 2 | ವಿಜೆಪಿ-0297 | ಧರೇಶ್ವರ ಸೌಹಾರ್ದ ಸಹಕಾರಿ ನಿ., | ವಿಜಯಪುರ | ವಿಜಯಪುರ |
| 3 | ಬಿಜಿಎಂ-0156 | ಶ್ರೀ ಭಾಗ್ಯಲಕ್ಷ್ಮೀ ಸೌಹಾರ್ದ ವಿವಿದೋದ್ದೇಶಗಳ ಸಹಕಾರಿ ನಿ., | ಚಿಕ್ಕೋಡಿ | ಬೆಳಗಾವಿ |
| 4 | ಬಿಜಿಎಂ-0528 | ಶ್ರೀ ಬಾಲಾಜಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., | ಹುಕ್ಕೇರಿ | ಬೆಳಗಾವಿ |
| 5 | ಬಿಜಿಎಂ-0879 | ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., | ಯರಗಟ್ಟಿ | ಬೆಳಗಾವಿ |
| 6 | ಬಿಜಿಕೆ-0132 | ಸಹನಾ ಲೈಫ್‌ಸ್ಟೈಲ್ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., | ಮುಧೋಳ | ಬಾಗಲಕೋಟ |
| 7 | ಜಿಡಿಜಿ-0003 | ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., | ಗದಗ | ಗದಗ |

| | | | | |
|---|---|---|---|---|
| 8 | ಎಚ್‌ವಿಆರ್–0055 | ಶ್ರೀ ಚನ್ನಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., | ರಾಣೇಬೆನ್ನೂರು | ಹಾವೇರಿ |
| 9 | ಕೆಡಬ್ಲ್ಯುಆರ್–0049 | ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋಆಪರೇಟಿವ್ ಲಿ., | ಕಾರವಾರ | ಉತ್ತರ ಕನ್ನಡ |
| 10 | ಕೆಡಬ್ಲ್ಯುಆರ್–0058 | ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., | ಯಲ್ಲಾಪುರ | ಉತ್ತರ ಕನ್ನಡ |
| 11 | ಕೆಡಬ್ಲ್ಯುಆರ್–0096 | ಕೃಷಿ ಕಾರ್ಮಿಕರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., | ಕುಮಟಾ | ಉತ್ತರ ಕನ್ನಡ |
| 12 | ಕೆಡಬ್ಲ್ಯುಆರ್–0264 | ಸೈಂಟ್ ಜಾನ್ ಪೌಲ್ 11 ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., | ಕಾರವಾರ | ಉತ್ತರ ಕನ್ನಡ |
| 13 | ಕೆಡಬ್ಲ್ಯುಆರ್–0274 | ವೆಲ್‌ಫೇರ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., | ಭಟ್ಕಳ | ಉತ್ತರ ಕನ್ನಡ |
| 14 | ಡಿಡಬ್ಲ್ಯುಡಿ–0100 | ಉತ್ತರ ಕರ್ನಾಟಕ ಸೌಹಾರ್ದ ಸಹಕಾರಿ ನಿ., | ಧಾರವಾಡ | ಧಾರವಾಡ |
| 15 | ಎಸ್‌ಎಂಜಿ–0077 | ಮಲೆನಾಡು ವಿಶ್ವಕರ್ಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., | ತೀರ್ಥಹಳ್ಳಿ | ಶಿವಮೊಗ್ಗ |
| 16 | ಸಿಎಂಎನ್–0037 | ಚಿತ್ತಾರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., | ಚಾಮರಾಜನಗರ | ಚಾಮರಾಜನಗರ |
| 17 | ಸಿಕೆಎಂ–0028 | ಬಾಳೆಹೊನ್ನೂರು ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ನರಸಿಂಹರಾಜಪುರ | ಚಿಕ್ಕಮಗಳೂರು |
| 18 | ಯುಡಿಪಿ–0068 | ಶ್ರೀ ಮಹಾಲಿಂಗೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಕುಂದಾಪುರ | ಉಡುಪಿ |
| 19 | ಯುಡಿಪಿ–0077 | ಕೊಂಕಣ್ ಕ್ಯಾಥೊಲಿಕ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಕಾರ್ಕಳ | ಉಡುಪಿ |
| 20 | ಯುಡಿಪಿ–0082 | ಪಂದುಬೆಟ್ಟು ಸೌಹಾರ್ದ ಸಹಕಾರಿ ಸಂಘ ನಿ., | ಉಡುಪಿ | ಉಡುಪಿ |
| 21 | ಯುಡಿಪಿ–0085 | ಸಂಹಿತಾ ಸೌಹಾರ್ದ ಸಹಕಾರಿ ನಿ., | ಉಡುಪಿ | ಉಡುಪಿ |
| 22 | ಎಂಎನ್‌ಜಿ–0027 | ಶ್ರೀ ಭುವನೇಂದ್ರ ಸ್ವಾಮೀಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಮಂಗಳೂರು | ದಕ್ಷಿಣ ಕನ್ನಡ |
| 23 | ಎಂಎನ್‌ಜಿ–0069 | ಅನುಗ್ರಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಪುತ್ತೂರು | ದಕ್ಷಿಣ ಕನ್ನಡ |
| 24 | ವಿಜೆಎನ್–0121 | ಕೊಟ್ಟೂರು ತಾಲ್ಲೂಕು ಸೌಹಾರ್ದ ಸಹಕಾರಿ ನಿ., | ಕೊಟ್ಟೂರು | ವಿಜಯನಗರ |
| 25 | ಬಿಇಎಲ್–0261 | ಬಳ್ಳಾರಿ ಮರ್ಚಂಟ್ಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., | ಬಳ್ಳಾರಿ | ಬಳ್ಳಾರಿ |
| 26 | ಬಿಇಎಲ್–0275 | ಬಾಬು ಸೌಹಾರ್ದ ಸಹಕಾರಿ ಸಂಘ ನಿ., | ಕುರುಗೋಡು | ಬಳ್ಳಾರಿ |
| 27 | ಬಿಇಎಲ್–0298 | ಸಿನರ್ಜಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., | ಬಳ್ಳಾರಿ | ಬಳ್ಳಾರಿ |
| 28 | ಕೆಪಿಎಲ್–0304 | ಕೃಷಿಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ., | ಯಲಬುರ್ಗಾ | ಕೊಪ್ಪಳ |
| 29 | ಸಿಟಿಜಿ–0004 | ನಿಸರ್ಗ ಸ್ವ–ಶಕ್ತಿ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ., | ಚಿತ್ರದುರ್ಗ | ಚಿತ್ರದುರ್ಗ |

ನಂತರ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ವಿಧ್ಯುಕ್ತ ಕಾರ್ಯಕಲಾಪಗಳು ಮಾನ್ಯ ಅಧ್ಯಕ್ಷರ ಭಾಷಣದೊಂದಿಗೆ ಪ್ರಾರಂಭವಾಯಿತು. ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು/ ಉಪಾಧ್ಯಕ್ಷರು/ ನಿರ್ದೇಶಕರುಗಳಿಗೆ, ಸಂಯುಕ್ತ ಸಹಕಾರಿಯ ಮಾನ್ಯ

ನಿರ್ದೇಶಕರುಗಳಿಗೆ, ಪತ್ರಿಕಾ ಮಿತ್ರರಿಗೆ ಮತ್ತೊಮ್ಮೆ ಸ್ವಾಗತವನ್ನು ಕೋರಿದರು. ನಂತರ ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಹಾಗೂ ಇಲ್ಲಿಯವರೆಗಿನ ಕಾರ್ಯಚಟುವಟಿಕೆಗಳ ಮತ್ತು ಮುಂದಿನ ಕಾರ್ಯ ಯೋಜನೆಗಳ ಕುರಿತು ವಿವರವಾದ ಭಾಷಣವನ್ನು ಮಾಡಿದರು. ಮಾನ್ಯ ಅಧ್ಯಕ್ಷರ ಭಾಷಣದ ಪ್ರತಿಯನ್ನು ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರಿಗೆ ಲಿಖಿತ ರೂಪದಲ್ಲಿ ಒದಗಿಸಲಾಗಿತ್ತು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಉಪಸ್ಥಿತರಿರುವ ಗೌರವಾನ್ವಿತ ಮಾನ್ಯ ಸದಸ್ಯರುಗಳ ಅನುಮತಿಯನ್ನು ಕೋರುತ್ತಾ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸಿನನ್ವಯ ವಿಷಯಗಳನ್ನು ಮಂಡಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯನ್ನು ಕೋರಿದರು. ಇದಕ್ಕೆ ಸಭೆಯು ಅನುಮತಿ ನೀಡಿತು. ನಂತರ ನೋಟೀಸಿನಲ್ಲಿ ನಮೂದಿಸಲಾಗಿರುವ ಅಜೆಂಡಾವಾರು ವಿಷಯಗಳ ಚರ್ಚೆಗಳು ಜರುಗಿತು.

ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸಿನಲ್ಲಿ ನಮೂದಿಸಲಾಗಿರುವ ಅಜೆಂಡಾವಾರು ವಿಷಯಗಳ ಚರ್ಚೆಯು ಈ ಕೆಳಗಿನಂತಿದೆ.

**ನಡವಳಿ ಮತ್ತು ನಿರ್ಣಯಗಳು :**

**ವಿಷಯ 01 : 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 08.09.2026ರಂದು ನಡೆಯಲಿರುವ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6ಸಿ (2) (i) ರ ಪ್ರಾವಧಾನದಂತೆ ಮತ್ತು ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 13 (2) ರಂತೆ ದಿನಾಂಕ 17.08.2026ರಂದು ನೋಂದಾಯಿತ ಪಾರ್ಸೆಲ್ ಅಂಚೆ ಮೂಲಕ ಮತ್ತು ಮಿಂಚಂಚೆ (E-Mail) ಮೂಲಕ ಕಳುಹಿಸಿದ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಲು ಸಭೆಯ ಅನುಮತಿಯನ್ನು ಕೋರಿದರು. ಹಾಗೆಯೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6ಸಿ (2) (ii) ರಂತೆ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ಕುರಿತು ಸಂಕ್ಷಿಪ್ತ ಪ್ರಕಟಣೆಯನ್ನು ದಿನಾಂಕ 17.08.2026ರಂದು ವಿಜಯ ವಾಣಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ನೋಟೀಸಿನ ಪ್ರತಿಯನ್ನು ಆಗಸ್ಟ್ 2026ರ ಮಾಹೆಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಮತ್ತು ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ (www.souharda.coop) ಪ್ರಕಟಿಸಲಾಗಿದೆ. ಹೆಚ್ಚುವರಿಯಾಗಿ, ನೋಟೀಸು ಹಾಗೂ ಟಿಪ್ಪಣಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ) ರಂತೆ ರಾಜ್ಯದ ಅರ್ಹ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮುಖಾಂತರ ಕಳುಹಿಸಲಾಗಿದೆ ಎಂದು ತಿಳಿಸಿದರು.

ನಂತರ ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೋಂದಾಯಿತ ಪಾರ್ಸೆಲ್ ಅಂಚೆ ಮೂಲಕ ಕಳುಹಿಸಲಾಗಿದ್ದ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ಪುಸ್ತಕಗಳಲ್ಲಿ ಸೌಹಾರ್ದ ಸಹಕಾರಿಯು ಸದರಿ ವಿಳಾಸದಲಿಲ್ಲದ ಕಾರಣ, ಸಂಪೂರ್ಣ ವಿಳಾಸವಿಲ್ಲದ ಕಾರಣವೂ ಸೇರಿದಂತೆ ಇತರೆ ಕಾರಣದಿಂದಾಗಿ 166 ಪುಸ್ತಕಗಳು ಸಂಯುಕ್ತ ಸಹಕಾರಿಗೆ ಹಿಂತಿರುಗಿ ಬಂದಿರುತ್ತದೆ. ಸದರಿ ಪುಸ್ತಕಗಳು ಪ್ರಸ್ತುತ ಸಹಾಯ ಕೇಂದ್ರದಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಲು ಸರ್ವಾನುಮತದಿಂದ ಒಪ್ಪಿತು.

**ನಿರ್ಣಯ** : ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6ಸಿ (2) (i) ರ ಪ್ರಾವಧಾನದಂತೆ ಮತ್ತು ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 13 (2) ರಂತೆ ದಿನಾಂಕ 17.08.2026ರಂದು ನೋಂದಾಯಿತ ಪಾರ್ಸೆಲ್ ಅಂಚೆ ಮೂಲಕ ಮತ್ತು ಮಿಂಚಂಚೆ (E-Mail) ಮೂಲಕ ಕಳುಹಿಸಿದ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಹಾಗೆಯೇ, ಕರ್ನಾಟಕ ಸೌಹಾರ್ದ ಸಹಕಾರಿ

ನಿಯಮಗಳು 2004ರ ನಿಯಮ ಸಂಖ್ಯೆ 6ಸಿ (2) (ii) ರಂತೆ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ಕುರಿತು ಸಂಕ್ಷಿಪ್ತ ಪ್ರಕಟಣೆಯನ್ನು ದಿನಾಂಕ 17.08.2026ರಂದು ವಿಜಯ ವಾಣಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವುದಕ್ಕೆ ಹಾಗೂ ನೋಟೀಸಿನ ಪ್ರತಿಯನ್ನು ಆಗಸ್ಟ್ 2026ರ ಮಾಹೆಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಮತ್ತು ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ (www.souharda.coop) ಪ್ರಕಟಿಸಿರುವುದಕ್ಕೆ ಮತ್ತು ಹೆಚ್ಚುವರಿಯಾಗಿ, ನೋಟೀಸು ಹಾಗೂ ಟಿಪ್ಪಣಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ) ರಂತೆ ರಾಜ್ಯದ ಅರ್ಹ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮುಖಾಂತರ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಕಳುಹಿಸಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 02 : 24ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 22 ಆಗಸ್ಟ್ 2025, ಶುಕ್ರವಾರದಂದು ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ.4, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ನಡೆದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು 24ನೇ ವಾರ್ಷಿಕ ಸಾಮಾನ್ಯ ಸಭೆಯ ವಿಷಯ 17ರ ನಿರ್ಣಯದಂತೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ದಿನಾಂಕ 20 ಸೆಪ್ಟೆಂಬರ್ 2025ರಂದು ಸದಸ್ಯ ಸಹಕಾರಿಗಳಿಗೆ ಕಳುಹಿಸಲಾಗಿತ್ತು. ಈ ನಡವಳಿ ಮತ್ತು ನಿರ್ಣಯಗಳ ಕುರಿತು ಸೌಹಾರ್ದ ಸಹಕಾರಿಗಳಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಯುಕ್ತ ಸಹಕಾರಿಗೆ ಸಲ್ಲಿಸಲು 1 ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅದರಂತೆ, ಸಂಯುಕ್ತ ಸಹಕಾರಿಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿರುವುದಿಲ್ಲ. ದಿನಾಂಕ 22 ಆಗಸ್ಟ್ 2025ರಂದು ನಡೆದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಸಭೆಗೆ ನೀಡಲಾಗಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ದಿನಾಂಕ 22 ಆಗಸ್ಟ್ 2025ರಂದು ನಡೆದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ದಿನಾಂಕ 20 ಸೆಪ್ಟೆಂಬರ್ 2025ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗಿರುವ ಮಾಹಿತಿಯನ್ನು ಮತ್ತು ಪ್ರಸ್ತುತ ಸಭೆಗೆ ಮಂಡಿಸಿರುವ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ದಿನಾಂಕ 22 ಆಗಸ್ಟ್ 2025ರಂದು ನಡೆದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ದಿನಾಂಕ 20 ಸೆಪ್ಟೆಂಬರ್ 2025ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗಿರುವ ಮಾಹಿತಿಯನ್ನು ಮತ್ತು ಪ್ರಸ್ತುತ ಸಭೆಗೆ ಮಂಡಿಸಿರುವ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 03 : 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ವಿವರವಾದ ವಾರ್ಷಿಕ ವರದಿಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಈಗಾಗಲೇ 25ನೇ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಿದ್ದಾರೆ.

ಹಾಗೆಯೇ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರಗಳನ್ನು ಛಾಯಾಚಿತ್ರದೊಂದಿಗೆ ಸಭೆಗೆ ನೀಡಿದ್ದು, ಇದನ್ನು ಪರಿಶೀಲಿಸಿ, ಅನುಮೋದಿಸಲು ಸಭೆಗೆ ಕೋರಿದರು.

ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಗಳು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ–0011)**

**ಪ್ರಶ್ನೆ 01 : ಪು.ಸ-ನಂ-28 ವಿಷಯ-ನಮೂದಿಸಿರುವ ಸಹಕಾರಿಯ ನೋಂದಣಿಗಳಲ್ಲಿ 850 ಸೌಹಾರ್ದಗಳು ಸ್ಥಗಿತಗೊಂಡಿರುವುದಾಗಿ ತಿಳಿಸಿದ್ದೀರಿ. ಇದರ ಪ್ರಮಾಣವು ಬಹಳ ಹೆಚ್ಚು ಎಂದು ಅನಿಸುತ್ತದೆ. ಈ ಕುರಿತು ಸಾಧ್ಯವಾದಷ್ಟು ಕಡಿಮೆ ಮಾಡಲು ಕ್ರಮ ಕೈಗೊಳ್ಳುವುದು.**

**ಉತ್ತರ :** ಸಂಯುಕ್ತ ಸಹಕಾರಿಯಿಂದ ಸದರಿ ಸಹಕಾರಿಗಳಿಗೆ ನಿರಂತರವಾಗಿ ತರಬೇತಿ ಹಾಗೂ ಅಗತ್ಯ ಮಾರ್ಗದರ್ಶನವನ್ನು ನೀಡಲಾಗುತ್ತಿದೆ. ಆದಾಗ್ಯೂ, ಸದರಿ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಂದ ಅಗತ್ಯ ಮಟ್ಟದ ಆಸಕ್ತಿ ಹಾಗೂ ಸಕ್ರಿಯ ಸಹಕಾರ ವ್ಯಕ್ತವಾಗದ ಹಿನ್ನೆಲೆಯಲ್ಲಿ, ಸದರಿ ಸಹಕಾರಿಗಳನ್ನು ಕಾರ್ಯಸ್ಥಗಿತ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ.

**ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ. (ಕೆಡಬ್ಲ್ಯುಆರ್–0016)**

**ಪ್ರಶ್ನೆ 01 : ಸನ್ 2025-26ರ ವರದಿ ಬಗ್ಗೆ ಚರ್ಚಿಸುವುದು.**

**ಉತ್ತರ :** ಸನ್ 2025-26ರ ವರದಿ ವಿಷಯವನ್ನು ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಮಂಡಿಸಿದೆ.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**2025-26ನೇ ಸಾಲಿನ ಸಂಯುಕ್ತ ಸಹಕಾರಿಯ ವಾರ್ಷಿಕ ವರದಿ**

**ಆಡಳಿತಾತ್ಮಕ ಕಾರ್ಯಚಟುವಟಿಕೆಗಳು**

- **ಹೊಸ ನೋಂದಣಿ** : 2025-26ನೇ ಸಾಲಿನಲ್ಲಿ ಹೊಸದಾಗಿ 271 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ. ಈ ಎಲ್ಲಾ ಸೌಹಾರ್ದ ಸಹಕಾರಿಗಳ ಮಾಹಿತಿಯನ್ನು ದಾಖಲಿಸಿಕೊಳ್ಳುವುದರ ಜೊತೆಗೆ ಸದರಿ ಸಹಕಾರಿಗಳಿಗೆ ಸ್ವಾಗತ ಪತ್ರವನ್ನು ಕಳುಹಿಸುವುದು ಹಾಗೂ ಸಂಯುಕ್ತ ಸಹಕಾರಿಯ ಸಂಬಂಧಪಟ್ಟ ಪ್ರಾಂತೀಯ ಕಛೇರಿಯ ವಿಳಾಸ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ವಿವರ, ಜಿಲ್ಲಾ ಸಂಪರ್ಕ ಕಛೇರಿಯ ವಿಳಾಸ, ಹಾಗೂ ಮಾರ್ಗದರ್ಶಕ ಕೈಪಿಡಿಯನ್ನು ಒದಗಿಸುವ ಕಾರ್ಯವನ್ನು ಮಾಡಲಾಗಿದೆ.

- **ಸೌಹಾರ್ದ ಸಹಕಾರಿಗಳ ನೋಂದಣಿ ವಿವರ :** ದಿನಾಂಕ 31.03.2026ರಂತೆ ಒಟ್ಟು 6747 ಸೌಹಾರ್ದ ಸಹಕಾರಿಗಳು ನೋಂದಣಿಗೊಂಡಿರುತ್ತವೆ, ಅವುಗಳಲ್ಲಿ 5017 ಸೌಹಾರ್ದ ಸಹಕಾರಿಗಳು ಕಾರ್ಯನಿರತವಾಗಿರುತ್ತವೆ. 850 ಸೌಹಾರ್ದ ಸಹಕಾರಿಗಳು ಕಾರ್ಯಸ್ಥಗಿತಗೊಳಿಸಿರುತ್ತವೆ. 396 ಸೌಹಾರ್ದ ಸಹಕಾರಿಗಳು ಸಮಾಪನೆಗೆ ಶಿಫಾರಸ್ಸುಗೊಂಡಿರುತ್ತವೆ. 484 ಸೌಹಾರ್ದ ಸಹಕಾರಿಗಳ ಸಮಾಪನೆಗೆ ಆದೇಶವಾಗಿರುತ್ತವೆ. 2025-26ನೇ ಸಾಲಿನಲ್ಲಿ ಹೊಸದಾಗಿ 271 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ.

- **ಸಮಾಪನೆ, ನೋಂದಣಿ ರದ್ಧತಿ, ಪುನಶ್ಚೇತನ ಮತ್ತು ಸಮಾಪನಾಧಿಕಾರಿಗಳ ನೇಮಕಾತಿ :** 2025-26ನೇ ಸಾಲಿನಲ್ಲಿ 209 ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 484 ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿಗಳು ನೇಮಕಗೊಂಡಿದ್ದಾರೆ. ಇದರಲ್ಲಿ ಸಹಕಾರ ಇಲಾಖೆಯ 55 ಅಧಿಕಾರಿಗಳು 85 ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಂಯುಕ್ತ ಸಹಕಾರಿಯ 57 ಅಧಿಕಾರಿಗಳು ಒಟ್ಟು 399 ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2025-26ನೇ ಸಾಲಿನಲ್ಲಿ 11 ಸೌಹಾರ್ದ ಸಹಕಾರಿಗಳು ಸಮಾಪನೆ ಪಟ್ಟಿಯಿಂದ ಪುನಶ್ಚೇತನಗೊಂಡಿವೆ. 4 ಸೌಹಾರ್ದ ಸಹಕಾರಿಗಳು ಕಾರ್ಯಸ್ಥಗಿತ ಪಟ್ಟಿಯಿಂದ

ಪುನಶ್ಚೇತನಗೊಂಡಿವೆ. 2025–26ನೇ ಸಾಲಿನಲ್ಲಿ 15 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದುಗೊಂಡಿದೆ. 3 ಸೌಹಾರ್ದ ಸಹಕಾರಿಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ಪರಿವರ್ತನೆಗೊಂಡಿವೆ. ಇನ್ನೂ 2 ಸೌಹಾರ್ದ ಸಹಕಾರಿಗಳು ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಗೆ ಪರಿವರ್ತನೆಗೊಂಡಿವೆ. ಒಟ್ಟಾರೆ 20 ಸೌಹಾರ್ದ ಸಹಕಾರಿಗಳನ್ನು ಒಳಗೊಂಡಂತೆ, ರಾಜ್ಯದಲ್ಲಿ 145 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದುಗೊಂಡಿದೆ.

- ಸೌಹಾರ್ದ ಸಹಕಾರಿಗಳ ಮಾಹಿತಿಗಳ ಇಂದೀಕರಣ ಕಾರ್ಯವನ್ನು ನಿರ್ವಹಿಸಲಾಗಿದೆ.
- **ಹೆಸರು ಸ್ಪಷ್ಟೀಕರಣ** : 2025–26ನೇ ಸಾಲಿನಲ್ಲಿ ಹೆಸರಿನ ಸ್ಪಷ್ಟೀಕರಣದ ಕುರಿತು 499 ಪತ್ರಗಳನ್ನು ಕಳುಹಿಸಲಾಗಿದೆ.
- **ಚುನಾವಣೆ ಮಾಹಿತಿ ನಿರ್ವಹಣೆ** : ಚುನಾವಣೆ ಕುರಿತು ಸದಸ್ಯ ಸಹಕಾರಿಗಳು ಕಳುಹಿಸಿದ ಪತ್ರಗಳಿಗೆ ಅಗತ್ಯ ಮಾಹಿತಿ ಮಾರ್ಗದರ್ಶನ ನೀಡಲಾಗುತ್ತಿದೆ. ನಿರ್ವಚನಾಧಿಕಾರಿಗಳು ನೇಮಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಚುನಾವಣೆಗಳು ಸಕಾಲಕ್ಕೆ ಜರುಗುತಲಿವೆ.
- **ವಿವಿಧ ಇಲಾಖೆಯೊಂದಿಗೆ ಸಮನ್ವಯ** : ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆ, ಸಹಕಾರ ಚುನಾವಣಾ ಪ್ರಾಧಿಕಾರ, ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ನಿರ್ವಹಣೆಗಾಗಿ ಸಕ್ಷಮ ಪ್ರಾಧಿಕಾರ ನೇಮಕ ಮಾಡುವ ಕಂದಾಯ ಇಲಾಖೆ, ಸಿಐಡಿ ಸೇರಿದಂತೆ ಇತರೇ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಅಗತ್ಯ ಮಾಹಿತಿಯನ್ನು ಒದಗಿಸುವ ಹಾಗೂ ಪಡೆಯುವ ಕಾರ್ಯವನ್ನು ನಡೆಸಲಾಗುತ್ತಿದೆ.
- **ಸೌಹಾರ್ದ ಸಹಕಾರಿಗಳ ಸಿಬ್ಬಂದಿ ನೇಮಕಾತಿ ಸಮಿತಿಗೆ ಪ್ರತಿನಿಧಿ ನೇಮಕ** : 2025–26ನೇ ಸಾಲಿನಲ್ಲಿ 63 ಸೌಹಾರ್ದ ಸಹಕಾರಿಗಳ ನೇಮಕಾತಿ ಸಮಿತಿಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.
- **ಟೆಂಡರ್ ಪ್ರಕ್ರಿಯೆಗಳ ನಿರ್ವಹಣೆ** : ಒಂದು ಲಕ್ಷಕ್ಕಿಂತ ಹೆಚ್ಚಿನ ವೆಚ್ಚ ಉಂಟಾಗಬಹುದಾದ ಕಾರ್ಯಗಳು/ಖರೀದಿಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಟೆಂಡರ್ ಕರೆಯುವ ಮೂಲಕ ನಡೆಸಲಾಗುತ್ತಿದ್ದು, 2025–26ನೇ ಸಾಲಿನಲ್ಲಿ ಪ್ರಮುಖವಾಗಿ ಮೈಸೂರು ಪ್ರಾಂತೀಯ ಕಛೇರಿ ಕಟ್ಟಡ ನಿರ್ಮಾಣ, ಸಾಮಾನ್ಯ ಸಭೆಯ ಪುಸ್ತಕ ಮುದ್ರಣ, ಡೈರಿ ಮತ್ತು ಕ್ಯಾಲೆಂಡರ್ ಮುದ್ರಣ ಕಾರ್ಯ, ಬೆಳಗಾವಿ ಕಛೇರಿಗೆ ಸೋಲಾರ ಅಳವಡಿಕೆ, ಸಾಫ್ಟ್‌ವೇರ್‌ಗೆ ಅಗತ್ಯ cloud service ಕುರಿತು, ಸ್ವಾಭಿಮಾನಿ ಮುದ್ರಣ, ಸ್ಟೇಷನರಿ ಪೂರೈಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗಳನ್ನು ನಿರ್ವಹಿಸಲಾಗಿದೆ.
- **ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ, ನಡವಳಿ, ವರ್ಷಾಂತ್ಯದ ಆರ್ಥಿಕ ಮಾಹಿತಿ, ಕಲಂ 34ರ ಸಂಗ್ರಹ ಮಾಹಿತಿ** : 2025–26ನೇ ಸಾಲಿನಲ್ಲಿ ಸೌಹಾರ್ದ ಸಹಕಾರಿಗಳಿಂದ ಸ್ವೀಕೃತಿಗೊಂಡ ಸಾಮಾನ್ಯ ಸಭೆಯ ನಡವಳಿ ಒಟ್ಟು 2518, ವರ್ಷಾಂತ್ಯದ ಆರ್ಥಿಕ ಮಾಹಿತಿಗಳು ಒಟ್ಟು 1679, ಕಲಂ 34ರ ಮಾಹಿತಿ ಒಟ್ಟು 2309 ಮಾಹಿತಿಗಳು ಸಂಬಂಧಪಟ್ಟ ಪ್ರಾಂತೀಯ ಕಛೇರಿಗಳಲ್ಲಿ ಸ್ವೀಕೃತಿಗೊಂಡಿರುತ್ತದೆ.
- **ಆವಕ – ಜಾವಕ ನಿರ್ವಹಣೆ** : 2025–26ನೇ ಸಾಲಿನಲ್ಲಿ ಕೇಂದ್ರ ಹಾಗೂ ನಾಲ್ಕು ಪ್ರಾಂತೀಯ ಕಛೇರಿಗಳಿಗೆ ಒಟ್ಟು 15,371 ಆವಕ ಪತ್ರ/ದಾಖಲಾತಿಗಳು ಸ್ವೀಕೃತಗೊಂಡು, ಸಂಬಂಧಿತ ವಿಭಾಗಗಳಿಗೆ ರವಾನಿಸಲಾಗಿದೆ. ಸಂಯುಕ್ತ ಸಹಕಾರಿಯಿಂದ 18,306 ಜಾವಕ ಪತ್ರಗಳನ್ನು ನೋಂದಾಯಿಸಿ ಅಂಚೆ/ಕೋರಿಯರ್ ಮೂಲಕ ಕಳುಹಿಸಲಾಗಿದೆ. ಒಂದೇ ರೀತಿಯ ಪತ್ರ/ದಾಖಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವೀಕೃತ ಅಥವಾ ರವಾನೆಯಾದ ಸಂದರ್ಭಗಳಲ್ಲಿ, ನಿರ್ವಹಣಾ ಸೌಲಭ್ಯಕ್ಕಾಗಿ ಒಂದೇ ಆವಕ/ಜಾವಕ ಸಂಖ್ಯೆಯನ್ನು ನೀಡಲಾಗಿದೆ.

**ಇ–ಸ್ಟ್ಯಾಂಪಿಂಗ್ ವಿಭಾಗದ ಕಾರ್ಯಚಟುವಟಿಕೆಗಳು**

- **ಇ–ಸ್ಟ್ಯಾಂಪಿಂಗ್ ಮಾಹಿತಿ** : 2025–26ರ ವರ್ಷಾಂತ್ಯದಂತೆ ರಾಜ್ಯದ ಎಲ್ಲಾ ಜಿಲ್ಲೆಗಳು ಸೇರಿದಂತೆ ಒಟ್ಟು 1760 ಇ–ಸ್ಟ್ಯಾಂಪಿಂಗ್ ಕೇಂದ್ರಗಳು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. 2025–26ನೇ ಸಾಲಿನಲ್ಲಿ ಒಟ್ಟು 81 ಇ–ಸ್ಟ್ಯಾಂಪಿಂಗ್ ಕೇಂದ್ರಗಳು ಹೊಸದಾಗಿ ವ್ಯವಹಾರವನ್ನು ಪ್ರಾರಂಭಿಸಿದ್ದು, 25 ಎಸಿಸಿಗಳು ಸ್ವ–ಇಚ್ಛೆಯಿಂದ ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಸ್ಥಗಿತಗೊಳಿಸಿರುತ್ತವೆ. 2025–26ನೇ ಸಾಲಿನಲ್ಲಿ ರೂ.585,77,71,743/–ಗಳಷ್ಟು ವ್ಯವಹಾರ ನಡೆದಿರುತ್ತದೆ. 2025–26ನೇ

ಸಾಲಿನಲ್ಲಿ ಗರಿಷ್ಠ ಮೌಲ್ಯ ರೂ.2 ಕೋಟಿ ಮೊತ್ತದ ಇ-ಸ್ಟ್ಯಾಂಪ್ ವಿತರಿಸಿದ್ದು, ಸಹಕಾರ ವರ್ಷದಲ್ಲಿ 65.25 ಲಕ್ಷ ಇ-ಸ್ಟ್ಯಾಂಪಿಂಗ್ ಪೇಪರ್ ನೀಡಲಾಗಿದೆ.

- **ಸಿಎಸ್‌ಸಿ ಕೇಂದ್ರಗಳ ಕಾರ್ಯಚಟುವಟಿಕೆ ವರದಿ :** 2025-26ರ ವರ್ಷಾಂತ್ಯದಂತೆ ರಾಜ್ಯದ ಎಲ್ಲೆಡೆಯಿಂದ ಸಿಎಸ್‌ಸಿ ಕೇಂದ್ರ ತೆರೆಯಲು ಒಟ್ಟು 243 ಅರ್ಜಿಗಳು ಬಂದಿರುತ್ತವೆ. ಅವುಗಳ ಪೈಕಿ 182 ಅರ್ಜಿಗಳು ವೈಟ್‌ಲಿಸ್ಟ್ ಆಗಿರುತ್ತವೆ. ವೈಟ್‌ಲಿಸ್ಟ್ ಆದ 135 ಸಹಕಾರಿಗಳಿಗೆ ಐಡಿ ರಚನೆಯಾಗಿರುತ್ತದೆ. ಸಿಎಸ್‌ಸಿ ಸಿಬ್ಬಂದಿಗಳ ಸಹಯೋಗದಲ್ಲಿ ಅರ್ಜಿದಾರ ಸೌಹಾರ್ದ ಸಹಕಾರಿಗಳ ಸೂಚಿತ ಸಿಬ್ಬಂದಿಗಳಿಗೆ 4 ಹಂತದಲ್ಲಿ ಆನ್‌ಲೈನ್ ತರಬೇತಿ ಒದಗಿಸಲಾಗಿದೆ. ಬೆಂಗಳೂರು ಕೇಂದ್ರ ಕಛೇರಿಯಲ್ಲಿ ಹಾಗೂ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಐಡಿ ರಚನೆಯಾದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ 2026ರ ಫೆಬ್ರವರಿ ಮಾಹೆಯಲ್ಲಿ ತರಬೇತಿ ಒದಗಿಸಲಾಗಿದೆ.
  ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ವತಿಯಿಂದ ದಿನಾಂಕ 23.06.2025ರಂದು ರಾಜ್ಯ ಮಟ್ಟದ ಸಿ.ಎಸ್.ಸಿ. ಕೇಂದ್ರಗಳ ಉದ್ಘಾಟನಾ ಕಾರ್ಯಕ್ರಮವನ್ನು ಉಡುಪಿ ನಗರದ ಡಯಾನ ಹೋಟೆಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 7 ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಿ.ಎಸ್.ಸಿ. ಕೇಂದ್ರ ಲಾಗಿನ್ ಕೀಗಳನ್ನು ಸಾಂಕೇತಿಕವಾಗಿ ನೀಡಲಾಯಿತು. ಸದರಿ ಕಾರ್ಯಕ್ರಮಕ್ಕೆ ಜಿಲ್ಲೆಯ 190 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

### ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಪ್ರಕರಣಗಳ ವಿವರ

- 2025-26ನೇ ಸಾಲಿನಲ್ಲಿ ಬೆಂಗಳೂರು ಮತ್ತು ಬೆಳಗಾವಿ ಪೀಠಗಳಲ್ಲಿ ಒಟ್ಟು ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ 3778 ಹಾಗೂ 2024-25ನೇ ಸಾಲಿನಿಂದ ಮುಂದುವರೆದಿದ್ದ ದಾವಾ ಪ್ರಕರಣಗಳ ಸಂಖ್ಯೆ 2921 ಒಟ್ಟು 6699 ದಾವಾ ಪ್ರಕರಣಗಳು ಸುನಾವಣೆ ಪ್ರಕ್ರಿಯೆಯಲ್ಲಿದ್ದವು. ಸದರಿ ಪ್ರಕರಣಗಳಲ್ಲಿ 4413 ದಾವಾ ಪ್ರಕರಣಗಳು 2025-26ನೇ ಸಾಲಿನಲ್ಲಿ ಇತ್ಯರ್ಥಗೊಂಡಿರುತ್ತವೆ. ಪ್ರಸ್ತುತ 2026-27ನೇ ಸಾಲಿಗೆ 2286 ದಾವಾ ಪ್ರಕರಣಗಳ ಸುನಾವಣೆ ಪ್ರಕ್ರಿಯೆಯಲ್ಲಿ ಬಾಕಿ ಇರುತ್ತವೆ.
- 2025-26ನೇ ಸಾಲಿನಲ್ಲಿ ಬೆಂಗಳೂರು ಮತ್ತು ಬೆಳಗಾವಿ ಅಮಲ್ಜಾರಿ ಕಛೇರಿಗಳಲ್ಲಿ ಒಟ್ಟು ದಾಖಲಾದ ಪ್ರಕರಣಗಳ ಸಂಖ್ಯೆ 1020 ಹಾಗೂ 2024-25ನೇ ಸಾಲಿನಿಂದ ಮುಂದುವರೆದಿದ್ದ ಪ್ರಕರಣಗಳ ಸಂಖ್ಯೆ 9113 ಸೇರಿ ಒಟ್ಟು 10,133 ಪ್ರಕರಣಗಳು ಜಾರಿಯಲ್ಲಿದ್ದವು. ಸದರಿ ಪ್ರಕರಣಗಳಲ್ಲಿ 299 ಇತ್ಯರ್ಥಗೊಂಡಿರುತ್ತವೆ. ಪ್ರಸ್ತುತ 2026-27ನೇ ಸಾಲಿಗೆ 9834 ಪ್ರಕರಣಗಳು ಬಾಕಿ ಇರುತ್ತವೆ.

### ಶಾಸನಾತ್ಮಕ ಕಾರ್ಯಚಟುವಟಿಕೆಗಳು

| ಕ್ರ.ಸಂ | ವಿಷಯ | ಬೆಂಗಳೂರು | ಮೈಸೂರು | ಬೆಳಗಾವಿ | ಕಲಬುರಗಿ | ಒಟ್ಟು |
|---|---|---|---|---|---|---|
| 1 | ಪ್ರಾಂತೀಯ ಕಛೇರಿಯಿಂದ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದ ವಿವರ | 767 | 536 | 1705 | 1024 | **4032** |
| 2 | ಪ್ರಾಂತೀಯ ಕಛೇರಿಯಿಂದ ಕಾನೂನು ನೆರವು ಮತ್ತು ಸಲಹೆ ನೀಡಿದ ವಿವರ | 08 | 07 | 61 | 103 | **179** |
| 3 | ಪ್ರಾಂತೀಯ ಕಛೇರಿಯಿಂದ ಹೊರಡಿಸಿದ ಪರಿವೀಕ್ಷಣಾ ಆದೇಶಗಳ ವಿವರ | 43 | 56 | 157 | 03 | **259** |
| 4 | ಕೇಂದ್ರ ಕಛೇರಿಯಿಂದ ಹೊರಡಿಸಿದ ಪರಿವೀಕ್ಷಣಾ ಆದೇಶಗಳ ವಿವರ | 12 | 06 | 26 | 05 | **49** |
| 5 | ವಿಶೇಷಾಧಿಕಾರಿ ನೇಮಕವಾದ ವಿವರ | 22 | 04 | 30 | 07 | **63** |
| 6 | ಶಾಖಾನುಮತಿ ನೀಡಿದ ವಿವರ | 12 | 18 | 77 | 19 | **126** |
| 7 | ಶಾಖಾನುಮತಿ ನಿರಾಕರಿಸಿದ ವಿವರ | 5 | 14 | 137 | 15 | **171** |

- **ವಿಚಾರಣೆ :** ಸಹಕಾರ ಇಲಾಖೆಯು ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 35(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 04 ಸೌಹಾರ್ದ ಸಹಕಾರಿಗಳಿಗೆ ವಿಚಾರಣೆಗೆ ಆದೇಶ

ಮಾಡಲಾಗಿರುತ್ತದೆ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 61(2)ಎಲ್5 ರಡಿಯ ಅಧಿಕಾರವನ್ನು ಚಲಾಯಿಸಿ 01 ಸೌಹಾರ್ದ ಸಹಕಾರಿಗೆ ವಿಚಾರಣೆಗೆ ಆದೇಶ ಮಾಡಲಾಗಿದೆ.

- **ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸುವಿಕೆ** : 2025–26ನೇ ಸಾಲಿನಲ್ಲಿ ಒಟ್ಟು 273 ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸಭೆಗಳಲ್ಲಿ ಜಿಲ್ಲಾ ಸಂಯೋಜಕರು/ಪ್ರಾಂತೀಯ ಅಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ, ಸಹಕಾರಿಗಳ ಸುಸೂತ್ರ ಆಡಳಿತ, ಕಾನೂನುಬದ್ಧ ಕಾರ್ಯನಿರ್ವಹಣೆ ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನವನ್ನು ನೀಡಿರುತ್ತಾರೆ.

- **ನಿರ್ದೇಶಕರ ಅನರ್ಹತೆ** : ಸಹಕಾರಿಯ ಯಾವುದೇ ನಿರ್ದೇಶಕರು ಕಾಯ್ದೆ ಕಲಂ 25ರಡಿ ಅನರ್ಹತೆಗೆ ಗುರಿಯಾದಾಗ ಅಂತಹ ನಿರ್ದೇಶಕರಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿ, ಅನರ್ಹತೆಯನ್ನು ನಿರ್ಧರಿಸುವುದು ಸಂಯುಕ್ತ ಸಹಕಾರಿಯ ಶಾಸನಾತ್ಮಕ ಕಾರ್ಯವಾಗಿದ್ದು, ಅದರಂತೆ 2025–26ನೇ ಸಾಲಿನಲ್ಲಿ ಒಟ್ಟು 05 ಸೌಹಾರ್ದ ಸಹಕಾರಿಗಳಿಂದ ಒಟ್ಟು 39 ನಿರ್ದೇಶಕರನ್ನು ಸಹಕಾರಿಯ ನಿರ್ದೇಶಕರ ಸ್ಥಾನದಿಂದ ಕಾಯ್ದೆಯನುಸಾರ ಅನರ್ಹತೆಗೊಳಿಸಿ ಆದೇಶಿಸಲಾಗಿದೆ.

- **ದೂರುಗಳ ಪರಿಶೀಲನೆ & ವಿಲೇವಾರಿ** : ಸದಸ್ಯ ಸಹಕಾರಿಗಳ ಸದಸ್ಯರ/ ಸಾರ್ವಜನಿಕರ ದೂರುಗಳನ್ನು ಪರಿಶೀಲಿಸುವುದು, ದೂರುಗಳ ಆಧಾರದಲ್ಲಿ ಸ್ಪಷ್ಟನೆ ಕೋರುವುದು, ಪರಿವೀಕ್ಷಣೆಯನ್ನು ನಡೆಸುವುದು, ದೂರುಗಳ ವಿಲೇವಾರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಮುಂತಾದ ಕಾರ್ಯವನ್ನು ನಿರಂತರವಾಗಿ ಕೇಂದ್ರ ಕಛೇರಿಯಿಂದ ಹಾಗೂ ಪ್ರಾಂತೀಯ ಕಛೇರಿಗಳಿಂದ ಮಾಡಲಾಗುತ್ತಿದೆ.

- **ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ಕುರಿತು** : ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2025ರ ಕುರಿತಂತೆ ಸೌಹಾರ್ದ ಸಹಕಾರಿ ಕಾಯ್ದೆ ಆಶಯಕ್ಕೆ ವಿರುದ್ಧವಾಗಿರುವ ಅಂಶಗಳ ಕುರಿತಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸುವ ಕುರಿತಂತೆ ಮಾನ್ಯ ಉಚ್ಛ ನ್ಯಾಯಾಲಯದ ಬೆಂಗಳೂರು, ಧಾರವಾಡ ಹಾಗೂ ಕಲಬುರಗಿ ಪೀಠಗಳಲ್ಲಿ ಸಂಯುಕ್ತ ಸಹಕಾರಿಯೊಂದಿಗೆ ಒಕ್ಕೂಟ ಸೌಹಾರ್ದ ಸಹಕಾರಿಗಳನ್ನೊಳಗೊಂಡಂತೆ ಪ್ರಕರಣವನ್ನು ದಾಖಲಿಸಲು ಕ್ರಮವಿಡಲಾಗಿದೆ. ಅದರಂತೆ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. (ರಿಟ್ ಪಿಟೀಷನ್–9670/2026). ಮುಂದುವರೆದು, ಧಾರವಾಡ, ಕಲಬುರಗಿ ಪೀಠಗಳಲ್ಲಿ ಪ್ರಕರಣ ದಾಖಲಿಸುವ ಮುಂದಿನ ಕ್ರಮಗಳಿಗಾಗಿ ಮಾನ್ಯ ನ್ಯಾಯವಾದಿಗಳನ್ನು ನಿರಂತರವಾಗಿ ಸಂಪರ್ಕಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

- **ಸಂಯುಕ್ತ ಸಹಕಾರಿಯಿಂದ ವಿಧಾನ ಸಭೆ/ವಿಧಾನ ಪರಿಷತ್‌ಗೆ ನೀಡಿರುವ ಮಾಹಿತಿ** : ಕರ್ನಾಟಕ ಸರ್ಕಾರದ 2025–26ನೇ ಸಾಲಿನಲ್ಲಿ ಜರುಗಿದ ಅಧಿವೇಶನದಲ್ಲಿ (ವಿಧಾನ ಸಭೆ/ವಿಧಾನ ಪರಿಷತ್) ಮಾನ್ಯ ಶಾಸಕಕರು/ಸದಸ್ಯರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಯ ಬಗ್ಗೆ ಕೇಳಲಾಗಿರುವ 03 ಪ್ರಶ್ನೆಗಳಲ್ಲಿನ 07 ಉಪ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯಿಂದ ಉತ್ತರ ಕಳುಹಿಸಿ ಕ್ರಮವಿಡಲಾಗಿರುತ್ತದೆ.

- **ಪ್ರಾಧಿಕಾರಗಳಿಗೆ ಮಾಹಿತಿ ನೀಡಿರುವ ಕುರಿತು** : ಪ್ರಾಥಮಿಕ ಸೌಹಾರ್ದ ಸಹಕಾರಿಯಲ್ಲಿ ನಡೆಯುತ್ತಿರುವ ಅವ್ಯವಹಾರ/ಹಣ/ಅಧಿಕಾರ ದುರುಪಯೋಗ/ವಂಚನೆಗಳಗೆ ಸಂಬಂಧಿದಂತೆ ಸಹಕಾರ ಇಲಾಖೆಯಿಂದ, ಸಿ.ಐ.ಡಿ.ಯಿಂದ, ಸಹಕಾರಿಗಳಿಗೆ ನೇಮಕವಾಗಿರುವ ಸಕ್ಷಮ ಪ್ರಾಧಿಕಾರಗಳಿಂದ,

ಲೋಕಾಯುಕ್ತ ಕಛೇರಿಯಿಂದ ಹಾಗೂ ಪೊಲೀಸ್ ಠಾಣೆಯಿಂದ ಸಹಕಾರಿಯ ಕುರಿತು ಕೇಳಲಾಗಿರುವ ಮಾಹಿತಿ/ದಾಖಲಾತಿಗಳನ್ನು ಒದಗಿಸಿ ಕ್ರಮವಿಡಲಾಗಿದೆ.

## ಟಾಸ್ಕ್‌ಫೋರ್ಸ್ ವಿಭಾಗದ ಕಾರ್ಯಚಟುವಟಿಕೆ

ಟಾಸ್ಕ್‌ಫೋರ್ಸ್ ವಿಭಾಗದಲ್ಲಿ ಒಟ್ಟು 123 ಸೌಹಾರ್ದ ಸಹಕಾರಿಗಳಿದ್ದು, ಸದರಿ ಸೌಹಾರ್ದ ಸಹಕಾರಿಗಳ ಸಮಸ್ಯೆಗೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳು ಜಾರಿಯಲ್ಲಿವೆ. ಸೌಹಾರ್ದ ಸಹಕಾರಿಗಳು ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳದ, ಸಂಯುಕ್ತ ಸಹಕಾರಿಯ ನಿರ್ದೇಶನಗಳನ್ನು ಪಾಲಿಸದೇ ಇದ್ದ 31 ಸೌಹಾರ್ದ ಸಹಕಾರಿಗಳ ವಿರುದ್ಧ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. ಠೇವಣಿದಾರರ ಠೇವಣಿ ಹಣ ಮರುಪಾವತಿಸದ 12 ಸೌಹಾರ್ದ ಸಹಕಾರಿಗಳ ವಿರುದ್ಧ ಸಂಯುಕ್ತ ಸಹಕಾರಿಯಿಂದ ಎಫ್ಐಆರ್ ಮತ್ತು 03 ಖಾಸಗಿ ಫಿರ್ಯಾದುಗಳನ್ನು ದಾಖಲಿಸಲಾಗಿದೆ. ಸಂಯುಕ್ತ ಸಹಕಾರಿಯು ಕಾಯ್ದೆ/ನಿಯಮ ಹಾಗೂ ಠೇವಣಿ ಹಣ ಮರುಪಾವತಿಸದ 14 ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಯಗಳ ಆಡಳಿತ ಮಂಡಲಿ ನಿರ್ದೇಶಕರಿಗೆ ವಿಶೇಷ ಸಭೆ ಕರೆಯುವುದರ ಮೂಲಕ ಹಿಂಬಾಲನೆ ಮಾಡಲಾಗುತ್ತಿದೆ. ಟಾಸ್ಕ್‌ಫೋರ್ಸ್ ವಿಭಾಗದಲ್ಲಿ ಇರುವ ಒಟ್ಟು 123 ಸೌಹಾರ್ದ ಸಹಕಾರಿಗಳ ಪೈಕಿ 05 ಸಹಕಾರಿಗಳು ಬಹುರಾಜ್ಯ ಕಾಯ್ದೆಗೆ ಪರಿವರ್ತನೆಗೊಂಡಿವೆ. 30 ಸೌಹಾರ್ದ ಸಹಕಾರಿಗಳಿಗೆ ಸಹಕಾರ ಇಲಾಖೆಯಿಂದ ಸಮಾಪನಾಧಿಕಾರಿಗಳು ನೇಮಕವಾಗಿರುತ್ತಾರೆ.

## ಶಿಕ್ಷಣ ಹಾಗೂ ತರಬೇತಿ ವಿಭಾಗದ ಕಾರ್ಯಕ್ರಮಗಳ ವರದಿ

2025–26ನೇ ಸಾಲಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗೆ, ನಿರ್ದೇಶಕರುಗಳಿಗೆ, ಮುಖ್ಯಕಾರ್ಯನಿರ್ವಾಹಕರುಗಳಿಗೆ, ಸಿಬ್ಬಂದಿಗಳಿಗೆ ಪ್ರತ್ಯೇಕ ತರಬೇತಿಗಳನ್ನು ರಾಜ್ಯಮಟ್ಟದಲ್ಲಿ, ಪ್ರಾಂತವಾರು ಹಾಗೂ ಜಿಲ್ಲಾವಾರು ಏರ್ಪಡಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗಾಗಿ, ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ, ಸಮಾಲೋಚನಾ ಸಭೆಗಳು, ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು, ವಿಷಯಾಧಾರಿತ ತರಬೇತಿ, ಇ–ಸ್ಟ್ಯಾಂಪಿಂಗ್ ತರಬೇತಿ, ಉನ್ನತ ಮಟ್ಟದ ತರಬೇತಿ, ಪ್ರವೇಶ ತರಬೇತಿ ಕುರಿತು ತರಬೇತಿಗಳನ್ನು ಆಯೋಜಿಸಲಾಗಿದೆ. ಅಲ್ಲದೇ, ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಲೆಕ್ಕಪತ್ರ ಅಂತಿಮಗೊಳಿಸುವಿಕೆ, ದಾಖಲಾತಿ ನಿರ್ವಹಣೆ, ಲೆಕ್ಕಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳ ಕುರಿತು ತರಬೇತಿ, ಮುಖ್ಯಕಾರ್ಯನಿರ್ವಾಹಕರ ಹಕ್ಕುಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮ, 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ, 5 ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ, 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್, ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು, ಸಾಲ ವಸೂಲಾತಿ ಕ್ರಮಗಳ ತರಬೇತಿ, ಪ್ರವೇಶ ತರಬೇತಿ, ಕ್ಲಸ್ಟರ್ ಮಟ್ಟದ ತರಬೇತಿ, ಆಡಳಿತ ಪರಿಣಿತಿ ತರಬೇತಿ, ಸಮಾಲೋಚನಾ ಸಭೆಗಳು, ಸಂಪರ್ಕ ಸಭೆಗಳನ್ನು ಆಯೋಜಿಸಲಾಗಿದೆ.

2025–26ನೇ ಸಾಲಿನಲ್ಲಿ ಒಟ್ಟು 195 ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳು, 52 ಮುಖ್ಯ ಕಾರ್ಯನಿರ್ವಾಹಕರ ಸಭೆಗಳು, 26 ಸಂಪರ್ಕ ಸಭೆಗಳು, 2 ಯುವಜನ ಹಾಗೂ ಸಹಕಾರ ಸಂವಾದ ಕಾರ್ಯಕ್ರಮ, ಸೌಹಾರ್ದ ಸಹಕಾರಿ ರಜತ ಮಹೋತ್ಸವ ಹಿನ್ನೆಲೆಯಲ್ಲಿ 9 ಸಂವಾದ ಕಾರ್ಯಕ್ರಮಗಳು, ಪತ್ರಿಕಾಗೋಷ್ಠಿಗಳು ಸೇರಿದಂತೆ ಒಟ್ಟು 284 ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 3ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸಿನ ಆನ್‌ಲೈನ್ ಹಾಗೂ ಭೌತಿಕ ಸಂಪರ್ಕ ವರ್ಗ ತರಗತಿಗಳು ಸೇರಿದಂತೆ ಒಟ್ಟು 71 ಸಂಪರ್ಕ ವರ್ಗಗಳನ್ನು ಆಯೋಜಿಸಲಾಗಿದೆ. ಸೌಹಾರ್ದ ಸಹಕಾರಿ ದಿನಾಚರಣೆ ಕುರಿತು, ರಾಷ್ಟ್ರೀಯ ಹಬ್ಬಗಳು,

ರಾಷ್ಟ್ರ ನಾಯಕರ ದಿನಾಚರಣೆ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ದಿನಾಂಕ 15 ನವೆಂಬರ್ 2025ರಂದು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ ಆಯೋಜಿಸಲಾಗಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು, ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ರಾಯಚೂರು ಜಿಲ್ಲಾ ಸಹಕಾರ ಯೂನಿಯನ್, ರಾಯಚೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳು, ಕ್ರೆಡಿಟ್ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು, ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು, ವಸತಿ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಹಕಾರ ಇಲಾಖೆ ಮತ್ತು ಇತರೆ ಎಲ್ಲ ವರ್ಗದ ಸಹಕಾರ ಸಂಘಗಳ ಸಹಯೋಗದೊಂದಿಗೆ ಆಚರಿಸಲಾಗಿದೆ.

**ವಿಷಯ 04 : 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೋಟೀಸಿನೊಂದಿಗೆ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ನೀಡಿರುವ ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಯಥಾವತ್ತಾಗಿ (Scanned Copy) ಸಭೆಗೆ ನೀಡಲಾಗಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು. ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ಸಹ ಸಭೆಯಲ್ಲಿ ಉಪಸ್ಥಿತರಿದ್ದಾರೆ ಎಂದು ತಿಳಿಸಿದರು.

ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಗಳು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ–0011)**

**ಪ್ರಶ್ನೆ 01 : ಪು.ಸ–ನಂ–93– ರಲ್ಲಿ ವಿಷಯದ ಇ–ಸ್ಟಾಂಪಿಂಗ್ – ಬಗ್ಗೆ ವಿಷಯದ ಮೊತ್ತವು ಅಧಿಕ ಇರುವುದರಿಂದ ಇದನ್ನು ಆಡಿಟ್‌ರವರು ಸೂಚಿಸಿದಂತೆ ಕ್ರಮ ವಹಿಸುವುದು.**

**ಉತ್ತರ** : ಸಂಯುಕ್ತ ಸಹಕಾರಿಯು ಈಗಾಗಲೇ ನೆಗಟೆವ್ ಬ್ಯಾಲೆನ್ಸ್ ಇರುವಂತಹ ಸಹಕಾರಿಗಳಿಂದ ವಸೂಲಾತಿ ಮಾಡಲಾಗಿದೆ. 3 ಸಹಕಾರಿಗಳು ಕಾರ್ಯನಿರ್ವಹಿಸದೇ ಇರುವುದರಿಂದ ಸಮಾಪನೆಗೆ ಶಿಫಾರಸ್ಸು ಮಾಡಲಾಗಿದೆ. ಲೆಕ್ಕಪರಿಶೋಧಕರ ಸಲಹೆಯನ್ನು ಈಗಾಗಲೇ ಕಾರ್ಯಗತಗೊಳಿಸಿದೆ.

**ಪ್ರಶ್ನೆ 02 : ಪು.ಸ–ನಂ–104ರಲ್ಲಿ ಕ್ರಮ ಸಂಖ್ಯೆ 42 ರಲ್ಲಿ ನಮೂದಿಸಿರುವಂತೆ ಸುಸ್ಥಿದಾರರ ಹಣ ವಸೂಲಿ ಮಾಡಬಹುದಾಗಿದೆ.**

**ಉತ್ತರ** : ಸುಸ್ಥಿ ಸಹಕಾರಿಗಳಿಂದ ಲೆಕ್ಕಪರಿಶೋಧನಾ ವರದಿಗಳನ್ನು ಮತ್ತು ಸುಸ್ಥಿ ಮೊತ್ತವನ್ನು ವಸೂಲಾತಿಗೆ ಜಾರಿಯಲ್ಲಿದೆ.

**ಪ್ರಶ್ನೆ 03 : ಪು.ಸ–ನಂ–106ರಲ್ಲಿ–ನಮೂದಿಸಿರುವ ತಪ್ಪು ಹೇಳಿಕೆಗಳ ಗಂಭೀರತೆಗಳನ್ನು ಗಮನಿಸುವುದು.**

**ಉತ್ತರ :** ಸಂಯುಕ್ತ ಸಹಕಾರಿಯು ಯಾವುದೇ ತಪ್ಪು ಹೇಳಿಕೆಗಳು ನೀಡಿರುವುದಿಲ್ಲ ಮತ್ತು ಯಾವುದೇ ಗಂಭೀರತೆಗಳು ಇರುವುದಿಲ್ಲ. ಏನಾದರೂ ತಪ್ಪು ಹೇಳಿಕೆಗಳನ್ನು ನೀಡಿದ್ದಲ್ಲಿ ಅದಕ್ಕೆ ಸಂಯುಕ್ತ ಸಹಕಾರಿಯ ಜವಾಬ್ದಾರಿ ಎಂದು ಲೆಕ್ಕಪರಿಶೋಧನೆಯ ಭಾಗವಾಗಿ ಲೆಕ್ಕಪರಿಶೋಧಕರು ತಿಳಿಸಿರುತ್ತಾರೆ.

**ಪ್ರಶ್ನೆ 04 : ಪು.ಸ–ನಂ–122–ರಲ್ಲಿ ಕ್ರಮ ಸಂಖ್ಯೆ 11–ರಲ್ಲಿ ನಮೂದಿಸಿರುವ ಪ್ರಯಾಣ ವೆಚ್ಚ ರೂ.19,00,844/– ಬಹಳ ಅಧಿಕ ಪ್ರಮಾಣವಾಗಿದೆ. ವಿವರಣೆ ನೀಡುವುದು.**

**ಉತ್ತರ :** ನಿರ್ದೇಶಕರ ಪ್ರಯಾಣ ಭತ್ಯೆ ದರದ ಹೆಚ್ಚಳದ ಕುರಿತು 24ನೇ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪವಿಧಿಯ ತಿದ್ದುಪಡಿಯ ಮೂಲಕ ಅನುಮೋದನೆಯನ್ನು ಪಡೆಯಲಾಗಿದ್ದು, ಸದರಿ ಉಪವಿಧಿ ತಿದ್ದುಪಡಿ ಅಂಶಗಳನ್ನು ದಿನಾಂಕ 27.05.2025ರಂದು ಮಾನ್ಯ ನಿಬಂಧಕರಿಂದ ಅನುಮೋದನೆಗೊಂಡ ನಂತರ ಪ್ರಯಾಣ ಭತ್ಯೆ ನಿಯಮಾನುಸಾರ ಪಾವತಿಸಲಾಗಿದೆ.

**ಪ್ರಶ್ನೆ 05 : ಪು.ಸ–ನಂ–127ರಲ್ಲಿ– ಕಲಬುರಗಿ ವಿಭಾಗದಲ್ಲಿ ರೂ.2,42,187 ಪ್ರಚಾರಕ್ಕೆ ಖರ್ಚು ಆಗಿರುವುದು ಪ್ರಮಾಣ ಅಧಿಕವಾಗಿದೆ. ಕಾರಣ ಇಂತಹ ಖರ್ಚುವೆಚ್ಚಗಳ ನಿಯಂತ್ರಣ ಇಡುವುದು.**

**ಉತ್ತರ :** ಸೌಹಾರ್ದ ಸಹಕಾರಿ ಕಾಯ್ದೆಗೆ 2025ರಲ್ಲಿ ಆದ ತಿದ್ದುಪಡಿಗಳಿಗೆ ಸಂಬಂಧಿಸಿ, ಸಹಕಾರಿಗಳಿಗೆ ಜಾಗೃತ ಮೂಡಿಸುವ ಸಭೆಗಳಿಗೆ ಮಾಡಿರುವ ವೆಚ್ಚವಾಗಿದೆ. ಸದರಿ ಕಾರ್ಯಕ್ರಮಗಳನ್ನು 4 ಪ್ರಾಂತಗಳಲ್ಲಿ ಆಯೋಜಿಸಿದೆ. ಸದರಿ ವೆಚ್ಚದ ಶೀರ್ಷಿಕೆ ಅಡಿಯಲ್ಲಿ ವೆಚ್ಚವನ್ನು ನಮೂದಿಸಿದೆ.

**ಪ್ರಶ್ನೆ 06 : ಪು.ಸ–ನಂ–143 ರಿಂದ 146ರವರೆಗೆ ಸುಸ್ಥಿದಾರರ ಪಟ್ಟಿ ನೀಡಲಾಗಿದೆ. ಇದರಲ್ಲಿ ಒಟ್ಟು ಮೊತ್ತ ನಮೂದಿಸಿರುವುದಿಲ್ಲ.**

**ಉತ್ತರ :** ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸದೇ ಇರುವ ಸೌಹಾರ್ದ ಸಹಕಾರಿಗಳ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿಗಳ ಬಾಕಿ ಮೊತ್ತದ ಕುರಿತು ನಿಖರವಾಗಿ ಹೇಳುವುದು ಕಷ್ಟ ಸಾಧ್ಯ.

**<u>ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ. (ಕೆಡಬ್ಲ್ಯುಆರ್–0016)</u>**

**ಪ್ರಶ್ನೆ 01 : ಆದಾಯ ವೆಚ್ಚ ತಖ್ತೆ ಮತ್ತು ಆಸ್ತಿ ಹೊಣೆಗಾರಿಕೆ ತಃಖ್ತೆಗಳ ಬಗ್ಗೆ.**

**ಉತ್ತರ :** ಆದಾಯ ವೆಚ್ಚ ತಖ್ತೆ ಮತ್ತು ಆಸ್ತಿ ಹೊಣೆಗಾರಿಕೆ ತಃಖ್ತೆಗಳ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ವಿಷಯಗಳನ್ನು ಮಂಡಿಸಿದೆ.

ನಂತರ ಸಭೆಯಲ್ಲಿ ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ (ಕೆಡಬ್ಲ್ಯುಆರ್–0016) ಈ ಸೌಹಾರ್ದ ಸಹಕಾರಿಯ ಮಾನ್ಯ ಡೆಲಿಗೇಟ್‌ರವರು ಪೂರಕ ಪ್ರಶ್ನೆಗಳನ್ನು ಕೇಳಿದರು. ಲೆಕ್ಕಪರಿಶೋಧನಾ ವರದಿಯಲ್ಲಿ ಅಂಶ 11. ಸಹಕಾರ ಶಿಕ್ಷಣ ನಿಧಿಯಲ್ಲಿ ವರದಿ ಸಾಲಿನಲ್ಲಿ ರೂ.6,65,68,605/–ಗಳನ್ನು ವೆಚ್ಚ ಮಾಡಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಆದರೆ, ಆದಾಯ ವೆಚ್ಚ ತಃಖ್ತೆಯಲ್ಲಿ ಶಿಕ್ಷಣ ನಿಧಿ ವೆಚ್ಚಗಳು ಎಂದು ರೂ.8,14,94,117/–ಗಳನ್ನು ತೋರಿಸಲಾಗಿರುತ್ತದೆ. ಈ ಕುರಿತು ತಿಳಿಸುವಂತೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಎಲ್ಲದ್ದಕ್ಕೂ ಸಹ ಶೆಡ್ಯೂಲ್‌ಗಳನ್ನು ನೀಡಲಾಗಿದೆ. ಎಲ್ಲಾ ವಿವರಗಳನ್ನು ಸಹ ನೀಡಲಾಗಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಡೆಲಿಗೇಟ್‌ರವರು ಮಾತನಾಡಿ ಶೆಡ್ಯೂಲ್ ಇದ್ದರೂ ಸಹ ಆದಾಯ ವೆಚ್ಚ ತಃಖ್ತೆಯಲ್ಲಿಯೂ ಸಹ ಅಷ್ಟೇ ಮೊತ್ತ ಬರಬೇಕಲ್ಲವೇ ಎಂದು ಕೇಳಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡಿ ಶಿಕ್ಷಣ ನಿಧಿಯನ್ನು ಕ್ಯಾಪಿಟಲ್ ರೆಸಿಟ್‌ಗೆ ತೆಗೆದುಕೊಳ್ಳಲಾಗಿದೆ. ಸ್ವೀಕೃತವಾಗಿರುವ ಶಿಕ್ಷಣ ನಿಧಿಯ ಒಟ್ಟು ಮೊತ್ತದಲ್ಲಿ ಈ ವರ್ಷ ಎಷ್ಟು ಮೊತ್ತ ಖರ್ಚಾಗಿದೆಯೋ ಅಷ್ಟು ಮೊತ್ತವನ್ನು ಮಾತ್ರ ಖರ್ಚಿಗೆ ತೆಗೆದುಕೊಳ್ಳಲಾಗಿದ್ದು, ಉಳಿದ ಮೊತ್ತವನ್ನು ಶಿಕ್ಷಣ ನಿಧಿಗೆ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಡೆಲಿಗೇಟ್‌ರವರು ಮಾತನಾಡಿ ಕ್ಯಾಪಿಟಲ್ ಫಂಡ್ ಹಾಗೂ ಶಿಕ್ಷಣ ನಿಧಿ ಎರಡನ್ನೂ ಸಹ ಬೇರೆ ಬೇರೆ ತೋರಿಸಲು ತಿಳಿಸಿದರು.

ಇದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡಿ ಎರಡನ್ನೂ ಸಹ ಪ್ರತ್ಯೇಕವಾಗಿ ತೋರಿಸಲಾಗಿದೆ. ಶಿಕ್ಷಣ ನಿಧಿ ಎಂಬುದು ಒಟ್ಟು ಕ್ರೋಢೀಕೃತ ಮೊತ್ತವಾಗಿರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಸಂಯುಕ್ತ ಸಹಕಾರಿಯಿಂದ ರೂ.45,86,72,743/–ಗಳನ್ನು ಬೇರೆ ಬೇರೆ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಿದ್ದು, ಇದರಲ್ಲಿ ರೂ.25 ಕೋಟಿಗಳಷ್ಟು ಮೊತ್ತವು ಶಿಕ್ಷಣ ನಿಧಿಯ ಮೊತ್ತವಾಗಿದ್ದು, ಇದಕ್ಕೆ ಬಂದಿರುವ ಬಡ್ಡಿಯ ಬಗ್ಗೆ ಉಲ್ಲೇಖವಾಗಿರುವುದಿಲ್ಲ. ಈ ಮೊತ್ತಕ್ಕೆ ರೂ.2–3 ಕೋಟಿಗಳಷ್ಟು ಸಾಮಾನ್ಯ ಬಡ್ಡಿ ಬರಲಿದ್ದು, ಈ ಕುರಿತಾದ ಬಡ್ಡಿಯನ್ನು ತೋರಿಸಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಇಂಟರೆಸ್ಟ್ ಆನ್ ಇನ್ವೆಸ್ಟ್‌ಮೆಂಟ್ ಎಂದು ಪ್ರತ್ಯೇಕವಾಗಿ ತೋರಿಸಲಾಗಿದೆ. ಪ್ರತಿಯೊಂದು ಬಂದಿರುವುದನ್ನು ಆದಾಯ ವೆಚ್ಚ ತಃಖ್ತೆಯಲ್ಲಿ ತೋರಿಸಲಾಗಿದೆ. ಕೆಲವು ಬಡ್ಡಿ ಮೊತ್ತವನ್ನು ಆಯಾ ನಿಧಿಗಳಿಗೆ ನೇರವಾಗಿ ಜಮೆ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಲೆಕ್ಕಪರಿಶೋಧನಾ ವರದಿಯಲ್ಲಿ "ಸಂಯುಕ್ತ ಸಹಕಾರಿಯು ಕಟ್ಟಡ ಮತ್ತು ಇತರೆ ಬಂಡವಾಳ ವೆಚ್ಚವನ್ನು ಶಿಕ್ಷಣ ನಿಧಿಯಿಂದ ಬಳಕೆ ಮಾಡಿರುವುದನ್ನು ಗಮನಿಸಲಾಗಿದ್ದು, ಸದರಿ ನಿಧಿಯಿಂದ ಮಾಡಬಹುದಾದ ಬಂಡವಾಳ ವೆಚ್ಚಕ್ಕೆ ಗರಿಷ್ಠ ಮಿತಿಯನ್ನು ಒಳಗೊಂಡ ಸೂಕ್ತ ನಿಯಮಾವಳಿಗಳನ್ನು ರಚಿಸಿಕೊಳ್ಳಲು ಅವಶ್ಯಕತೆ ಇದೆ ಎಂದು ಅಭಿಪ್ರಾಯಪಡಲಾಗಿದ್ದು, ಈ ಕುರಿತು ಸೂಕ್ತ ಕ್ರಮವಿಡಲು ಸನ್ನದು ಲೆಕ್ಕಪರಿಶೋಧಕರು ಸಲಹೆ ನೀಡಿರುತ್ತಾರೆ". ಶಿಕ್ಷಣ ನಿಧಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 10ಸಿ (1) (2) (3) ಗಳಲ್ಲಿ ಬಳಕೆ ಮಾಡಬಹುದಾದ ಉದ್ದೇಶಗಳ ಕುರಿತಂತೆ ತಿಳಿಸಲಾಗಿರುತ್ತದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಶಿಕ್ಷಣ ನಿಧಿ ಮೊತ್ತವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳಲ್ಲಿ ತಿಳಿಸಿರುವ ಉದ್ದೇಶಗಳನ್ನು ಹೊರತುಪಡಿಸಿ ಉಳಿದ ಉದ್ದೇಶಗಳಿಗೆ ಬಳಕೆ ಮಾಡಿಕೊಂಡಿರುವುದಿಲ್ಲ. ಯಾವುದನ್ನೂ ನೇರವಾಗಿ ಉಪಯೋಗಿಸುವುದಿಲ್ಲ. ಮೊದಲಿಗೆ ಕ್ಯಾಪಿಟಲೈಸ್ ಮಾಡಿರುತ್ತೇವೆ. ನಂತರ ಕಟ್ಟಡ ನಿರ್ಮಾಣ, ದೀರ್ಘಾವಧಿಯ ಹೂಡಿಕೆಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಉತ್ತರ ಕನ್ನಡ ಜಿಲ್ಲೆಯಲ್ಲಿ 310 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿಯನ್ನು ಮಾತ್ರ ನೇಮಿಸಿರುತ್ತೀರಿ. ಎಷ್ಟೋ ಸೌಹಾರ್ದ ಸಹಕಾರಿಗಳು ಠೇವಣಿಗಳನ್ನು ಹಿಂತಿರುಗಿಸುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ 310 ಸೌಹಾರ್ದ ಸಹಕಾರಿಗಳಿಗೆ ಒಬ್ಬರು ಅಧಿಕಾರಿಯನ್ನು ನೇಮಿಸಿದಲ್ಲಿ ಆ ಎಲ್ಲಾ ಸೌಹಾರ್ದ ಸಹಕಾರಿಗಳನ್ನು ಮೇಲ್ವಿಚಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಹಾಗೆಯೇ, ಟಾಸ್ಕ್‌ಫೋರ್ಸ್ ವಿಭಾಗವನ್ನು ಸಹ ಬಲಪಡಿಸುವ ಅಗತ್ಯತೆ ಇರುತ್ತದೆ. ಇಲಾಖೆಗಳಲ್ಲಿ ಸೌಹಾರ್ದ ಸಹಕಾರಿಗಳ ಕುರಿತು ವಿನಂತಿಸಿ ಸಲ್ಲಿಸುವ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳೆಂದರೆ ನೋಡುವ ದೃಷ್ಟಿ ಬೇರೆಯಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ವ್ಯವಸ್ಥೆಯ ಬಗ್ಗೆ ಮಾತನಾಡುವುದರ ಬದಲು ಯಾವುದಾದರೂ ಪ್ರಶ್ನೆಗಳಿದ್ದಲ್ಲಿ ನಿರ್ದಿಷ್ಟವಾಗಿ ಲಿಖಿತವಾಗಿ ಕೇಳಿದಲ್ಲಿ ಈ ಕುರಿತು ಲಿಖಿತವಾಗಿ ಉತ್ತರವನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 05 : 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ನೀಡಿದ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ನ್ಯೂನ್ಯತೆಗಳು/ ಸಲಹೆಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಒಪ್ಪಿ ಸಿದ್ಧಪಡಿಸಿ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು ಅನುಮತಿಸಿರುವ ಅನುಪಾಲನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಗೆ ನೀಡಲಾಗಿದ್ದು, ಇದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**<u>ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ–0011)</u>**

**ಪ್ರಶ್ನೆ 01 : ಪು.ಸ–ನಂ–148ರಲ್ಲಿ ಕಾಣಿಸಿರುವ ಕಲಬುರಗಿ ಮತ್ತು ಮೈಸೂರು ಪ್ರಾಂತೀಯ ಕಟ್ಟಡಗಳನ್ನು ಕೈಗಾರಿಕಾ ಕಟ್ಟಡವೆಂದು ಪರವಾನಿಗೆ ಪಡೆದಿದೆ. ಇವುಗಳನ್ನು ವಾಣಿಜ್ಯ ಕಟ್ಟಡವೆಂದು ತಿಳಿಸಿರುವುದು ಆಕ್ಷೇಪಣೆಯು ಹಿಂದಿನ ಸಾಲಿನಿಂದಲೂ ಮುಂದುವರೆದಿದೆ.**

**ಉತ್ತರ :** ಕಲಬುರಗಿ ಪ್ರಾಂತೀಯ ಕಛೇರಿ ಮತ್ತು ಮೈಸೂರು ಪ್ರಾಂತೀಯ ಕಛೇರಿಗಳ ಕಟ್ಟಡಗಳ ಪರವಾನಿಗೆಯನ್ನು ವಾಣಿಜ್ಯವೆಂದು ಬದಲಾಯಿಸಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ಮನವಿ ಮಾಡಲಾಗಿದೆ ಹಾಗೂ ಹಿಂಬಾಲನೆಯು ಚಾಲ್ತಿಯಲ್ಲಿರುತ್ತದೆ.

**ಪ್ರಶ್ನೆ 02 : ಪು.ಸ–ನಂ–148ರಲ್ಲಿ–ಸಿಬ್ಬಂದಿ ವಿವರ ಕಾಣಿಸಿದೆ. ಇಲಾಖೆಯಿಂದ ಹುದ್ದೆ ಮತ್ತು ವೇತನಶ್ರೇಣಿ ಅನುಮೋದನೆಯಾಗಿದೆಯೇ ತಿಳಿಸಿ.**

**ಉತ್ತರ :** ಸೌಹಾರ್ದ ಸಹಕಾರಿ ಅಧಿನಿಯಮದ ಅಡಿ ಕಾರ್ಯನಿರ್ವಹಿಸುವ ಎಲ್ಲ ಸಹಕಾರಿ ಸಂಸ್ಥೆಗಳು ಸ್ವಾಯತ್ತತೆಯನ್ನು ಹೊಂದಿರುವ ಸಹಕಾರಿಗಳಾಗಿದ್ದು, ಸಿಬ್ಬಂದಿಗಳ ವೃಂದಬಲ ಮತ್ತು ಶ್ರೇಣಿಯು ಸಾಮಾನ್ಯ ಸಭೆಯಿಂದ ಅನುಮೋದನೆಗೊಳ್ಳುವುದು ಕಡ್ಡಾಯವಿರುತ್ತದೆ. ಅದರಂತೆ ಸಂಯುಕ್ತ ಸಹಕಾರಿಯು ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡ ವೃಂದಬಲವನ್ನು ಮತ್ತು ವೇತನ ಶ್ರೇಣಿಯನ್ನು ಹೊಂದಿರುತ್ತದೆ.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 06 : 2025–26ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ 2025–26ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ಹೆಚ್ಚುವರಿ ವೆಚ್ಚಗಳಾಗಿರುವುದಿಲ್ಲ. ಈ ಮಾಹಿತಿಯನ್ನು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ 2025-26ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ಹೆಚ್ಚುವರಿ ವೆಚ್ಚಗಳಾಗಿಲ್ಲದೇ ಇರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ 2025-26ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ಹೆಚ್ಚುವರಿ ವೆಚ್ಚಗಳಾಗಿಲ್ಲದೇ ಇರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 07 : 2026-27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ವೃತ್ತಿ ಶುಲ್ಕವನ್ನು ನಿಗದಿಪಡಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2024-25 & 2025-26ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ನಡೆಸಿರುತ್ತಾರೆ. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:8ಬಿ(6)ರನ್ವಯ ಲೆಕ್ಕಪರಿಶೋಧಕರನ್ನು/ ಲೆಕ್ಕಪರಿಶೋಧನಾ ಸಂಸ್ಥೆಯನ್ನು ಅನುಕ್ರಮವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಲೆಕ್ಕಪರಿಶೋಧನೆಗೆ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ 2026-27ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಗಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಕುರಿತು ಮತ್ತು ಸದರಿಯವರಿಗೆ 2026-27ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕವಾಗಿ ನೀಡಬಹುದಾದ ವೃತ್ತಿ ಶುಲ್ಕವನ್ನು ನಿಗದಿಪಡಿಸುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ ಎಂದು ತಿಳಿಸಿದರು.

| ಕ್ರ. ಸಂ. | ಸಂಸ್ಥೆಯ ಹೆಸರು | ಸ್ಥಳ | ಶ್ರೇಣಿ |
|---|---|---|---|
| 1. | ಆರ್‌ಬಿವಿ & ಕೋ., | ಸಾಗರ, ಶಿವಮೊಗ್ಗ | ಎ |
| 2. | ವಿಜಯ್ ಪಂಚಪ್ಪ & ಕೋ., | ಬೆಂಗಳೂರು | ಎ |
| 3. | ಶ್ರೀ ಕಿರಣ್ ಹಿರೇಮಠ & ಕೋ., | ಬೆಳಗಾವಿ | ಎ |
| 4. | ಪಿ ಕೆ ಸುಬ್ರಹ್ಮಣ್ಯಂ & ಕೋ., | ಬೆಂಗಳೂರು | ಎ |
| 5. | ಹೆಗಡೆ ಗಿರಿ & ಅಸೋಸಿಯೇಟ್ಸ್ | ಬೆಂಗಳೂರು | ಎ |

ನಂತರ ಸಭೆಯು, ಪ್ರಥಮ ಆದ್ಯತೆಯಾಗಿ ಮಂಡಿಸಲಾಗಿರುವ ಆರ್‌ಬಿವಿ & ಕೋ., ಸಾಗರ, ಶಿವಮೊಗ್ಗ ಇವರನ್ನು ಸಂಯುಕ್ತ ಸಹಕಾರಿಯ 2026-27ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕ ಮಾಡಿಕೊಳ್ಳಲು ಹಾಗೂ ಸದರಿಯವರಿಗೆ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.1,75,000/-ಗಳು (ವಾಸ್ತವಿಕ ಪ್ರಯಾಣ ವೆಚ್ಚ ಹಾಗೂ ಅನ್ವಯಿಸುವ ತೆರಿಗೆಗಳನ್ನು ಹೊರತುಪಡಿಸಿ) ಮತ್ತು ಟ್ಯಾಕ್ಸ್ ಆಡಿಟ್‌ಗೆ ಸಂಬಂಧಿಸಿದಂತೆ ವೃತ್ತಿ ಶುಲ್ಕವನ್ನು ಆಡಳಿತ ಮಂಡಲಿ ಸಭೆಯಲ್ಲಿ ಸೂಕ್ತವಾಗಿ ಚರ್ಚಿಸಿ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಒಂದು ವೇಳೆ, ಯಾವುದೇ ಕಾರಣದಿಂದ ಪ್ರಥಮ ಆದ್ಯತೆಯ ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನೆ ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ, ದ್ವಿತೀಯ ಆದ್ಯತೆಯಾದ ವಿಜಯ್ ಪಂಚಪ್ಪ & ಕೋ., ಬೆಂಗಳೂರು, ತೃತೀಯ ಆದ್ಯತೆಯಾದ ಶ್ರೀ ಕಿರಣ್ ಹಿರೇಮಠ & ಕೋ., ಬೆಳಗಾವಿ, ನಂತರದ ಆದ್ಯತೆಯಾದ ಪಿ.ಕೆ. ಸುಬ್ರಹ್ಮಣ್ಯಂ & ಕೋ., ಬೆಂಗಳೂರು ಹಾಗೂ ಹೆಗಡೆ ಗಿರಿ & ಅಸೋಸಿಯೇಟ್ಸ್ ಇವರಲ್ಲಿ ಅನುಕ್ರಮವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ನಿರ್ಣಯ : ಸಂಯುಕ್ತ ಸಹಕಾರಿಯ 2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಪ್ರಥಮ ಆದ್ಯತೆಯಾಗಿ ಮಂಡಿಸಲಾಗಿರುವ ಆರ್‌ಬಿವಿ & ಕೋ., ಸಾಗರ, ಶಿವಮೊಗ್ಗ ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಸದರಿಯವರಿಗೆ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.1,75,000/–ಗಳು (ವಾಸ್ತವಿಕ ಪ್ರಯಾಣ ವೆಚ್ಚ ಹಾಗೂ ಅನ್ವಯಿಸುವ ತೆರಿಗೆಗಳನ್ನು ಹೊರತುಪಡಿಸಿ) ಮತ್ತು ಟ್ಯಾಕ್ಸ್ ಆಡಿಟ್‌ಗೆ ಸಂಬಂಧಿಸಿದಂತೆ ವೃತ್ತಿ ಶುಲ್ಕವನ್ನು ಆಡಳಿತ ಮಂಡಲಿ ಸಭೆಯಲ್ಲಿ ಸೂಕ್ತವಾಗಿ ಚರ್ಚಿಸಿ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಒಂದು ವೇಳೆ, ಯಾವುದೇ ಕಾರಣದಿಂದ ಪ್ರಥಮ ಆದ್ಯತೆಯ ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನೆ ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ, ದ್ವಿತೀಯ ಆದ್ಯತೆಯಾದ ವಿಜಯ್ ಪಂಚಪ್ಪ & ಕೋ., ಬೆಂಗಳೂರು, ತೃತೀಯ ಆದ್ಯತೆಯಾದ ಶ್ರೀ ಕಿರಣ್ ಹಿರೇಮಠ & ಕೋ., ಬೆಳಗಾವಿ, ನಂತರದ ಆದ್ಯತೆಯಾದ ಪಿ.ಕೆ. ಸುಬ್ರಹ್ಮಣ್ಯಂ & ಕೋ., ಬೆಂಗಳೂರು ಹಾಗೂ ಹೆಗಡೆ ಗಿರಿ & ಅಸೋಸಿಯೇಟ್ಸ್ ಇವರಲ್ಲಿ ಅನುಕ್ರಮವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 08 : 2027–28ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ವೃತ್ತಿ ಶುಲ್ಕವನ್ನು ನಿಗದಿಪಡಿಸುವುದು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸೌಹಾರ್ದ ಸಹಕಾರಿಗಳಲ್ಲಿ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವಂತೆ ಸಂಯುಕ್ತ ಸಹಕಾರಿಯಲ್ಲಿಯೂ ಸಹ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಸಂಯುಕ್ತ ಸಹಕಾರಿಯ 2025–26 ಹಾಗೂ 2026–27ನೇ ಸಾಲಿನ ಆಂತರಿಕ ಲೆಕ್ಕಪರಿಶೋಧಕರಾಗಿ ಮೆ. ಅನಂತ್ ಮುತಾಲಿಕ್ & ಕೋ, ಬೆಂಗಳೂರು ಇವರು ನಡೆಸಿರುತ್ತಾರೆ. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:8ಬಿ(6)ರನ್ವಯ ಲೆಕ್ಕಪರಿಶೋಧಕರನ್ನು/ಲೆಕ್ಕಪರಿಶೋಧನಾ ಸಂಸ್ಥೆಯನ್ನು ಅನುಕ್ರಮವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಲೆಕ್ಕಪರಿಶೋಧನೆಗೆ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ 2027–28ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆಗಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಕುರಿತು ಮತ್ತು ಸದರಿಯವರಿಗೆ 2027–28ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನಾ ಶುಲ್ಕವಾಗಿ ನೀಡಬಹುದಾದ ವೃತ್ತಿ ಶುಲ್ಕವನ್ನು ನಿಗದಿಪಡಿಸುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ ಎಂದು ತಿಳಿಸಿದರು.

| ಕ್ರ. ಸಂ. | ಸಂಸ್ಥೆಯ ಹೆಸರು | ಸ್ಥಳ | ಶ್ರೇಣಿ |
|---|---|---|---|
| 1. | ವಿಜಯ್ ಪಂಚಪ್ಪ & ಕೋ., | ಬೆಂಗಳೂರು | ಎ |
| 2. | ಶ್ರೀ ಕಿರಣ್ ಹಿರೇಮಠ & ಕೋ., | ಬೆಳಗಾವಿ | ಎ |
| 3. | ಪಿ ಕೆ ಸುಬ್ರಹ್ಮಣ್ಯಂ & ಕೋ., | ಬೆಂಗಳೂರು | ಎ |
| 4. | ಹೆಗಡೆ ಗಿರಿ & ಅಸೋಸಿಯೇಟ್ಸ್ | ಬೆಂಗಳೂರು | ಎ |

ನಂತರ ಸಭೆಯು, ಸಂಯುಕ್ತ ಸಹಕಾರಿಯ 2027–28ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರಾಗಿ ವಿಜಯ್ ಪಂಚಪ್ಪ & ಕೋ., ಬೆಂಗಳೂರು ಇದರ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ರಾಘವೇಂದ್ರ ಪತಂಗೆ ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಆಂತರಿಕ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.2,10,000/–ಗಳ (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ತೆರಿಗೆಯನ್ನು ಹೊರತುಪಡಿಸಿ) ವೃತ್ತಿ ಶುಲ್ಕವನ್ನು ನಿಗದಿಪಡಿಸಲು ಸರ್ವಾನುಮತದಿಂದ ಅನುಮೋದಿಸಿತು. ಒಂದು ವೇಳೆ, ಯಾವುದೇ ಕಾರಣದಿಂದ ಪ್ರಥಮ ಆದ್ಯತೆಯ ಲೆಕ್ಕಪರಿಶೋಧಕರಿಗೆ ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ, ದ್ವಿತೀಯ ಆದ್ಯತೆಯಾದ ಶ್ರೀ ಕಿರಣ್ ಹಿರೇಮಠ & ಕೋ., ಬೆಳಗಾವಿ, ತೃತೀಯ

ಆದ್ಯತೆಯಾದ ಪಿ ಕೆ ಸುಬ್ರಹ್ಮಣ್ಯಂ & ಕೋ., ಬೆಂಗಳೂರು, ನಂತರದ ಆದ್ಯತೆಯಾದ ಹೆಗಡೆ ಗಿರಿ & ಅಸೋಸಿಯೇಟ್ಸ್ ಇವರಲ್ಲಿ ಅನುಕ್ರಮವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2027-28ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರಾಗಿ ವಿಜಯ್ ಪಂಚಪ್ಪ & ಕೋ., ಬೆಂಗಳೂರು ಇದರ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ರಾಘವೇಂದ್ರ ಪತಂಗೆ ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಆಂತರಿಕ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.2,10,000/-ಗಳ (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ತೆರಿಗೆಯನ್ನು ಹೊರತುಪಡಿಸಿ) ವೃತ್ತಿ ಶುಲ್ಕವನ್ನು ನಿಗದಿಪಡಿಸಲು ಸರ್ವಾನುಮತದಿಂದ ಅನುಮೋದಿಸಿತು. ಒಂದು ವೇಳೆ, ಯಾವುದೇ ಕಾರಣದಿಂದ ಪ್ರಥಮ ಆದ್ಯತೆಯ ಲೆಕ್ಕಪರಿಶೋಧಕರಿಗೆ ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ, ದ್ವಿತೀಯ ಆದ್ಯತೆಯಾದ ಶ್ರೀ ಕಿರಣ್ ಹಿರೇಮಠ & ಕೋ., ಬೆಳಗಾವಿ, ತೃತೀಯ ಆದ್ಯತೆಯಾದ ಪಿ ಕೆ ಸುಬ್ರಹ್ಮಣ್ಯಂ & ಕೋ., ಬೆಂಗಳೂರು, ನಂತರದ ಆದ್ಯತೆಯಾದ ಹೆಗಡೆ ಗಿರಿ & ಅಸೋಸಿಯೇಟ್ಸ್ ಇವರಲ್ಲಿ ಅನುಕ್ರಮವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 09 : 2026-27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2026-27ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಕಳೆದ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಿ, ಅನುಮೋದನೆ ಪಡೆದುಕೊಳ್ಳಲಾಗಿದ್ದು, ಪ್ರಸ್ತುತ ವರ್ಷ ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ವರ್ಷವಾಗಿರುವುದರಿಂದ ಸದರಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಷ್ಕರಣೆ ಮಾಡಿ ಸಭೆಗೆ ಮಂಡಿಸಲಾಗಿದೆ. ಈ ಕ್ರಿಯಾ ಯೋಜನೆಗೆ ಮಾನ್ಯ ಸದಸ್ಯರು ಸಲಹೆಗಳನ್ನು ನೀಡಿದಲ್ಲಿ ಅದನ್ನು ಪರಿಷ್ಕರಿಸಿ, ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2026-27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಈ ಕೆಳಗಿನಂತೆ ಸಂಯುಕ್ತ ಸಹಕಾರಿಯ 2026-27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## 2026-27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆ

**ಶಿಕ್ಷಣ ವಿಭಾಗ :**

**ಕಾರ್ಯಕ್ರಮಗಳು/ ಸೆಮಿನಾರ್‌ಗಳು:**

- ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಮತ್ತು ಬ್ಯಾಂಕಿಂಗ್ ವಿಷಯದ ಕುರಿತು ಅಲ್ಪಾವಧಿಯ ಡಿಪ್ಲೋಮಾ/ಪಿ.ಜಿ.ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವುದು.
- ರಾಜ್ಯ/ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸೆಮಿನಾರ್ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಹಯೋಗ ನೀಡುವುದು ಹಾಗೂ ಸೌಹಾರ್ದ ಸಹಕಾರಿ ಚಳುವಳಿ ಮತ್ತು ತತ್ವಗಳನ್ನು ಪ್ರಚಾರ ಮಾಡುವುದು.
- ಅಗತ್ಯಕ್ಕನುಗುಣವಾಗಿ ರಾಜ್ಯ ಮಟ್ಟದ/ವಿಭಾಗ ಮಟ್ಟದ/ಜಿಲ್ಲಾ ಮಟ್ಟದ ಸಹಕಾರ ಸಮಾವೇಶಗಳ ಆಯೋಜನೆ.
- ಸ್ವಾಯತ್ತ ಕಾಯ್ದೆಗಳ ಅಧ್ಯಯನ ನಡೆಸುವುದು ಹಾಗೂ ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸುವುದು.
- ಕಾಯ್ದೆ ಮತ್ತು ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಗೂ ಸೆಮಿನಾರ್‌ಗಳನ್ನು ಆಯೋಜಿಸುವುದು.
- ಸಹಕಾರ ಕ್ಷೇತ್ರದ ಜನಪ್ರತಿನಿಧಿಗಳೊಂದಿಗೆ ಸಂವಾದ/ಚಿಂತನ/ಮಾರ್ಗದರ್ಶನ ಕಾರ್ಯಕ್ರಮ ಆಯೋಜಿಸುವುದು.
- ಸಹಕಾರ ಕ್ಷೇತ್ರದ ಧುರೀಣರ/ಪ್ರಮುಖರ ಜೊತೆ ಸಂವಾದ ಕಾರ್ಯಕ್ರಮ ಆಯೋಜಿಸುವುದು.

- ಪದವಿ ಕಾಲೇಜು/ವಿಶ್ವವಿದ್ಯಾಲಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗಾಗಿ ಸಹಕಾರ ವಿಷಯ ಕುರಿತು ಕಾರ್ಯಕ್ರಮಗಳ ಆಯೋಜನೆ.
- ಸಂಯುಕ್ತ ಸಹಕಾರಿಯ ರಜತ ಮಹೋತ್ಸವದ ಅಂಗವಾಗಿ ವಿಭಾಗೀಯ ಸಮಾವೇಶಗಳು ಹಾಗೂ ರಾಜ್ಯ ಮಟ್ಟದ ಸಮಾವೇಶ.
- ಯುವ/ಮಹಿಳಾ/ವೃತ್ತಿಪರರ ಪ್ರತ್ಯೇಕ ರಾಜ್ಯ ಮಟ್ಟದ/ಜಿಲ್ಲಾ/ವಿಭಾಗೀಯ ಮಟ್ಟದ ಕಾರ್ಯಾಗಾರಗಳನ್ನು/ ಸಮಾವೇಶಗಳನ್ನು ಆಯೋಜಿಸುವುದು.
- ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕ್ರೀಡೋತ್ಸವ, ಜಾಗೃತಿ ಅಭಿಯಾನ/ಜಾಥಾ, ಬೀದಿ ನಾಟಕಗಳ ಆಯೋಜನೆ ಮಾಡುವ ಮೂಲಕ ಸೌಹಾರ್ದ ಸಹಕಾರಿ ಚಳುವಳಿಯ ಕುರಿತು ಅರಿವು ಮೂಡಿಸುವುದು.
- ಸಹಕಾರ ಕ್ಷೇತ್ರದ ಕುರಿತು ಜನ ಜಾಗೃತ ಅಭಿಯಾನ ಕೈಗೊಳ್ಳುವುದು.
- ಸೌಹಾರ್ದ ಸಹಕಾರಿ ಚಳುವಳಿ ಬೆಳೆದು ಬಂದ ದಾರಿ ಹಾಗೂ ಅವಕಾಶಗಳ ಕುರಿತು ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣ ಮತ್ತು ಸಮಾವೇಶಗಳನ್ನು ಹಮ್ಮಿಕೊಳ್ಳುವುದು.
- ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಸಾಮಾನ್ಯ ಸೇವಾ ಕೇಂದ್ರದ (ಸಿಎಸ್‌ಸಿ) ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವುದು.
- ಸಂಯುಕ್ತ ಸಹಕಾರಿಯನ್ನು ಡಿಜಿಟಲೀಕರಣಗೊಳಿಸುವುದು.

**ತರಬೇತಿ :**

- ಜಿಲ್ಲಾ ಅಥವಾ ತಾಲ್ಲೂಕುವಾರು ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಆಯೋಜಿಸುವುದು.
- ಇ–ಸ್ಟಾಂಪಿಂಗ್ ವ್ಯವಹಾರ ನಡೆಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಕಾರ್ಯಾಗಾರ ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳ ರಾಜ್ಯ/ಅಂತರರಾಜ್ಯ ಸಹಕಾರಿ ಅಧ್ಯಯನ ಪ್ರವಾಸಕ್ಕೆ ವ್ಯವಸ್ಥೆ ಮಾಡುವುದು.
- ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿಯವರಿಗೆ ತರಬೇತಿ ಆಯೋಜಿಸುವುದು.
- ಪ್ರತಿ ಜಿಲ್ಲೆಗಳಲ್ಲಿ ಅಗತ್ಯತೆಯ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮ ಆಯೋಜಿಸುವುದು.
- ಗ್ರಾಮ/ವಲಯ ಮಟ್ಟದಲ್ಲಿ ಸಮನ್ವಯ ಸಭೆ, ಕ್ಲಸ್ಟರ್ ತರಬೇತಿಗಳನ್ನು ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ/ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸದಸ್ಯ ಸಹಕಾರಿಗಳ ನಿರ್ದೇಶಕರುಗಳಿಗಾಗಿ ತರಬೇತಿ ಮತ್ತು ಶಿಕ್ಷಣ ನೀಡುವುದು.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ನೂತನ ಸಿಬ್ಬಂದಿಗಳಿಗಾಗಿ ಏಳು ದಿನಗಳ ಪ್ರಾರಂಭಿಕ ತರಬೇತಿ (Basic Foundation Course) ಆಯೋಜಿಸುವುದು.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಾಲ ನಿರ್ವಹಣಾ ಅಧಿಕಾರಿಗಳಿಗಾಗಿ ಎರಡು ದಿನಗಳ ತರಬೇತಿ ಆಯೋಜನೆ.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹಾಗೂ ಅಧ್ಯಕ್ಷರು, ನಿರ್ದೇಶಕರುಗಳಿಗಾಗಿ ಎರಡು ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ತರಬೇತುದಾರರ ಸಭೆ ಹಾಗೂ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವುದು.
- ಸದಸ್ಯ ಸಹಕಾರಿಗಳಿಗಾಗಿ ಐದು ದಿನದ ಹಾಗೂ 10 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದು.
- ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಮಾಧ್ಯಮದವರಿಗೆ ಮತ್ತು ಪತ್ರಕರ್ತರಿಗೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಯುವ ಜನತೆ ಹಾಗೂ ಮಹಿಳಾ ಸಹಕಾರಿಗಳ ರಾಜ್ಯಮಟ್ಟದ ಕಾರ್ಯಾಗಾರ ಆಯೋಜನೆ.
- ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ, 1959ರ ಕಾಯ್ದೆಯಲ್ಲಿರುವ ಸಹಕಾರ ಸಂಘಗಳಿಗೆ/ಬ್ಯಾಂಕುಗಳಿಗೆ ಸೌಹಾರ್ದ ಕಾಯ್ದೆ ಕುರಿತು ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು, ತರಬೇತಿಗಳನ್ನು ಹಮ್ಮಿಕೊಳ್ಳುವುದು.
- ಸಹಕಾರ ಕ್ಷೇತ್ರದ ಆಸಕ್ತರಿಗೆ ಅನುಕೂಲವಾಗುವಂತೆ ಆಡಿಯೋ/ವಿಡಿಯೋ ಮೂಲಕ ತರಬೇತಿ ಆಯೋಜಿಸುವುದು.
- ಆಭರಣ ಸಾಲ ನೀಡುತ್ತಿರುವ ಸೌಹಾರ್ದ ಸಹಕಾರಿಗಳಿಗಾಗಿ ಚಿನ್ನ ಮೌಲ್ಯಮಾಪನ ಹಾಗೂ ಆಭರಣ ಸಾಲ ಕುರಿತು ತರಬೇತಿ ಆಯೋಜಿಸುವುದು.

- AI ಮತ್ತು ಡಿಜಿಟಲ್ ಶಿಕ್ಷಣ ವ್ಯವಸ್ಥೆಯನ್ನು ಸಹಕಾರ ಕ್ಷೇತ್ರದಲ್ಲಿ ಅಳವಡಿಸುವುದು.
- ಪ್ರತಿ ಮುಖ್ಯಕಾರ್ಯನಿರ್ವಾಹಕರುಗಳಿಗೆ ಎಐ ಬಳಕೆ ಕುರಿತು ತರಬೇತಿ ನೀಡುವುದು

**ಪ್ರಚಾರ ಮತ್ತು ಅಭಿವೃದ್ಧಿ :**

- ಜನಪ್ರತಿನಿಧಿಗಳಿಗೆ/ಸಾರ್ವಜನಿಕರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳು ಸೇರಿ ಸಹೋದ್ಯಮ ನಡೆಸಲು, ಒಕ್ಕೂಟ ಸಹಕಾರಿಗಳ ರಚನೆಗೆ & ನೂತನ/ವಿನೂತನ ಸೌಹಾರ್ದ ಸಹಕಾರಿಗಳ ರಚನೆಗೆ ಪ್ರೋತ್ಸಾಹ ನೀಡುವುದು.
- ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗೆ ಪೂರಕವಾಗುವಂತಹ ನೂತನ ಪ್ರಕಟಣೆಗಳ ಮುದ್ರಣ.
- ಕೋ–ಆಪರೇಟಿವ್ ಕಮ್ಯುನಿಟಿ ರೇಡಿಯೋ ಕೇಂದ್ರದ ಸ್ಥಾಪನೆಗೆ ಕ್ರಮವಿಡುವುದು ಹಾಗೂ ರೇಡಿಯೋ, ಟೆಲಿವಿಷನ್ ಮಾಧ್ಯಮದ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ವೆಬ್‌ಸೈಟ್, ಇ–ಮೇಲ್, ಎಸ್‌ಎಂಎಸ್, ಸಾಮಾಜಿಕ ಜಾಲತಾಣಗಳ ನಿರ್ವಹಣೆಯಂತಹ ವಿವಿಧ ಸೇವೆಗಳನ್ನು ಸೌಹಾರ್ದ ಸಹಕಾರಿಗಳಿಗೆ ಕಲ್ಪಿಸಲು ಅಗತ್ಯ ಕಾರ್ಯ ನಿರ್ವಹಿಸುವುದು.
- ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಜಾಹೀರಾತುಗಳನ್ನು ನೀಡುವುದು ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪತ್ರಿಕಾ ಗೋಷ್ಠಿಗಳನ್ನು ನಡೆಸುವುದು.
- ಪತ್ರಿಕೆಯಲ್ಲಿ ಸಹಕಾರ ಕ್ಷೇತ್ರದ ಕುರಿತು ಅಂಕಣಗಳನ್ನು ಬರುವಂತೆ ಮಾಡುವುದು.
- ಸಹಕಾರಿಗಳಿಗೆ ಸಾಮಾಜಿಕ ಜಾಲತಾಣಗಳ ಸದ್ಬಳಕೆ ಕುರಿತು ಅರಿವು ಮೂಡಿಸುವುದು.
- ಯೂಟೂಬ್ ಚಾನೆಲ್‌ನ ಮೂಲಕ ಸಹಕಾರಿ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳ ಮಾಹಿತಿ ನೀಡುವುದು.
- ಟಿ.ವಿ. ಮಾಧ್ಯಮದಲ್ಲಿ ಸಹಕಾರ ಕ್ಷೇತ್ರ ಕುರಿತು ಸಂವಾದ ಕಾರ್ಯಕ್ರಮಗಳ ಆಯೋಜನೆ ಮಾಡಲು ಕ್ರಮವಿಡುವುದು.
- ಕಾಲೇಜು ವಿದ್ಯಾರ್ಥಿಗಳಿಗೆ ಸಹಕಾರ ಇಂಟರ್ನ್‌ಶಿಪ್‌ಗೆ ಅಗತ್ಯ ಸಹಕಾರ.

**ಸಂಶೋಧನೆ ಮತ್ತು ಅಭಿವೃದ್ಧಿ :**

- ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪ್ರಚುರಪಡಿಸಲು ಸಾಮಾಜಿಕ ಜಾಲತಾಣಗಳ ಬಳಕೆಯನ್ನು ವ್ಯಾಪಕಗೊಳಿಸುವುದು.
- ಸದಸ್ಯ ಸಹಕಾರಿಗಳಲ್ಲಿ ಸದಸ್ಯರು ಇಟ್ಟಿರುವ ಠೇವಣಿಗಳಿಗೆ ಠೇವಣಿ ಖಾತರಿ ಯೋಜನೆ ಜಾರಿ ಮಾಡುವುದು.
- ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಪಿಂಚಣಿ ಯೋಜನೆ, ಆರೋಗ್ಯ ವಿಮಾ ಯೋಜನೆಗಳ ಜಾರಿ ಕುರಿತು ಅಧ್ಯಯನ ನಡೆಸಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವುದು.
- ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ವಿಷಯವನ್ನು ಪಠ್ಯಪುಸ್ತಕಕ್ಕೆ ಅಳವಡಿಸುವ ಕುರಿತು ಪ್ರಯತ್ನ.
- ರಾಜ್ಯ ಮಟ್ಟದಲ್ಲಿ ಸಹಕಾರಿಗಳಿಗೆ ಮರು ಹಣಕಾಸು ಒದಗಿಸಬಹುದಾದ ಹಾಗೂ ಸಹಕಾರಿಗಳ ಹೆಚ್ಚುವರಿ ಹಣ ಠೇವಣಿಗಳ ಹೂಡಿಕೆಗೆ ಅವಕಾಶ ಒದಗಿಸುವ ರಾಜ್ಯ ಸೌಹಾರ್ದ ಸಹಕಾರಿಗಳ ಕೇಂದ್ರೀಯ ಸಂಸ್ಥೆ ಪ್ರಾರಂಭಿಸುವುದಕ್ಕೆ ಪ್ರಯತ್ನಿಸುವುದು.
- ವಿವಿಧ ರಾಜ್ಯಗಳ ಸಹಕಾರ ಕಾಯ್ದೆ ಹಾಗೂ ಸಹಕಾರ ಕ್ಷೇತ್ರದ ಅಧ್ಯಯನ ನಡೆಸುವುದು.
- ಸದಸ್ಯ ಸಹಕಾರಿಗಳ ಕೋರಿಕೆಯ ಮೇರೆಗೆ SWOT Analysis & GAP Analysis ಮಾಡುವ ವ್ಯವಸ್ಥೆ.
- ಸೌಹಾರ್ದ ಸಹಕಾರಿಗಳಲ್ಲಿನ ತಂತ್ರಜ್ಞಾನ ಬಳಕೆಗೆ ಪ್ರೋತ್ಸಾಹಿಸುವುದು.
- ಸೌಹಾರ್ದ ಸಹಕಾರಿಗಳಲ್ಲಿನ ಸೇವಾ ಕಾರ್ಯಚಟುವಟಿಕೆಗಳ ಮಾಹಿತಿ ಸಂಗ್ರಹ ಹಾಗೂ ಸಾಮಾಜಿಕ ಕಾರ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಬ್ಯಾಂಕುಗಳ ಸಾಲ ಸುಸ್ತಿ ಸಾಲ ವಸೂಲಾತಿಗೆ ಇರುವಂತೆ Asset Reconstruction Company ಗಳ ಮಾದರಿಯಲ್ಲಿ ಸೌಹಾರ್ದಗಳಿಗೂ ಒಂದು ಸಂಸ್ಥೆಯನ್ನು ಪ್ರಾರಂಭಿಸುವುದು.
- ಸಹಕಾರ ಕ್ಷೇತ್ರದ ಮೂಲಕ ಹೊಸ ಉದ್ಯಮಗಳ ಅನ್ವೇಷಣೆ ಹಾಗೂ ಕಾರ್ಯಾಗಾರ ಆಯೋಜನೆ.

➢ ಉನ್ನತ ಮಟ್ಟದ ಸಂಸ್ಥೆಯಿಂದ ವಿಭಿನ್ನ ರೀತಿಯ 25 ಸಹಕಾರಿಗಳ ಕೇಸ್ ಸ್ಟಡಿಗಳ ಪುಸ್ತಕ ಸಿದ್ಧಪಡಿಸುವುದು.

**ಸಾಮಾಜಿಕ ಕಳಕಳಿ :**

➢ ಪರಿಸರ ಸಂರಕ್ಷಣೆ ಹಾಗೂ ತಾಪಮಾನ ಬದಲಾವಣೆಗಾಗಿ ಎಲ್ಲಾ ಸಹಕಾರಿಗಳು ಬದ್ಧರಾಗಲು ಮತ್ತು ಪ್ರತಿ ವರ್ಷಕ್ಕೆ ಒಂದು ಸಹಕಾರಿಯು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕನಿಷ್ಠ 10 ಗಿಡಗಳನ್ನು ನೆಡುವುದರೊಂದಿಗೆ ಅವುಗಳನ್ನು ಪಾಲನೆ ಪೋಷಣೆ ಮಾಡಿ, ಮರವಾಗಿ ಬೆಳೆಸುವಂತೆ ಪ್ರೇರೇಪಿಸುವುದು.

➢ ಸೌಹಾರ್ದ ಸಹಕಾರಿಗಳು ನಡೆಸುವ ಸಾಮಾಜಿಕ ಕಾರ್ಯಚಟುವಟಿಕೆಗಳ ಮಾಹಿತಿ ಸಂಗ್ರಹ ಹಾಗೂ ಅವುಗಳಿಗೆ ಪ್ರಚಾರ ನೀಡುವ ಮೂಲಕ ಸಾಮಾಜಿಕ ಕಳಕಳಿ ತತ್ವವನ್ನು ಪ್ರಚುರಪಡಿಸುವುದು.

➢ ಸ್ವದೇಶಿ ವಸ್ತುಗಳ ಬಳಕೆಯನ್ನು ಉತ್ತೇಜಿಸುವುದು, ಸ್ಥಳೀಯ ಉತ್ಪನ್ನ ಹಾಗೂ ಸೇವೆಗಳ ಬಳಕೆಗೆ ಆದ್ಯತೆ ನೀಡುವುದು.

➢ ಸಹಕಾರಿಗಳ ಮೂಲಕ ಮಹಿಳಾ ಆರ್ಥಿಕ ಸಬಲೀಕರಣ.

➢ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ಜೀವ ವಿಮಾ ಸ್ಥಾಪನೆಗೆ ಕ್ರಮ.

➢ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಭಾರತ್ ಟ್ಯಾಕ್ಸಿ ವಿಸ್ತರಣೆಗೆ ಕ್ರಮ.

**ವಿಷಯ 10 : 2026–27ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾದ 2026–27ನೇ ಸಾಲಿನ ಮುಂಗಡ ಪತ್ರವನ್ನು 2025–26ನೇ ಸಾಲಿನ ಆರ್ಥಿಕ ವರದಿಗಳು ಹಾಗೂ 2026–27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯ ಆಧಾರದಲ್ಲಿ ಪರಿಷ್ಕರಿಸಿ, ಸಭೆಗೆ ಮಂಡಿಸಲಾಗಿದ್ದು, ಪರಿಶೀಲಿಸಿ, ಅನುಮೋದಿಸಲು ಸಭೆಗೆ ಕೋರಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಾಖಲಾತಿಗಳ ಡಿಜಿಟಲೀಕರಣಕ್ಕೆ ಆಡಳಿತ ವಿಭಾಗ ಪರಿಷ್ಕೃತ ಬಜೆಟ್ 2026–27ರ ಕ್ರ.ಸಂ.28ರಲ್ಲಿ ರೂ.21,50,000/–ಗಳನ್ನು ಹಾಗೂ ಶಿಕ್ಷಣ ನಿಧಿಯ ಆಡಳಿತಾತ್ಮಕ ವೆಚ್ಚ 2026–27ರ ಕ್ರ.ಸಂ.24ರಲ್ಲಿ ರೂ.21,50,000/–ಗಳನ್ನು ಮತ್ತು ದಾವಾ ನ್ಯಾಯಾಲಯ ವಿಭಾಗದ ವೆಚ್ಚಗಳಲ್ಲಿ ರೂ.20,00,000/–ಗಳನ್ನು ನಮೂದಿಸಲಾಗಿರುತ್ತದೆ. ಪ್ರಸ್ತುತ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಪ್ರಾಂತೀಯ ಕಛೇರಿಗಳು, ನ್ಯಾಯಾಲಯ ಹಾಗೂ ಇ–ಸ್ಟ್ಯಾಂಪಿಂಗ್ ವಿಭಾಗದ ದಾಖಲಾತಿಗಳಲ್ಲಿ ಪ್ರಸ್ತುತ ಸ್ಕ್ಯಾನಿಂಗ್ ಮಾಡಿಸಬೇಕಾದ ದಾಖಲಾತಿಗಳನ್ನು ಮರು ಪರಿಶೀಲಿಸಲಾಗಿ ಒಟ್ಟು 1,02,19,680 ಪುಟಗಳಿಗೆ ಅಂದಾಜು ರೂ.98,00,000/–ಗಳಾಗಲಿದ್ದು, ಈ ಪರಿಷ್ಕೃತ ಬಜೆಟ್ ಅನ್ನು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2026–27ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಪ್ರಸ್ತುತ ಸಭೆಗೆ ಮಂಡಿಸಿರುವ ದಾಖಲಾತಿಗಳ ಡಿಜಿಟಲೀಕರಣ ಮೊತ್ತವನ್ನು ಆಡಳಿತ ವಿಭಾಗ ಪರಿಷ್ಕೃತ ಬಜೆಟ್ 2026–27ರ ಕ್ರ.ಸಂ.28ರಲ್ಲಿ ರೂ.29,00,000/–ಗಳೆಂದು ಹಾಗೂ ಶಿಕ್ಷಣ ನಿಧಿಯ ಆಡಳಿತಾತ್ಮಕ ವೆಚ್ಚ 2026–27ರ ಕ್ರ.ಸಂ.24ರಲ್ಲಿ ರೂ.29,00,000/–ಗಳೆಂದು ಹಾಗೂ ದಾವಾ ನ್ಯಾಯಾಲಯ ವಿಭಾಗದ ವೆಚ್ಚಗಳಲ್ಲಿ ರೂ.40,00,000/–ಗಳೆಂದು ಪರಿಷ್ಕರಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ** : ಈ ಕೆಳಗಿನಂತೆ ಸಂಯುಕ್ತ ಸಹಕಾರಿಯ 2026–27ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಪ್ರಸ್ತುತ ಸಭೆಗೆ ಮಂಡಿಸಿರುವ ದಾಖಲಾತಿಗಳ ಡಿಜಿಟಲೀಕರಣ ಮೊತ್ತವನ್ನು ಆಡಳಿತ ವಿಭಾಗ ಪರಿಷ್ಕೃತ ಬಜೆಟ್ 2026–27ರ ಕ್ರ.ಸಂ.28ರಲ್ಲಿ ರೂ.29,00,000/–ಗಳೆಂದು ಹಾಗೂ ಶಿಕ್ಷಣ ನಿಧಿಯ ಆಡಳಿತಾತ್ಮಕ ವೆಚ್ಚ 2026–27ರ ಕ್ರ.ಸಂ.24ರಲ್ಲಿ ರೂ.29,00,000/–ಗಳೆಂದು ಹಾಗೂ ದಾವಾ ನ್ಯಾಯಾಲಯ ವಿಭಾಗದ ವೆಚ್ಚಗಳಲ್ಲಿ ರೂ.40,00,000/–ಗಳೆಂದು ಪರಿಷ್ಕರಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

### ಕ್ರೋಢೀಕೃತ ಬಜೆಟ್ – 2026–27

| ವೆಚ್ಚಗಳು | | | | | ಆದಾಯಗಳು | | | | |
|---|---|---|---|---|---|---|---|---|---|
| | ಅನುಮೋದಿತ | | ಪರಿಷ್ಕೃತ | | | ಅನುಮೋದಿತ | | ಪರಿಷ್ಕೃತ | |
| | ವ್ಯಯ | ಒಟ್ಟು | ವ್ಯಯ | ಒಟ್ಟು | | ಆಯ | ಒಟ್ಟು | ಆಯ | ಒಟ್ಟು |
| **ಶಿಕ್ಷಣ ನಿಧಿ ವೆಚ್ಚಗಳು** | | **13,41,37,500** | | **12,74,40,500** | **ಶಿಕ್ಷಣ ನಿಧಿ ಆದಾಯಗಳು** | | **16,50,50,000** | | **17,28,00,000** |
| ಕೇಂದ್ರ ಕಛೇರಿ | 7,57,48,000 | | **7,09,83,000** | | ಶಿಕ್ಷಣ ನಿಧಿ | 15,20,00,000 | | **15,80,00,000** | |
| ಬೆಳಗಾವಿ ವಿಭಾಗ | 1,99,82,000 | | **1,85,25,000** | | ಪ್ರತಿನಿಧಿ ಶುಲ್ಕ | 2,50,000 | | **10,00,000** | |
| ಕಲಬುರಗಿ ವಿಭಾಗ | 1,53,22,000 | | **1,43,91,000** | | ಬಡ್ಡಿ ಆದಾಯ | 1,20,00,000 | | **1,30,00,000** | |
| ಬೆಂಗಳೂರು ವಿಭಾಗ | 1,20,86,500 | | **1,13,34,500** | | ಪ್ರಕಟಣೆಗಳ ಮಾರಾಟ | 2,00,000 | | **2,00,000** | |
| ಮೈಸೂರು ವಿಭಾಗ | 1,09,99,000 | | **1,22,07,000** | | ಇತರೆ ಆದಾಯ | 6,00,000 | | **6,00,000** | |
| **ಆಡಳಿತ ವೆಚ್ಚಗಳು** | | **11,59,44,000** | | **11,07,59,500** | **ಆಡಳಿತ ಆದಾಯಗಳು** | | **7,30,00,000** | | **6,75,00,000** |
| ಕೇಂದ್ರ ಕಛೇರಿ | 7,44,29,000 | | **6,90,90,000** | | ವಾರ್ಷಿಕ ವಂತಿಗೆ | 7,00,00,000 | | **6,50,00,000** | |
| ಬೆಳಗಾವಿ ವಿಭಾಗ | 1,45,85,000 | | **1,51,38,000** | | ಬಡ್ಡಿ ಮತ್ತು ಇತರೆ | 30,00,000 | | **25,00,000** | |
| ಕಲಬುರಗಿ ವಿಭಾಗ | 1,10,79,000 | | **1,04,50,000** | | | | | | |
| ಬೆಂಗಳೂರು ವಿಭಾಗ | 85,60,000 | | **92,79,500** | | **ಇ – ಸ್ಟಾಂಪಿಂಗ್ ಆದಾಯಗಳು** | | **1,33,10,000** | | **1,13,10,000** |
| ಮೈಸೂರು ವಿಭಾಗ | 72,91,000 | | **68,02,000** | | ಬಡ್ಡಿ ಆದಾಯ | 1,30,00,000 | | **1,10,00,000** | |
| | | | | | ನಿರ್ವಹಣಾ ಶುಲ್ಕ | 3,10,000 | | **3,10,000** | |
| **ಇ – ಸ್ಟಾಂಪಿಂಗ್ ವೆಚ್ಚಗಳು** | | **68,10,000** | | **55,80,000** | | | | | |
| **ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯ ಸಂಬಂಧಿತ ವೆಚ್ಚಗಳು** | | **1,89,90,000** | | **2,35,90,000** | **ಸಹಕಾರ ನ್ಯಾಯಾಲಯ ಸಂಬಂಧಿತ ಆದಾಯಗಳು** | | **3,85,00,000** | | **3,85,00,000** |
| **ವೆಚ್ಚಕ್ಕೆ ಮೀರಿದ ಆದಾಯ** | | **1,39,78,500** | | **2,27,40,000** | **ಆದಾಯಕ್ಕೆ ಮೀರಿದ ವೆಚ್ಚ** | | **–** | | |
| **ಒಟ್ಟು** | | **28,98,60,000** | | **29,01,10,000** | **ಒಟ್ಟು** | | **28,98,60,000** | | **29,01,10,000** |

| **ಬಂಡವಾಳ ವೆಚ್ಚ** | **ಅನುಮೋದಿತ ಮೊತ್ತ** | | **ಪರಿಷ್ಕೃತ ಮೊತ್ತ** | |
|---|---|---|---|---|
| **ಭೂಮಿ/ನಿವೇಶನ ಖರೀದಿ** | | **–** | | **25,00,00,000** |
| **ಪೀಠೋಪಕರಣಗಳು** | | **2,00,00,000** | | **2,00,00,000** |
| ವಾಹನ | | **50,00,000** | | **50,00,000** |
| ಕಂಪ್ಯೂಟರ್/ಕಛೇರಿ ಸಲಕರಣೆಗಳು | | **25,00,000** | | **25,00,000** |
| ಕಟ್ಟಡ | | **2,00,00,000** | | **3,00,00,000** |
| | | **4,75,00,000** | | **30,75,00,000** |

**ಆಡಳಿತ ವಿಭಾಗ ಬಜೆಟ್ 2026–27**

| ಕ್ರ.ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ ಪ್ರಾಂತ | | ಕಲಬುರಗಿ ಪ್ರಾಂತ | | ಬೆಂಗಳೂರು ಪ್ರಾಂತ | | ಮೈಸೂರು ಪ್ರಾಂತ | | ಒಟ್ಟು ಬಜೆಟ್ ಮೊತ್ತ | |
|---|---|---|---|---|---|---|---|---|---|---|---|---|---|
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ಬಾಡಿಗೆ | – | – | – | – | – | – | – | – | 4,50,000 | 2,25,000 | 4,50,000 | 2,25,000 |
| 2 | ಕಛೇರಿ ನಿರ್ವಹಣೆ | 8,00,000 | 5,00,000 | 1,20,000 | 70,000 | 1,20,000 | 1,30,000 | 85,000 | – | 1,35,000 | 65,000 | 12,60,000 | 7,65,000 |
| 3 | ಕಂಪ್ಯೂಟರ್ ನಿರ್ವಹಣೆ | 3,20,000 | 1,00,000 | 1,80,000 | 15,000 | 1,60,000 | 30,000 | 55,000 | 15,000 | 72,000 | 12,000 | 7,87,000 | 1,72,000 |
| 4 | ತಂತ್ರಾಂಶ ನಿರ್ವಹಣೆ | 7,20,000 | 7,20,000 | 75,000 | – | 65,000 | – | 40,000 | – | 62,000 | – | 9,62,000 | 7,20,000 |
| 5 | ಜಲ ಮತ್ತು ವಿದ್ಯುತ್ | 9,00,000 | 3,50,000 | 3,50,000 | 2,00,000 | 1,80,000 | 1,25,000 | 65,000 | – | 60,000 | 20,000 | 15,55,000 | 6,95,000 |
| 6 | ಸಿಬ್ಬಂದಿ ಕಲ್ಯಾಣ | 5,20,000 | 3,00,000 | 1,20,000 | 1,20,000 | 70,000 | 70,000 | 55,000 | 55,000 | 65,000 | 65,000 | 8,30,000 | 6,10,000 |
| 7 | ಸ್ಥಳೀಯ ಓಡಾಟ | 3,00,000 | 35,000 | 80,000 | 15,000 | 45,000 | 10,000 | 35,000 | 25,000 | 32,000 | 5,000 | 4,92,000 | 90,000 |
| 8 | ಪೂಜಾ ವೆಚ್ಚಗಳು | 1,35,000 | 1,00,000 | 65,000 | 13,000 | 45,000 | 18,000 | 30,000 | 10,000 | 28,000 | 30,000 | 3,03,000 | 1,71,000 |
| 9 | ಬ್ಯಾಂಕ್ ವೆಚ್ಚಗಳು | 34,000 | 15,000 | 15,000 | 10,000 | 14,000 | 10,000 | 12,000 | 4,500 | 14,000 | 5,000 | 89,000 | 44,500 |
| 10 | ವಿಮೆ | 6,00,000 | 3,00,000 | 2,80,000 | – | 40,000 | – | 40,000 | – | 3,50,000 | – | 13,10,000 | 3,00,000 |
| 11 | ಸವಕಳಿ | 1,20,00,000 | 1,20,00,000 | – | – | – | – | – | – | – | – | 1,20,00,000 | 1,20,00,000 |
| 12 | ಮುದ್ರಣ ಮತ್ತು ಲೇಖನ ಸಾಮಗ್ರಿ | 22,00,000 | 15,00,000 | 2,80,000 | 1,00,000 | 1,35,000 | 75,000 | 1,35,000 | 50,000 | 85,000 | 65,000 | 28,35,000 | 17,90,000 |
| 13 | ಅಂಚೆ ವೆಚ್ಚ | 4,00,000 | 4,00,000 | 2,00,000 | 1,20,000 | 1,30,000 | 1,30,000 | 1,20,000 | 75,000 | 52,000 | 50,000 | 9,02,000 | 7,75,000 |
| 14 | ಕಾನೂನು/ವೃತ್ತಿ ನೈಪುಣ್ಯ ಶುಲ್ಕ | 18,00,000 | 20,00,000 | – | – | – | – | – | – | – | – | 18,00,000 | 20,00,000 |
| 15 | ಸಿಬ್ಬಂದಿ ವೆಚ್ಚಗಳು | 2,50,00,000 | 2,50,00,000 | 95,00,000 | 95,00,000 | 68,00,000 | 68,00,000 | 62,00,000 | 62,00,000 | 40,00,000 | 40,00,000 | 5,15,00,000 | 5,15,00,000 |
| 16 | ಪ್ರಯಾಣ ವೆಚ್ಚಗಳು | 12,00,000 | 1,20,000 | 1,45,000 | 1,10,000 | 80,000 | 65,000 | 82,000 | 15,000 | 66,000 | 20,000 | 15,73,000 | 3,30,000 |
| 17 | ದೂರವಾಣಿ ಇತ್ಯಾದಿ | 7,50,000 | 4,00,000 | 45,000 | 25,000 | 80,000 | 7,000 | 76,000 | 5,000 | 60,000 | 20,000 | 10,11,000 | 4,57,000 |
| 18 | ಪರಿವೀಕ್ಷಣೆ, ಭೇಟಿ ಇತ್ಯಾದಿ | 4,50,000 | 1,00,000 | 6,00,000 | 1,60,000 | 2,50,000 | 50,000 | 2,45,000 | 15,000 | 2,20,000 | 25,000 | 17,65,000 | 3,50,000 |
| 19 | ಆಡಳಿತ ಮಂಡಲಿ ವೆಚ್ಚಗಳು | 66,00,000 | 66,00,000 | – | – | – | – | – | – | – | – | 66,00,000 | 66,00,000 |
| 20 | ಉಪ ಸಮಿತಿ ವೆಚ್ಚಗಳು | 24,00,000 | 24,00,000 | 2,80,000 | – | 2,45,000 | – | 2,10,000 | 2,10,000 | 1,50,000 | 1,50,000 | 32,85,000 | 27,60,000 |
| 21 | ಸಾಮಾನ್ಯ ಸಭೆ ವೆಚ್ಚಗಳು | 75,00,000 | 75,00,000 | – | – | – | – | – | – | – | – | 75,00,000 | 75,00,000 |
| 22 | ಸಮಾಪನೆ ಸಂಬಂಧಿತ ವೆಚ್ಚಗಳು | 35,00,000 | 15,00,000 | – | 1,50,000 | | 1,00,000 | – | 1,00,000 | – | 35,000 | 35,00,000 | 18,85,000 |
| 23 | ಕಟ್ಟಡ ನಿರ್ವಹಣೆ | 15,00,000 | 10,00,000 | 6,50,000 | 80,000 | 5,80,000 | 1,00,000 | 2,45,000 | – | 6,00,000 | 1,50,000 | 35,75,000 | 13,30,000 |
| 24 | ಜಿಲ್ಲಾ ಕಛೇರಿ ವೆಚ್ಚಗಳು | – | – | 12,00,000 | 10,00,000 | 6,60,000 | 5,00,000 | 6,50,000 | 6,50,000 | 5,80,000 | 3,50,000 | 30,90,000 | 25,00,000 |
| 25 | ವಾಹನ ಮತ್ತು ನಿರ್ವಹಣೆ | 20,00,000 | 10,00,000 | 4,00,000 | 2,00,000 | 2,80,000 | 2,30,000 | 1,80,000 | – | 2,10,000 | 1,10,000 | 30,70,000 | 15,40,000 |
| 26 | ಜಿಎಸ್‌ಟಿ ಇನ್‌ಎಲಿಜಿಬಲ್ ಟ್ಯಾಕ್ಸ್ | 12,00,000 | 14,00,000 | – | 6,00,000 | 11,00,000 | 5,00,000 | – | 3,00,000 | – | 3,50,000 | 23,00,000 | 31,50,000 |
| 27 | ಡೈರಿ ಮತ್ತು ಕ್ಯಾಲೆಂಡರ್ | – | 10,00,000 | | | | | | | | | | 10,00,000 |
| 28 | ದಾಖಲಾತಿಗಳ ಡಿಜಿಟಲೀಕರಣ | – | 11,50,000 | – | 6,50,000 | – | 4,00,000 | – | 4,00,000 | – | 3,00,000 | – | 29,00,000 |
| 29 | ಅವಲೋಕನಾ /ಸಂಪರ್ಕ ಸಭೆಗಳು | – | – | | 15,00,000 | | 8,00,000 | | 8,50,000 | – | 5,00,000 | | 36,50,000 |
| 30 | ಇತರೆ | 16,00,000 | 16,00,000 | – | 5,00,000 | – | 3,00,000 | – | 3,00,000 | – | 2,50,000 | 16,00,000 | 29,50,000 |
| | **ಒಟ್ಟು** | **7,44,29,000** | **6,90,90,000** | **1,45,85,000** | **1,51,38,000** | **1,10,79,000** | **1,04,50,000** | **85,60,000** | **92,79,500** | **72,91,000** | **68,02,000** | **11,59,44,000** | **11,07,59,500** |

## ಶಿಕ್ಷಣ ವಿಭಾಗ ಬಜೆಟ್ 2026–27

| ಕ್ರ. ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ ಪ್ರಾಂತ | | ಕಲಬುರಗಿ ಪ್ರಾಂತ | | ಬೆಂಗಳೂರು ಪ್ರಾಂತ | | ಮೈಸೂರು ಪ್ರಾಂತ | | ಒಟ್ಟು ಬಜೆಟ್ ಮೊತ್ತ | |
|---|---|---|---|---|---|---|---|---|---|---|---|---|---|
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ತರಬೇತಿ ಕಾರ್ಯಕ್ರಮಗಳು (ರಜತ ಮಹೋತ್ಸವ ಕಾರ್ಯಕ್ರಮಗಳು ಸೇರಿದಂತೆ) | 1,40,00,000 | 1,40,00,000 | 60,00,000 | 60,00,000 | 50,00,000 | 50,00,000 | 35,00,000 | 35,00,000 | 25,00,000 | 25,00,000 | 3,10,00,000 | 3,10,00,000 |
| 2 | ಅವಲೋಕನ/ಸಂಪರ್ಕ ಸಭೆಗಳು | – | – | 10,00,000 | 5,00,000 | 7,50,000 | 2,50,000 | 4,50,000 | 2,00,000 | 4,50,000 | 2,00,000 | 26,50,000 | 11,50,000 |
| 3 | ಪ್ರಚಾರ/ಪ್ರೋತ್ಸಾಹಕ ಚಟುವಟಿಕೆಗಳು | 75,00,000 | 50,00,000 | 8,00,000 | 5,00,000 | 4,50,000 | 4,50,000 | 3,50,000 | 4,00,000 | 2,80,000 | 2,50,000 | 93,80,000 | 66,00,000 |
| 4 | ಸ್ವಾಭಿಮಾನಿ ಸಹಕಾರಿ | 25,00,000 | 16,00,000 | – | – | – | – | – | – | – | – | 25,00,000 | 16,00,000 |
| 5 | ಸಹಕಾರ ಸಪ್ತಾಹ | 35,00,000 | 35,00,000 | – | – | – | – | – | – | – | – | 35,00,000 | 35,00,000 |
| 6 | ಸಂಶೋಧನೆ ಮತ್ತು ಅಭಿವೃದ್ಧಿ | 20,00,000 | 20,00,000 | – | – | – | – | – | – | – | – | 20,00,000 | 20,00,000 |
| 7 | ಸಮಿತಿ/ಮಂಡಲಿ ಸಭೆ ವೆಚ್ಚಗಳು | 40,00,000 | 20,00,000 | – | – | – | – | – | – | – | – | 40,00,000 | 20,00,000 |
| 8 | ಆಡಳಿತಾತ್ಮಕ ವೆಚ್ಚಗಳು | 1,72,48,000 | 1,78,83,000 | 26,82,000 | 20,25,000 | 21,22,000 | 16,91,000 | 12,86,500 | 7,34,500 | 17,69,000 | 17,57,000 | 2,51,07,500 | 2,40,90,500 |
| 9 | ಸಿಬ್ಬಂದಿ ವೆಚ್ಚಗಳು | 2,50,00,000 | 2,50,00,000 | 95,00,000 | 95,00,000 | 70,00,000 | 70,00,000 | 65,00,000 | 65,00,000 | 55,00,000 | 55,00,000 | 5,35,00,000 | 5,35,00,000 |
| 10 | ಪೂಜಾ/ಕಟ್ಟಡ ಪೂಜಾ ವೆಚ್ಚಗಳು | – | – | – | – | – | – | | – | 5,00,000 | 20,00,000 | 5,00,000 | 20,00,000 |
| | **ಒಟ್ಟು** | **7,57,48,000** | **7,09,83,000** | **1,99,82,000** | **1,85,25,000** | **1,53,22,000** | 1,43,91,000 | **1,20,86,500** | **1,13,34,500** | **1,09,99,000** | **1,22,07,000** | **13,41,37,500** | **12,74,40,500** |

| ಶಿಕ್ಷಣ ನಿಧಿಯ ಆಡಳಿತಾತ್ಮಕ ವೆಚ್ಚ– 2026–27 | | | | | | | | | | | | | |
|---|---|---|---|---|---|---|---|---|---|---|---|---|---|
| ಕ್ರ.ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ | | ಕಲಬುರಗಿ | | ಬೆಂಗಳೂರು | | ಮೈಸೂರು | | ಒಟ್ಟು ಬಜೆಟ್ ಮೊತ್ತ | |
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ಬಾಡಿಗೆ | | | | | – | | – | | 4,50,000 | 2,25,000 | 4,50,000 | 2,25,000 |
| 2 | ಕಛೇರಿ ನಿರ್ವಹಣೆ | 3,50,000 | 5,00,000 | 2,20,000 | 70,000 | 2,00,000 | 1,30,000 | 1,20,000 | – | 80,000 | 65,000 | 9,70,000 | 7,65,000 |
| 3 | ಕಂಪ್ಯೂಟರ್ ನಿರ್ವಹಣೆ | 3,00,000 | 1,00,000 | 1,50,000 | 15,000 | 1,25,000 | 30,000 | 65,000 | 15,000 | 35,000 | 12,000 | 6,75,000 | 1,72,000 |
| 4 | ಜೆರಾಕ್ಸ | 85,000 | 1,25,000 | 40,000 | 25,000 | 28,000 | 28,000 | 18,000 | 5,000 | – | – | 1,71,000 | 1,83,000 |
| 5 | ತಂತ್ರಾಂಶ ನಿರ್ವಹಣೆ | 5,00,000 | 6,00,000 | 40,000 | – | 45,000 | – | 25,000 | – | 22,000 | – | 6,32,000 | 6,00,000 |
| 6 | ಜಲ ಮತ್ತು ವಿದ್ಯುತ್ | 5,50,000 | 3,50,000 | 2,80,000 | 2,00,000 | 2,65,000 | 1,25,000 | 1,20,000 | – | 70,000 | 20,000.00 | 12,85,000 | 6,95,000 |
| 7 | ಸಿಬ್ಬಂದಿ ಕಲ್ಯಾಣ | 2,40,000 | 3,00,000 | 1,75,000 | 2,05,000 | 1,25,000 | 1,50,000 | 85,000 | 85,000 | 65,000 | 25,000 | 6,90,000 | 7,65,000 |
| 8 | ಸಾರ್ವಜನಿಕ ಸಂಬಂಧಿತ/ಅತಿಥಿ ಅನುಚರಣೆ ವೆಚ್ಚ | 6,80,000 | 3,00,000 | 1,35,000 | 1,00,000 | 1,20,000 | 80,000 | 40,000 | 15,000 | 45,000 | 45,000 | 10,20,000 | 5,40,000 |
| 9 | ಸ್ಥಳೀಯ ಓಡಾಟ | 1,25,000 | 35,000 | 70,000 | 15,000 | 58,000 | 10,000 | 62,000 | 20,000 | 65,000 | 5,000 | 3,80,000 | 85,000 |
| 10 | ಬ್ಯಾಂಕ್ ವೆಚ್ಚಗಳು | 25,000 | 15,000 | 9,000 | 10,000 | 8,000 | 10,000 | 6,500 | 4,500 | 65,000 | 5,000 | 1,13,500 | 44,500 |
| 11 | ವಿಮೆ | 3,40,000 | 3,00,000 | 30,000 | – | 15,000 | 30,000 | 15,000 | – | 12,000 | – | 4,12,000 | 3,30,000 |
| 12 | ಸವಕಳಿ | 1,20,00,000 | 1,00,00,000 | 0 | – | – | – | – | – | – | – | 1,20,00,000 | 1,00,00,000 |
| 13 | ಮುದ್ರಣ ಮತ್ತು ಲೇಖನ ಸಾಮಗ್ರಿ | 6,80,000 | 7,50,000 | 3,65,000 | 1,00,000 | 3,00,000 | 75,000 | 1,50,000 | 50,000 | 1,80,000 | 65,000 | 16,75,000 | 10,40,000 |
| 14 | ಅಂಚೆವೆಚ್ಚ | 4,20,000 | 4,00,000 | 2,25,000 | 1,20,000 | 1,10,000 | 1,30,000 | 1,00,000 | 75,000 | 82,000 | 50,000 | 9,37,000 | 7,75,000 |
| 15 | ನಿಯತಕಾಲಿಕಗಳು | 60,000 | 30,000 | 38,000 | 12,000 | 30,000 | 30,000 | 23,000 | – | 22,000 | 22,000 | 1,73,000 | 94,000 |
| 16 | ಪುಸ್ತಕಗಳು(ಲೈಬ್ರರಿ) | 58,000 | 58,000 | 20,000 | 20,000 | 18,000 | 18,000 | 15,000 | 10,000 | 13,000 | 13,000 | 1,24,000 | 1,19,000 |
| 17 | ದೂರವಾಣಿ ಇತ್ಯಾದಿ | 3,50,000 | 3,00,000 | 1,45,000 | 25,000 | 85,000 | 7,000 | 30,000 | 5,000 | 65,000 | 20,000 | 6,75,000 | 3,57,000 |
| 18 | ಪ್ರಯಾಣ ವೆಚ್ಚಗಳು | 2,65,000 | 1,20,000 | 1,40,000 | 1,10,000 | 1,15,000 | 65,000 | 80,000 | 15,000 | 90,000 | 20,000 | 6,90,000 | 3,30,000 |
| 19 | ನಿರ್ದೇಶಕರ ಪ್ರಯಾಣ ವೆಚ್ಚ | 2,20,000 | 50,000 | 85,000 | 55,000 | 50,000 | 25,000 | 65,000 | 25,000 | 65,000 | 25,000 | 4,85,000 | 1,80,000 |
| 20 | ವಾಹನ ನಿರ್ವಹಣೆ ಮತ್ತು ಇಂಧನ | – | 8,00,000 | 2,20,000 | 2,00,000 | 2,10,000 | 2,30,000 | 1,20,000 | – | 2,20,000 | 2,10,000 | 7,70,000 | 14,40,000 |
| 21 | ವೃತ್ತಿ ಶುಲ್ಕ | – | 5,00,000 | – | – | – | – | – | – | – | – | – | 5,00,000 |
| 22 | ಪೂಜಾ ವೆಚ್ಚ | – | 1,00,000 | 65,000 | 13,000 | 35,000 | 18,000 | 22,000 | 10,000 | 23,000 | 30,000 | 1,45,000 | 1,71,000 |
| 23 | ಕಟ್ಟಡ ನಿರ್ವಹಣೆ | – | 10,00,000 | 2,30,000 | 80,000 | 1,80,000 | 1,00,000 | 1,25,000 | – | 1,00,000 | 6,00,000 | 6,35,000 | 17,80,000 |
| 24 | ದಾಖಲಾತಿಗಳ ಡಿಜಿಟಲೀಕರಣ | – | 11,50,000 | | 6,50,000 | – | 4,00,000 | – | 4,00,000 | – | 3,00,000 | | 29,00,000 |
| | ಒಟ್ಟು | **1,72,48,000** | **1,78,83,000** | **26,82,000** | **20,25,000** | **21,22,000** | **16,91,000** | **12,86,500** | **7,34,500** | **17,69,000** | **17,57,000** | **2,51,07,500** | **2,40,90,500** |

| ಇ ಸ್ಟಾಂಪಿಂಗ್ ವಿಭಾಗ | | | |
|---|---|---|---|
| ವೆಚ್ಚಗಳು 2026–27 | | | |
| ಕ್ರ.ಸಂ. | ವಿವರ | ಅನುಮೋದಿತ | ಪರಿಷ್ಕೃತ |
| 1 | ಕಂಪ್ಯೂಟರ್ ನಿರ್ವಹಣೆ | 1,20,000.00 | 1,00,000.00 |
| 2 | ಕಟ್ಟಡ ನಿರ್ವಹಣೆ | 2,10,000.00 | 2,00,000.00 |
| 3 | ಜಲ ಮತ್ತು ವಿದ್ಯುತ್ | 2,15,000.00 | 2,15,000.00 |
| 4 | ಸಿಬ್ಬಂದಿ ಕಲ್ಯಾಣ | 80,000.00 | 70,000.00 |
| 5 | ಸ್ಥಳೀಯ ಓಡಾಟ | 70,000.00 | 65,000.00 |
| 6 | ಕಛೇರಿ ನಿರ್ವಹಣೆ | 1,15,000.00 | 1,00,000.00 |
| 7 | ಅಂಚೆ ವೆಚ್ಚ | 1,25,000.00 | 1,00,000.00 |
| 8 | ಮುದ್ರಣ ಮತ್ತು ಲೇಖನ ಸಾಮಗ್ರಿ | 1,80,000.00 | 1,50,000.00 |
| 9 | ಸಿಬ್ಬಂದಿ ವೆಚ್ಚಗಳು | 45,00,000.00 | 35,00,000.00 |
| 10 | ವೃತ್ತಿ ನೈಪುಣ್ಯ ಶುಲ್ಕ | 1,00,000.00 | 1,00,000.00 |
| 11 | ಸಾರ್ವಜನಿಕ ಸಂಪರ್ಕ | 65,000.00 | 65,000.00 |
| 12 | ದೂರವಾಣಿ | 2,10,000.00 | 60,000.00 |
| 13 | ತರಬೇತಿ | 6,00,000.00 | 6,50,000.00 |
| 14 | ಪ್ರಯಾಣ ವೆಚ್ಚಗಳು | 65,000.00 | 65,000.00 |
| 15 | ಪೂಜಾ ವೆಚ್ಚಗಳು | 30,000.00 | 15,000.00 |
| 16 | ಇತರೆ | 1,25,000.00 | 1,25,000.00 |
| | **ಒಟ್ಟು** | **68,10,000.00** | **55,80,000.00** |

| ದಾವಾ ನ್ಯಾಯಾಲಯ ವಿಭಾಗ | | |
|---|---|---|
| ವೆಚ್ಚಗಳು 2026–27 | | |
| ವಿವರ | ಅನುಮೋದಿತ | ಪರಿಷ್ಕೃತ |
| ಕಂಪ್ಯೂಟರ್ ನಿರ್ವಹಣೆ | 1,15,000.00 | 1,00,000.00 |
| ಜಲ ಮತ್ತು ವಿದ್ಯುತ್ | 1,20,000.00 | 1,20,000.00 |
| ಸಿಬ್ಬಂದಿ ಕಲ್ಯಾಣ | 1,15,000.00 | 1,30,000.00 |
| ಸ್ಥಳೀಯ ಓಡಾಟ | 1,10,000.00 | 1,10,000.00 |
| ಕಛೇರಿ ನಿರ್ವಹಣೆ | 2,20,000.00 | 1,50,000.00 |
| ಅಂಚೆ ವೆಚ್ಚ | 15,00,000.00 | 17,00,000.00 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 4,00,000.00 | 5,50,000.00 |
| ಸಿಬ್ಬಂದಿ ವೆಚ್ಚಗಳು | 1,50,00,000.00 | 1,55,00,000.00 |
| ಸಾರ್ವಜನಿಕ ಸಂಪರ್ಕ | 1,20,000.00 | 1,00,000.00 |
| ದೂರವಾಣಿ | 85,000.00 | 60,000.00 |
| ಪ್ರಯಾಣ ವೆಚ್ಚಗಳು | 70,000.00 | 90,000.00 |
| ಕಟ್ಟಡ ನಿರ್ವಹಣೆ | 75,000.00 | 80,000.00 |
| ವಾಹನ/ ಪ್ರಯಾಣ ವೆಚ್ಚ | 5,25,000.00 | 5,00,000.00 |
| ವೃತ್ತಿ ನೈಪುಣ್ಯ ಶುಲ್ಕ | 3,10,000.00 | 2,00,000.00 |
| ಪೂಜಾ ವೆಚ್ಚಗಳು | 1,00,000.00 | 50,000.00 |
| ದಾಖಲಾತಿಗಳ ಡಿಜಿಟಲೀಕರಣ | – | 40,00,000.00 |
| ಇತರೆ | 1,25,000.00 | 1,50,000.00 |
| **ಒಟ್ಟು** | **1,89,90,000.00** | **2,35,90,000.00** |

**ವಿಷಯ 11 : 2027–28ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2027–28ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಗೆ ನೀಡಿದ್ದು, ಇದನ್ನು ಪರಿಶೀಲಿಸಿ, ಮಾನ್ಯ ಸದಸ್ಯರು ನೀಡುವ ಸಲಹೆಗಳನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಪುನಃ ಮಂಡನೆ ಮಾಡಿ, ಪರಿಷ್ಕರಿಸಿ, ಮುಂದಿನ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಿ, ಅನುಮೋದನೆ ಪಡೆದುಕೊಂಡು, ಅದರಂತೆ ಕಾರ್ಯರೂಪಕ್ಕೆ ತರಲಾಗುವುದು. ಈ ಕರಡು ವಾರ್ಷಿಕ ಕ್ರಿಯಾ ಯೋಜನೆಗೆ ಮಾನ್ಯ ಸದಸ್ಯರು ಸಂಯುಕ್ತ ಸಹಕಾರಿಗೆ ಇ–ಮೇಲ್ ಮೂಲಕ, ಪತ್ರದ ಮೂಲಕ, ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಸಲಹೆಗಳನ್ನು ನೀಡಬಹುದಾಗಿರುತ್ತದೆ. ಪ್ರಸ್ತುತ ಸಂಯುಕ್ತ ಸಹಕಾರಿಯ 2027–28ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2027–28ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸರ್ವಾನುಮತದಿಂದ ಅನುಮೋದಿಸಿ, ಈ ಕ್ರಿಯಾ ಯೋಜನೆಗೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

ನಿರ್ಣಯ : 2027–28ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಈ ಕ್ರಿಯಾ ಯೋಜನೆಗೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 12 : 2027–28ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2027–28ನೇ ಸಾಲಿನ ಕರಡು ಮುಂಗಡ ಪತ್ರವನ್ನು ಸಭೆಗೆ ನೀಡಿದ್ದು, ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2027–28ನೇ ಸಾಲಿನ ಕರಡು ಮುಂಗಡ ಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿ, ಈ ಮುಂಗಡ ಪತ್ರಕ್ಕೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

ನಿರ್ಣಯ : 2027–28ನೇ ಸಾಲಿನ ಕರಡು ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಈ ಮುಂಗಡ ಪತ್ರಕ್ಕೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 13 : ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ಮೈಸೂರು ಪ್ರಾಂತದ ಕಛೇರಿ ಹಾಗೂ ಕೈಗಾರಿಕಾ ಸಹಕಾರ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತು ಆಗಿರುವ ಬೆಳವಣಿಗೆಗಳ ಬಗ್ಗೆ.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಭರವಸೆ ನೀಡಿರುವಂತೆ ಬೆಂಗಳೂರು, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತೀಯ ಕಛೇರಿಗಳಲ್ಲಿ ಸ್ವಂತ ಕಟ್ಟಡವನ್ನು ಹೊಂದಲಾಗಿದ್ದು, ಮೈಸೂರಿನ ಸ್ವಂತ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ. ಮೈಸೂರು ಪ್ರಾಂತೀಯ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಯು ಆಡಳಿತ ಮಂಡಲಿಯ ಅನುಮೋದನೆಯಂತೆ ಮೈಸೂರು ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣ ಉಪಸಮಿತಿಯ ಮೇಲುಸ್ತುವಾರಿಯಲ್ಲಿ ಪ್ರಗತಿಯಲ್ಲಿದ್ದು, ಮೈರಿಯಾಡ್ ಜಾಮಿಟ್ರೀಸ್‌ರವರು ಕನ್ಸಲ್ಟೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರೂ.2.34 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗೆ ಟೆಂಡರ್ ಮೂಲಕ ಎಲ್1 ಸಂಸ್ಥೆಯಾದ ದೈವಿಕ್ ಕನ್‌ಸ್ಟ್ರಕ್ಷನ್ಸ್, ಬೆಂಗಳೂರು ಇವರಿಗೆ ಕಾರ್ಯಾದೇಶ ನೀಡಲಾಗಿದ್ದು, ಪ್ರಸ್ತುತ ತಳ, ನೆಲ ಹಾಗೂ ಮೊದಲನೇಯ ಮಹಡಿಯ ಗೋಡೆ, ಪ್ಲಾಸ್ಟರಿಂಗ್ ಮತ್ತು ಎಲೆಕ್ಟ್ರಿಕಲ್ ಕಂಡ್ಯೂಟ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಮೇಲ್ಮಹಡಿ, ಎಲಿವೇಶನ್ ಹಾಗೂ ಹೊರಾಂಗಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಲಿಫ್ಟ್, ಶಾಶ್ವತ ವಿದ್ಯುತ್ ಸಂಪರ್ಕ/ಟ್ರಾನ್ಸ್‌ಫಾರ್ಮರ್ ಹಾಗೂ ಒಳಾಂಗಣ ಕಾಮಗಾರಿಗಳಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಒಳಾಂಗಣ ಕಾಮಗಾರಿಯನ್ನು ಟೆಂಡರ್ ಮೂಲಕ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. ಇದುವರೆಗೆ ಕಟ್ಟಡ ನಿರ್ಮಾಣದ ಗುತ್ತಿಗೆದಾರರಿಗೆ ಮೂರು ಚಾಲ್ತಿ ಬಿಲ್‌ಗಳ ಮೂಲಕ ತೆರಿಗೆ ಸೇರಿದಂತೆ ಒಟ್ಟು ರೂ.1,34,08,260/–ಗಳನ್ನು ಹಾಗೂ ಕನ್ಸಲ್ಟೆಂಟ್‌ರವರಿಗೆ ಸಿವಿಲ್ ಕಾಮಗಾರಿಗಳಿಗೆ ಕನ್ಸಲ್ಟೆಂಟ್ ಶುಲ್ಕ ರೂ.8,10,000/–ಗಳನ್ನು ಹಾಗೂ ಒಳಾಂಗಣ ವಿನ್ಯಾಸದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಹಂತ 01ರ ಮೊತ್ತ ರೂ.1,00,000/–ಗಳ ಕನ್ಸಲ್ಟೆಂಟ್ ಶುಲ್ಕವನ್ನು ಪಾವತಿಸಲಾಗಿದೆ. ಕಟ್ಟಡದ ಉಳಿದ

ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಅಗತ್ಯ ಪ್ರಮಾಣಪತ್ರ/ಅನುಮತಿಗಳನ್ನು ಪಡೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ನಂತರ ಸಭೆಯು, ಮೈಸೂರು ಪ್ರಾಂತೀಯ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಉಳಿದ ಕಟ್ಟಡ ನಿರ್ಮಾಣ, ಲಿಫ್ಟ್, ಶಾಶ್ವತ ವಿದ್ಯುತ್/ಟ್ರಾನ್ಸ್‌ಫಾರ್ಮರ್ ಹಾಗೂ ಒಳಾಂಗಣ ಕಾಮಗಾರಿಗಳನ್ನು ನಿಯಮಾನುಸಾರ ತ್ವರಿತವಾಗಿ ಪೂರ್ಣಗೊಳಿಸಿ, ಅಗತ್ಯ ಪ್ರಮಾಣಪತ್ರ ಹಾಗೂ ಅನುಮತಿಗಳನ್ನು ಪಡೆಯಲು ಕ್ರಮವಹಿಸುವಂತೆ ಮತ್ತು ಒಳಾಂಗಣ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಂಡು ಆದಷ್ಟು ಶೀಘ್ರವಾಗಿ ಕಟ್ಟಡವನ್ನು ಉದ್ಘಾಟನೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಮೈಸೂರು ಕಟ್ಟಡದ ಒಳಾಂಗಣ ವಿನ್ಯಾಸ ಕಾರ್ಯಕ್ಕೆ ತಗಲುವ ರೂ.2,00,00,000/-ಗಳು ಮೀರದಂತೆ ಮೊತ್ತವನ್ನು ಸಂಯುಕ್ತ ಸಹಕಾರಿಯ ಸಂಪನ್ಮೂಲದಿಂದ ಭರಿಸಲು ಸರ್ವಾನುಮತದಿಂದ ತೀರ್ಮಾನಿಸಿತು.

**ನಿರ್ಣಯ** : ಮೈಸೂರು ಪ್ರಾಂತೀಯ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಉಳಿದ ಕಟ್ಟಡ ನಿರ್ಮಾಣ, ಲಿಫ್ಟ್, ಶಾಶ್ವತ ವಿದ್ಯುತ್/ಟ್ರಾನ್ಸ್‌ಫಾರ್ಮರ್ ಹಾಗೂ ಒಳಾಂಗಣ ಕಾಮಗಾರಿಗಳನ್ನು ನಿಯಮಾನುಸಾರ ತ್ವರಿತವಾಗಿ ಪೂರ್ಣಗೊಳಿಸಿ, ಅಗತ್ಯ ಪ್ರಮಾಣಪತ್ರ ಹಾಗೂ ಅನುಮತಿಗಳನ್ನು ಪಡೆಯಲು ಕ್ರಮವಹಿಸುವಂತೆ ಮತ್ತು ಒಳಾಂಗಣ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಂಡು ಆದಷ್ಟು ಶೀಘ್ರವಾಗಿ ಕಟ್ಟಡವನ್ನು ಉದ್ಘಾಟನೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಮೈಸೂರು ಕಟ್ಟಡದ ಒಳಾಂಗಣ ವಿನ್ಯಾಸ ಕಾರ್ಯಕ್ಕೆ ತಗಲುವ ರೂ.2,00,00,000/-ಗಳು ಮೀರದಂತೆ ಮೊತ್ತವನ್ನು ಸಂಯುಕ್ತ ಸಹಕಾರಿಯ ಸಂಪನ್ಮೂಲದಿಂದ ಭರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 14** : **ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸಿನ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಹಕಾರಿ ವ್ಯವಸ್ಥೆಯಲ್ಲಿ ಸಹಕಾರ ಶಿಕ್ಷಣದ ಅಧ್ಯಯನವು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದೆ. ಅದರಂತೆ, ಸಂಯುಕ್ತ ಸಹಕಾರಿಯಿಂದಲೂ ಸಹ ಸಹಕಾರ ಶಿಕ್ಷಣಕ್ಕೆ ಆದ್ಯತೆ ನೀಡಿ, ರಾಜ್ಯದ ಸೌಹಾರ್ದ ಸಹಕಾರಿಗಳ ಬೇಡಿಕೆಯ ಮೇರೆಗೆ 2019 ರಿಂದ ಡಿಸಿಬಿಎಂ ಕೋರ್ಸನ್ನು ಪ್ರಾರಂಭಿಸಲಾಗಿದ್ದು, ಸಂಯುಕ್ತ ಸಹಕಾರಿಯ ವತಿಯಿಂದ ನಡೆಸಲಾದ 4 ತಂಡಗಳಲ್ಲಿ ಒಟ್ಟು 1391 ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ. ನಂತರ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಸಹಯೋಗದಲ್ಲಿ 3 ತಂಡಗಳನ್ನು ನಡೆಸಲಾಗಿದ್ದು, ಒಟ್ಟು 1079 ಅಭ್ಯರ್ಥಿಗಳು ಭಾಗವಹಿಸಿದ್ದಾರೆ. ಆದರೆ, ವಿಶ್ವವಿದ್ಯಾಲಯದ ಪರೀಕ್ಷೆ, ಮೌಲ್ಯಮಾಪನ ಹಾಗೂ ಫಲಿತಾಂಶ ಪ್ರಕಟಣೆಯಲ್ಲಿನ ವಿಳಂಬದಿಂದ ನಂತರದ ತಂಡಗಳಿಗೆ ನಿರೀಕ್ಷಿತ ಪ್ರತಿಕ್ರಿಯೆ ದೊರಕದ ಹಿನ್ನೆಲೆಯಲ್ಲಿ, ಸಂಯುಕ್ತ ಸಹಕಾರಿಯ ಮೂಲಕವೇ ಕೋರ್ಸ್ ನಡೆಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ, ಕೇಂದ್ರ ಸರ್ಕಾರದ ಎನ್‌ಸಿಸಿಟಿಯ ಅಂಗ ಸಂಸ್ಥೆಯಾದ ಆರ್‌ಐಸಿಎಂ, ಬೆಂಗಳೂರು ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದಲ್ಲಿ 6 ತಿಂಗಳ ಡಿಸಿಬಿಎಂ ಕೋರ್ಸಿನ ಎಂಟನೇಯ ತಂಡವನ್ನು ಪ್ರಾರಂಭಿಸಲು ಪ್ರವೇಶಾತಿ ಅಧಿಸೂಚನೆ ಹೊರಡಿಸಲಾಗಿದ್ದು, ಪ್ರವೇಶಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಕೋರ್ಸ್‌ನ ಶುಲ್ಕ ರೂ.8,000/- (ಜಿಎಸ್‌ಟಿ ಹೊರತುಪಡಿಸಿ) ಆಗಿದ್ದು, ಈ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಅಭ್ಯರ್ಥಿಗಳಿಗೆ ಎನ್‌ಸಿಸಿಟಿ, ನವದೆಹಲಿ ವತಿಯಿಂದ ಪ್ರಮಾಣಪತ್ರ ದೊರೆಯಲಿದೆ. ಪ್ರಸ್ತುತ ಡಿಸಿಎಂಬಿ ಕೋರ್ಸಿನ ಎಂಟನೇಯ ತಂಡದ ಪ್ರಾರಂಭಕ್ಕೆ ಅನುಮೋದನೆ ನೀಡಲು ಹಾಗೂ ಮುಂದಿನ ವರ್ಷ ಒಂಭತ್ತನೇಯ ತಂಡವನ್ನು ಪ್ರಾರಂಭಿಸಲು ಅನುಮತಿ ಕೋರಿ ವಿಷಯವನ್ನು ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ನಂತರ ಸಭೆಯು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಬೆಂಗಳೂರು ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದಲ್ಲಿ 6 ತಿಂಗಳ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಎಂಟನೇಯ ತಂಡವನ್ನು ಪ್ರಾರಂಭಿಸಿರುವುದಕ್ಕೆ ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಈ ಕೋರ್ಸಿನ ಶುಲ್ಕ ರೂ.8,000/- (ಜಿಎಸ್‌ಟಿ ಹೊರತುಪಡಿಸಿ) ನಿಗದಿಪಡಿಸಲು ಹಾಗೂ ಯಶಸ್ವಿಯಾಗಿ ಪೂರ್ಣಗೊಳಿಸುವ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ನೀಡಲು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಮುಂದಿನ ವರ್ಷ ಡಿಸಿಬಿಎಂ ಕೋರ್ಸಿನ ಒಂಭತ್ತನೇಯ ತಂಡವನ್ನು ಸಹ ಇದೇ ರೀತಿಯಲ್ಲಿ ಪ್ರಾರಂಭಿಸಲು ಅನುಮತಿ ನೀಡಿತು.

ನಿರ್ಣಯ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಬೆಂಗಳೂರು ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದಲ್ಲಿ 6 ತಿಂಗಳ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಎಂಟನೇಯ ತಂಡವನ್ನು ಪ್ರಾರಂಭಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಈ ಕೋರ್ಸಿನ ಶುಲ್ಕ ರೂ.8,000/- (ಜಿಎಸ್‌ಟಿ ಹೊರತುಪಡಿಸಿ) ನಿಗದಿಪಡಿಸಲು ಹಾಗೂ ಯಶಸ್ವಿಯಾಗಿ ಪೂರ್ಣಗೊಳಿಸುವ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಮುಂದಿನ ವರ್ಷ ಡಿಸಿಬಿಎಂ ಕೋರ್ಸಿನ ಒಂಭತ್ತನೇಯ ತಂಡವನ್ನು ಸಹ ಇದೇ ರೀತಿಯಲ್ಲಿ ಪ್ರಾರಂಭಿಸಲು ಸಭೆಯು ಅನುಮತಿ ನೀಡಿತು.

**ವಿಷಯ 15 : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2025ರಲ್ಲಿ ಆಗಿರುವ ತಿದ್ದುಪಡಿಗಳ ಕುರಿತು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸೌಹಾರ್ದ ಸಹಕಾರಿ ಕಾಯ್ದೆಗೆ ಅನೇಕ ಬಾರಿ ತಿದ್ದುಪಡಿಯಾಗಿದೆ. ಅದೇ ರೀತಿ, 2025ರಲ್ಲಿಯೂ ಸಹ ತಿದ್ದುಪಡಿಯಾಗಿರುತ್ತದೆ. ದಿನಾಂಕ 11.08.2025 ರಿಂದ 22.08.2025ರವರೆಗೆ ನಡೆದ ಕರ್ನಾಟಕ ವಿಧಾನ ಮಂಡಳದ ಅಧಿವೇಶನದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025ಕ್ಕೆ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಅನುಮೋದನೆಯಾಗಿದ್ದು, ಈ ತಿದ್ದುಪಡಿಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಮೇಲಾಗುವ ಪರಿಣಾಮಗಳ ಕುರಿತು ತಜ್ಞರೊಂದಿಗೆ ಚರ್ಚಿಸಿ ಮಾನ್ಯ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ. ಮಾನ್ಯ ಅಧ್ಯಕ್ಷರು ಬೆಂಗಳೂರು, ಮಂಗಳೂರು, ಬೆಳಗಾವಿ ಹಾಗೂ ಸಿಂಧನೂರಿನಲ್ಲಿ ಸಹಕಾರಿಗಳೊಂದಿಗೆ ಜಾಗೃತಿ ಹಾಗೂ ಸಮಾಲೋಚನಾ ಸಭೆಗಳನ್ನು ನಡೆಸಿ, ಈ ಕುರಿತು ವಿಷಯಗಳನ್ನು ತಿಳಿಸಿದ್ದಾರೆ. ಸದರಿ ಸಭೆಗಳಲ್ಲಿ ಆಶ್ವಾಸನೆ ನೀಡಿರುವಂತೆ ಈ ತಿದ್ದುಪಡಿಗಳಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿರುವ ಅಂಶಗಳ ಕುರಿತು ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಆಡಳಿತ ಮಂಡಲಿಯು ಉಪ ಸಮಿತಿಯನ್ನು ರಚಿಸಲಾಗಿದ್ದು, ಈ ಸಂಬಂಧ ಗೌ॥ ಮಾನ್ಯ ಉಚ್ಛ ನ್ಯಾಯಾಲಯದ ಬೆಂಗಳೂರು ಹಾಗೂ ಕಲಬುರಗಿ ಪೀಠಗಳಲ್ಲಿ ತಿದ್ದುಪಡಿ ಅಂಶಗಳನ್ನು ಪ್ರಶ್ನಿಸಿ ರಿಟ್ ಅರ್ಜಿಗಳನ್ನು ದಾಖಲಿಸಲಾಗಿದ್ದು, ಸುನಾವಣೆ ಪ್ರಕ್ರಿಯೆಯು ಚಾಲ್ತಿಯಲ್ಲಿದೆ. ಬೆಂಗಳೂರು ಪೀಠಗಳಲ್ಲಿ 3-4 ಬಾರಿ ಸುನಾವಣೆ ಜರುಗಿದ್ದು, ದಿನಾಂಕ 20 ಸೆಪ್ಟೆಂಬರ್ 2026ಕ್ಕೆ ಮುಂದಿನ ದಿನಾಂಕ ನೀಡಿರುತ್ತದೆ. ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ದಾಖಲಿಸಲು ಕ್ರಮ ಜಾರಿಯಲ್ಲಿದೆ. ಮಾನ್ಯ ಉಚ್ಛ ನ್ಯಾಯಾಲಯದ ಪ್ರಕರಣಗಳ ವಿವರಗಳನ್ನು ಆನ್‌ಲೈನ್‌ನಲ್ಲಿಯೂ ಸಹ ನೋಡಲು ಸಾಧ್ಯವಿದೆ ಎಂದು ತಿಳಿಸಿದರು.

ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ-0011)**

**ಪ್ರಶ್ನೆ 01 : ಪು.ಸಂ-16 ವಿಷಯ ಸಂಖ್ಯೆ 15-ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2025ರಲ್ಲಿ ಆಗಿರುವ ತಿದ್ದುಪಡಿಗಳ ಕುರಿತು. ಸೌಹಾರ್ದ ತಿದ್ದುಪಡಿ ಬಗ್ಗೆ ಹೆಚ್ಚಿನ ನಿಗಾ ವಹಿಸುವುದು.**

**ಉತ್ತರ :** ಸೌಹಾರ್ದ ಸಹಕಾರಿ ಕಾಯ್ದೆಗೆ 2025ರಲ್ಲಿ ಆಗಿರುವ ತಿದ್ದುಪಡಿಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿರುತ್ತದೆ.

ನಂತರ ಸಭೆಯು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ 2025ರಲ್ಲಿ ಆಗಿರುವ ತಿದ್ದುಪಡಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿರುವ ಅಂಶಗಳ ಕುರಿತು ಈಗಾಗಲೇ ಕೈಗೊಂಡಿರುವ ಕಾನೂನು ಕ್ರಮ ಮತ್ತು ಬೆಂಗಳೂರು ಹಾಗೂ ಕಲಬುರಗಿ ಪೀಠಗಳಲ್ಲಿ ದಾಖಲಿಸಿರುವ ರಿಟ್ ಅರ್ಜಿಗಳ ಕುರಿತಂತೆ ಮುಂದಿನ ಬೆಳವಣಿಗೆಗಳನ್ನು ನಿರಂತರವಾಗಿ ಹಿಂಬಾಲನೆ ಮಾಡಿ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ದಾಖಲಿಸುವುದು ಸೇರಿದಂತೆ ಅಗತ್ಯವಿರುವ ಎಲ್ಲಾ ಕಾನೂನು ಕ್ರಮಗಳನ್ನು ಮುಂದುವರೆಸಲು ಸರ್ವಾನುಮತದಿಂದ ತೀರ್ಮಾನಿಸಿತು

ನಿರ್ಣಯ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ 2025ರಲ್ಲಿ ಆಗಿರುವ ತಿದ್ದುಪಡಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿರುವ ಅಂಶಗಳ ಕುರಿತು ಈಗಾಗಲೇ ಕೈಗೊಂಡಿರುವ ಕಾನೂನು ಕ್ರಮ ಮತ್ತು ಬೆಂಗಳೂರು ಹಾಗೂ ಕಲಬುರಗಿ ಪೀಠಗಳಲ್ಲಿ ದಾಖಲಿಸಿರುವ ರಿಟ್ ಅರ್ಜಿಗಳ ಕುರಿತಂತೆ ಮುಂದಿನ ಬೆಳವಣಿಗೆಗಳನ್ನು ನಿರಂತರವಾಗಿ ಹಿಂಬಾಲನೆ ಮಾಡಿ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ದಾಖಲಿಸುವುದು ಸೇರಿದಂತೆ ಅಗತ್ಯವಿರುವ ಎಲ್ಲಾ ಕಾನೂನು ಕ್ರಮಗಳನ್ನು ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 16 : ಶ್ರೀ ಎಸ್.ಎಸ್.ಪಾಟೀಲ, ಮಾನ್ಯ ಮಾಜಿ ಸಹಕಾರ ಸಚಿವರು ಇವರ ಭಾವಚಿತ್ರವನ್ನು (Photo) ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಅಳವಡಿಸಿಕೊಳ್ಳುವ ಕುರಿತು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಇಂದು ಇಷ್ಟೊಂದು ಬೃಹದಾಕಾರವಾಗಿ ನಡೆಯಲು ಕಾರಣೀಕರ್ತರು ಮತ್ತು ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಇವು ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ಧ್ಯೇಯವಾಗಿದ್ದು, ಇಂತಹ ಸೌಹಾರ್ದ ಸಹಕಾರಿ ಕಾಯ್ದೆಯು ಯೋಜನಾ ಆಯೋಗದ ಮೂಲಕ ಅನುಮೋದನೆಯಾಗಿದ್ದು, ಇದಕ್ಕೆ ಪ್ರಮುಖ ಕಾರಣೀಕರ್ತರು ಶ್ರೀ ಎಸ್.ಎಸ್.ಪಾಟೀಲರವರು. ಸೌಹಾರ್ದ ಸಹಕಾರಿ ಕಾಯ್ದೆಯು ರಚನೆಯಾದ ಸಂದರ್ಭದಲ್ಲಿ ಶ್ರೀ ಜೆ.ಹೆಚ್.ಪಾಟೀಲರವರು ಮುಖ್ಯಮಂತ್ರಿಗಳಾಗಿದ್ದು, ಶ್ರೀ ಎಸ್.ಎಸ್.ಪಾಟೀಲರವರು ಸಹಕಾರ ಮಂತ್ರಿಗಳಾಗಿದ್ದರು. 2001ರಲ್ಲಿ ವಿಧಾನ ಸಭೆಯಲ್ಲಿ ಕಾಯ್ದೆಯು ಮಂಡನೆಯಾಗಿ ಅನುಮೋದನೆಯಾಗಿದ್ದು, ಈ ಸಂದರ್ಭದಲ್ಲಿ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದು, ಶ್ರೀ ಡಿ.ಕೆ.ಶಿವಕುಮಾರ್‌ರವರು ಸಹಕಾರ ಸಚಿವರಾಗಿದ್ದರು. ಇವೆಲ್ಲದರ ಭಾಗವಾಗಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಇಂದು 6000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಪರಿಕಲ್ಪನೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಜಾರಿಯಲ್ಲಿ ಶ್ರೀ ಎಸ್.ಎಸ್. ಪಾಟೀಲರವರ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಕಛೇರಿಗಳಲ್ಲಿ ಅವರ ಭಾವಚಿತ್ರವನ್ನು ಅಳವಡಿಸಿಕೊಳ್ಳುವಂತೆ ಸಂಯುಕ್ತ ಸಹಕಾರಿಯ ಮೂಲಕ ಸೂಚಿಸುವ ಕುರಿತು ಸೌಹಾರ್ದ ಸಹಕಾರಿಯಿಂದ ಮನವಿ ಸ್ವೀಕೃತವಾಗಿರುತ್ತದೆ. ಈ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ವಿಷಯವನ್ನು ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದ್ದು, ಅದರಂತೆ ವಾರ್ಷಿಕ ಸಾಮಾನ್ಯ ಸಭೆಗೆ ವಿಷಯವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು. ಇದಕ್ಕೆ ಸಭೆಯು ಚಪ್ಪಾಳೆಯನ್ನು ತಟ್ಟುವುದರ ಮೂಲಕ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ನಂತರ ಸಭೆಯು, ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಪರಿಕಲ್ಪನೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಜಾರಿಗೆ ಶ್ರೀ ಎಸ್.ಎಸ್. ಪಾಟೀಲರವರು ನೀಡಿದ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ, ಅವರ ಭಾವಚಿತ್ರವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸ್ವಯಂ ಪ್ರೇರಿತರಾಗಿ ತಮ್ಮ ತಮ್ಮ ಸಂಸ್ಥೆಗಳ ಕಛೇರಿಗಳಲ್ಲಿ ಅಳವಡಿಸಿಕೊಳ್ಳಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ನಿರ್ಣಯ : ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಪರಿಕಲ್ಪನೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಜಾರಿಗೆ ಶ್ರೀ ಎಸ್.ಎಸ್. ಪಾಟೀಲರವರು ನೀಡಿದ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ, ಅವರ ಭಾವಚಿತ್ರವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸ್ವಯಂ ಪ್ರೇರಿತರಾಗಿ ತಮ್ಮ ತಮ್ಮ ಸಂಸ್ಥೆಗಳ ಕಛೇರಿಗಳಲ್ಲಿ ಅಳವಡಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 17 : "ಸೌಹಾರ್ದ" ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ (Souharda Research and Skill Development Training Centre) ನಿರ್ಮಾಣಕ್ಕೆ ಜಮೀನು ಖರೀದಿಸುವ ಕುರಿತು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 23.08.2024ರಂದು ನಡೆದ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಗೆ ರೆಸಿಡೆನ್ಷಿಯಲ್ ತರಬೇತಿ ಕ್ಯಾಂಪಸ್, ವಸತಿ ಗೃಹ ಹಾಗೂ ಸಾಮಾನ್ಯ ಸಭೆ ನಡೆಸಲು ಅನುಕೂಲವಾಗುವ ಕಟ್ಟಡ ನಿರ್ಮಾಣಕ್ಕಾಗಿ ಜಮೀನು ಖರೀದಿ ಮತ್ತು ಕಟ್ಟಡ ನಿರ್ಮಾಣಕ್ಕೆ ಒಟ್ಟು ರೂ.10 ಕೋಟಿಗಳನ್ನು ಸಂಯುಕ್ತ ಸಹಕಾರಿಯ ಸಂಪನ್ಮೂಲದಿಂದ ಭರಿಸಲು ಅನುಮೋದನೆ ನೀಡಲಾಗಿತ್ತು. ಪ್ರಸ್ತುತ ಬೆಂಗಳೂರು–ತುಮಕೂರು ರಸ್ತೆಯ ಭಾಗದಲ್ಲಿ ಜಮೀನು/ ನಿವೇಶನದ ಮಾರುಕಟ್ಟೆ ಬೆಲೆ ಏರಿಕೆಯಾಗಿರುವುದರಿಂದ ಹಾಗೂ ಯೋಜನೆಗೆ 2–3 ಎಕರೆ ಜಮೀನು/ ನಿವೇಶನದ ಅಗತ್ಯವಿರುವ ಹಿನ್ನೆಲೆಯಲ್ಲಿ, ದಿನಾಂಕ 09.02.2026ರಂದು ನಡೆದ ಶಿಕ್ಷಣ ನಿಧಿ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತುತ ಮಾರುಕಟ್ಟೆ ದರ ಪರಿಗಣಿಸಿ ಜಮೀನು/ ನಿವೇಶನ ಖರೀದಿಸುವ ಕುರಿತು ವಿಷಯವನ್ನು ಆಡಳಿತ ಮಂಡಲಿಗೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ, ಆಡಳಿತ ಮಂಡಲಿ ಸಭೆಯಲ್ಲಿ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳ ಜಮೀನಿನ/ ನಿವೇಶನದ ಬೆಲೆಗಳನ್ನು ಪರಿಶೀಲಿಸಿ, ಒಂದು ಎಕರೆಗಿಂತ ಹೆಚ್ಚಿನ ಜಮೀನು/ ನಿವೇಶವನ್ನು ಗರಿಷ್ಠ ರೂ.25 ಕೋಟಿಗಳೊಳಗೆ ಖರೀದಿಸಲು ಹಾಗೂ ಈ ವಿಷಯವನ್ನು ವಾರ್ಷಿಕ ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡಲು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ. ಆದ್ದರಿಂದ, "ಸೌಹಾರ್ದ" ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ ನಿರ್ಮಾಣಕ್ಕಾಗಿ ಅಗತ್ಯ

ಜಮೀನು/ ನಿವೇಶನ ಖರೀದಿಸಲು ಹಾಗೂ ಅದಕ್ಕೆ ತಗಲುವ ಗರಿಷ್ಠ ರೂ.25 ಕೋಟಿಗಳ ಮೊತ್ತವನ್ನು ಸಂಯುಕ್ತ ಸಹಕಾರಿಯ ಸಂಪನ್ಮೂಲದಿಂದ ಭರಿಸಲು ಸಭೆಯ ಅನುಮೋದನೆ ಕೋರಿ ವಿಷಯವನ್ನು ಮಂಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿಗೆ ರಾಜ ಮಾರ್ಗವಾದ ಬೆಂಗಳೂರು–ತುಮಕೂರು ರಸ್ತೆಯಲ್ಲಿ ಒಂದು ಎಕರೆಗಿಂತ ಹೆಚ್ಚಿನ ಜಮೀನು/ ನಿವೇಶನವನ್ನು ಖರೀದಿಸುವ ಉದ್ದೇಶದಿಂದ ರೂ.25 ಕೋಟಿಗಳ ಬಜೆಟ್ ಅನ್ನು ಪ್ರಾವಧಾನ ಮಾಡಲಾಗಿದ್ದು, ಈ ಕುರಿತು ಅನುಮತಿ ನೀಡಲು ಸಭೆಗೆ ಕೋರಿದರು.

ನಂತರ ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಗಳು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ. (ಡಿಡಬ್ಲ್ಯುಡಿ–0002)**

**ವಿಷಯ 01 : ಸೌಹಾರ್ದ ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ ನಿರ್ಮಾಣಕ್ಕೆ ಜಮೀನು ಖರೀದಿಸುವ ಕುರಿತು.**

**ಉಲ್ಲೇಖ : ಸಂಯುಕ್ತ ಸಹಕಾರಿಯ ವಾರ್ಷಿಕ ವರದಿಯಲ್ಲಿ ವಿಷಯ ಸಂಖ್ಯೆ 17ರಲ್ಲಿ ಪ್ರಕಟಿಸಿದ್ದು.**

ಮೇಲೆ ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ತಮ್ಮಲ್ಲಿ ನಿವೇದನೆ ಏನೆಂದರೆ–

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸನ್ 2025–26ರ ಸಾಲಿನ ವಾರ್ಷಿಕ ವರದಿ ಪರಿಶೀಲಿಸಲಾಯಿತು. ಲಗತ್ತಿಸಿದ ಆಸ್ತಿ ಜವಾಬ್ದಾರಿ ಪತ್ರಿಕೆಗಳನ್ನು ಸಹ ಅವಲೋಕಿಸಿತು. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯಾಪ್ತಿಯಲ್ಲಿ 4 ಪ್ರಾಂತೀಯ ಕಚೇರಿಗಳಾದ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ  ಮೈಸೂರು ಹೊರತುಪಡಿಸಿ ಕೇಂದ್ರ ಸ್ಥಾನಗಳಲ್ಲಿ ಪ್ರಾಂತೀಯ ಕಚೇರಿಗಳು ಸ್ವಂತ ಕಟ್ಟಡದ ಕಚೇರಿ ಹೊಂದುವುದರ ಜತೆಗೆ ನ್ಯಾಯಾಲಯದ ಸಂಕೀರ್ಣ, ತರಬೇತಿ ನಡೆಸಲು ಸೂಕ್ತ ಕಟ್ಟಡ ವ ಸಾಕಷ್ಟು ವಿಶಾಲವಾದ ಸ್ಥಳಾವಕಾಶಗಳಿಂದ ಕೂಡಿದ ಸುಸಜ್ಜಿತ ಕ್ಯಾಂಪಸ್‌ಗಳನ್ನು ಹೊಂದಿರುತ್ತವೆ.

ಪ್ರಸ್ತಾವಿತ ರೆಸಿಡೆನ್ಷಿಯಲ್ ತರಬೇತಿ, ವಸತಿ ಗೃಹ ಹೊಂದಲು ನಿವೇಶನದ ಖರೀದಿ ನಂತರದ ದಿನಗಳಲ್ಲಿ ಕಟ್ಟಡ ಕಟ್ಟಿಸುವ ವಿಚಾರ ತಿಳಿದು ನಮ್ಮ ಸಹಕಾರಿಯ ವತಿಯಿಂದ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುವ ಅನಿವಾರ್ಯತೆ ಉಂಟಾಗಿರುತ್ತದೆ.

ಮೊದಲನೆಯದಾಗಿ ದಿನಾಂಕ 31.03.2026ರ ಅಂತ್ಯಕ್ಕೆ, ಇದ್ದಂತೆ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಸ್ತಿ–ಜವಾಬ್ದಾರಿ ಪತ್ರಿಕೆಯನ್ನು ಅವಲೋಕಿಸಲಾಗಿದೆ. ಸದರಿ ಪತ್ರಿಕೆ ಪರಿಶೀಲಿಸಲಾಗಿ, ಪ್ರಾಂತೀಯ ಕಚೇರಿಗಳಲ್ಲಿ ತರಬೇತಿ ಕೇಂದ್ರಗಳ ವ್ಯವಸ್ಥೆ ಹಾಗೂ ಸಾಕಷ್ಟು ಅನುಕೂಲತೆಗಳು ಈಗಾಗಲೇ ಇರುವುದರಿಂದ ಪ್ರತ್ಯೇಕ ತರಬೇತಿ ಕೇಂದ್ರ ತೆಗೆಯುವ ಅವಶ್ಯಕತೆ ಇರುವುದಿಲ್ಲ. ಪ್ರಾಂತೀಯ ಮಟ್ಟದಲ್ಲಿ ತರಬೇತಿ ಕೇಂದ್ರಗಳು ಈಗಾಗಲೇ ಇದ್ದು, ಸತತವಾಗಿ ತರಬೇತಿ ವರ್ಗಗಳನ್ನು ನಡೆಸಿದಲ್ಲಿ ಈಗ ನಿರ್ಮಿಸಿದ ಕಟ್ಟಡಗಳನ್ನು ಸಂಪೂರ್ಣವಾಗಿ ಹಾಗೂ ನಿರಂತರವಾಗಿ ಬಳಸಿಕೊಳ್ಳಲು ಅನುಕೂಲವಾಗುತ್ತದೆ ಮತ್ತು ಸಹಕಾರಿಗಳಿಗೆ ತರಬೇತಿ ಕೇಂದ್ರ ಹತ್ತಿರವಾಗುವುದರಿಂದ, ಅಧ್ಯಕ್ಷರುಗಳಿಗೆ, ಉಪಾಧ್ಯಕ್ಷರುಗಳಿಗೆ, ಆಡಳಿತ ಮಂಡಳಿ ನಿರ್ದೇಶಕರುಗಳಿಗೆ, ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮತ್ತು ಎಲ್ಲ ಸಹಕಾರಿಯ ಇತರೆ ಸಿಬ್ಬಂದಿ ವರ್ಗದವರಿಗೆ ತರಬೇತಿಗೆ ಹಾಜರಾಗಲು ಅನುಕೂಲ ಕಲ್ಪಿಸಿದಂತಾಗುತ್ತದೆ ಮತ್ತು ಸುಸಜ್ಜಿತವಾಗಿರುವ ಪ್ರಾಂತೀಯ ಮಟ್ಟದ ಕಚೇರಿ ವ ತರಬೇತಿ ಕೇಂದ್ರಗಳು ವರ್ಷದ ಎಲ್ಲ ದಿನಗಳಲ್ಲೂ ಕಾರ್ಯನಿರ್ವಹಿಸಿದಂತಾಗುತ್ತವೆ.

ಉದ್ದೇಶಿತ ಕಟ್ಟಡಕ್ಕಾಗಿ ಭೂಮಿ (ನಿವೇಶನ) ಖರೀದಿ, ಕಟ್ಟಡ ಕಟ್ಟಿಸಲು ತೊಡಗಿಸುವ ಮೊತ್ತ ಈಗಿನ ಅಂದಾಜು ಪ್ರಕಾರ ರೂ.25.00 ಕೋಟಿಗಳಷ್ಟು ಆಗುತ್ತಿದ್ದು, ಈ ಉದ್ದೇಶಿತ ಕಟ್ಟಡದ ನಿರ್ಮಾಣ ಕಾರ್ಯಾಗಾರ ಮುಕ್ತಾಯದ ವೇಳೆಗೆ ಈ ಅಂದಾಜು ವೆಚ್ಚ ಹೆಚ್ಚಾಗುವ ಸಾಧ್ಯತೆಯೇ ಹೆಚ್ಚು. ಈಗಿನ ಅಂದಾಜು ವೆಚ್ಚದಂತೆ ಸುಮಾರು 25.00 ಕೋಟಿಗಳಷ್ಟು ಹಣವನ್ನು ಕೇವಲ ಕಟ್ಟಡಕ್ಕಾಗಿಯೇ ವಿನಿಯೋಗಿಸಿದಲ್ಲಿ ಮುಂಬರುವ ದಿನಗಳಲ್ಲಿ ಸಹಕಾರಿಗಳು ಒಂದು ವೇಳೆ ಆರ್ಥಿಕವಾಗಿ ತೊಂದರೆಯಲ್ಲಿ ಬಂದು ನಷ್ಟ ಅನುಭವಿಸಿದಲ್ಲಿ ಶಿಕ್ಷಣ ನಿಧಿ ಸಂಗ್ರಹವಾಗುವುದು ಕಡಿಮೆಯಾಗುವ ಸಂಭವವೇ ಹೆಚ್ಚು. ಏಕೆಂದರೆ ಈಗಾಗಲೇ ಹಲವಾರು ದೊಡ್ಡ ದೊಡ್ಡ ಸಹಕಾರಿ ಸೌಹಾರ್ದ ಸಂಸ್ಥೆಗಳು ಸದಸ್ಯರ ವ ಸಾರ್ವಜನಿಕರ ವಿಶ್ವಾಸ ಕಳೆದುಕೊಳ್ಳುತ್ತಿದ್ದು, ಕೋಟಿಗಟ್ಟಲೇ ಹಣವನ್ನು ದುರುಪಯೋಗ ಪಡಿಸಿಕೊಂಡು ಸಾರ್ವಜನಿಕರಿಗೆ ವಂಚನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ವಿಷಯ ತಮಗೆ ತಿಳಿದಿರುವ ವಿಷಯ. ಪ್ರಸ್ತುತದಲ್ಲಿ ಕೆಲವು ಸಂಸ್ಥೆಗಳು ಮಲ್ಟಿಸ್ಟೇಟ್‌ಗೆ ವರ್ಗಾವಣೆಯಾಗಿ ಹೋಗಿದ್ದರಿಂದ ಸಂಯುಕ್ತ ಸಹಕಾರಿಗೆ ಬರುವ ಆದಾಯವು ಕಡಿಮೆಯಾಗಿದೆ. ಮುಂದುವರೆಯುತ್ತಾ ಈ ರೀತಿ ವಿನಿಯೋಗಿಸುವ

ಹಣವನ್ನು ಸಹಕಾರಿಯ ಬೇರೆ ಉದ್ದೇಶಗಳಾದ ಜಿಲ್ಲೆಗೊಂದು ಸಹಕಾರಿಯ ಸಂಪರ್ಕ ಕಚೇರಿ (ಅವಶ್ಯಕತೆಗನುಗುಣವಾಗಿ) ಅಥವಾ ಮೊದಲ ಆದ್ಯತೆಯಾಗಿ ನ್ಯಾಯಾಲಯ, ಏಕೆಂದರೆ ಉತ್ತರಕನ್ನಡ, ಹಾವೇರಿ ಹಾಗೂ ಗದಗ ಜಿಲ್ಲೆಗಳ ಮೂಲೆ ಮೂಲೆಗಳಿಂದ ಕನಿಷ್ಠ 6–8 ಗಂಟೆಗಳ ಕಾಲ ಪ್ರವಾಸ ಮಾಡಿ ಬೆಳಗಾವಿ ನ್ಯಾಯಾಲಯಕ್ಕೆ ಹಾಜರಾಗಲು ತಗಲುವ ಪ್ರಯಾಣದ ವೇಳೆ ಹಾಗೂ ವೆಚ್ಚವನ್ನು ತಾವುಗಳು ಕಡಿಮೆ ಮಾಡಿ ಬೆಳಗಾವಿ ಪ್ರಾಂತದಲ್ಲಿಯೇ ಇನ್ನೊಂದು ಸಂಚಾರಿ ನ್ಯಾಯಾಲಯವನ್ನು ಸ್ಥಾಪಿಸಿದಲ್ಲಿ ಎಲ್ಲಾ ಸಂಸ್ಥೆಗಳಿಗೆ ಅನುಕೂಲವಾಗುತ್ತದೆ. ಇದು ಕೇವಲ ಬೆಳಗಾವಿ ಪ್ರಾಂತಕ್ಕೆ ಸೀಮಿತವಾಗಿರದೆಯೇ ಬೇರೆ ಪ್ರಾಂತಗಳಲ್ಲಿಯೂ ಸಹಿತ ಸಂಚಾರಿ ನ್ಯಾಯಾಲಯದ ವ್ಯವಸ್ಥೆಯನ್ನು ಮಾಡಿದಲ್ಲಿ ಎಲ್ಲ ಸೌಹಾರ್ದ ಸಂಸ್ಥೆಗಳಿಗೂ ಅನುಕೂಲ ಹಾಗೂ ತ್ವರಿತವಾಗಿ ನ್ಯಾಯಾಲಯದ ಆದೇಶಗಳು ಸೌಹಾರ್ದ ಸಹಕಾರಿಗಳಿಗೆ ಲಭ್ಯವಾಗುವಂತೆ ಮಾಡಿದಲ್ಲಿ ಸಹಕಾರಿಗಳಿಗೆ ಅತ್ಯಂತವಾದ ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆ. ಪ್ರಸ್ತುತದಲ್ಲಿ ಜಿಲ್ಲೆಗಳಿಗೊಂದು ಸಂಪರ್ಕ ಕಚೇರಿಗಳಿದ್ದು, ಅಲ್ಲಿಯೇ ಸಂಚಾರಿ ನ್ಯಾಯಾಲಯವನ್ನು ತೆರೆಯಬಹುದು ಹಾಗೂ ತಳಹಂತದಲ್ಲಿ ಹೆಚ್ಚಿನ ಸಂಖ್ಯೆಯ ಇತರೆ ಸಿಬ್ಬಂದಿಯ ನೇಮಕಾತಿ, ಅಂತಹ ಕಚೇರಿಗಳಿಗೆ ಮೂಲಭೂತ ಸೌಲಭ್ಯಗಳಾದ ಪೀಠೋಪಕರಣ, ಗಣಕಯಂತ್ರ, ಪ್ರಿಂಟರ್, ಅವಶ್ಯವಿರುವ ಸ್ಟೇಷನರಿ, ಜಿಲ್ಲಾ ಮಟ್ಟದಲ್ಲಿಯೇ ತರಬೇತಿಗೆ ವ್ಯವಸ್ಥೆ ಮಾಡುವುದು ಮುಂತಾದ ಅವಶ್ಯಕ ಸೌಲಭ್ಯ ಕಲ್ಪಿಸಿದಲ್ಲಿ ತಳಹಂತದ ಸಹಕಾರಿಗಳಿಗೆ ಕಾಯಕಲ್ಪ ನೀಡಿದಂತಾಗುತ್ತದೆ ಮತ್ತು ಪ್ರಾಥಮಿಕ ಹಂತದ ಸಹಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಂಯುಕ್ತ ಸಹಕಾರಿಯ ಹೆಚ್ಚು ಹೆಚ್ಚು ಪರಿಣಾಮಕಾರಿಯಾಗಿ, ಕಾರ್ಯಕ್ಷಮತೆ ಹೆಚ್ಚಾಗಲು ಪ್ರಾಮಾಣಿಕ ಪ್ರಯತ್ನ ಮಾಡಿದಂತಾಗುತ್ತದೆ ಮತ್ತು ಸಂಗ್ರಹವಾಗುತ್ತಿರುವ ಶಿಕ್ಷಣ ನಿಧಿಯು ಸಾರ್ಥಕತೆಯ ಉಪಯೋಗ ಮತ್ತು ಪರಿಣಾಮಕಾರಿಯಾದ ಫಲಿತಾಂಶ ನೀಡಲು ಅನುಕೂಲವಾಗುವದರಲ್ಲಿ ಯಾವುದೇ ಸಂಶಯವಿಲ್ಲ. ರೆಸಿಡೆನ್ಷಿಯಲ್ ತರಬೇತಿ ಕ್ಯಾಂಪಸ್‌ಗೆ ರೂ. 25.00 ಕೋಟಿಗಳಂತೆ ಖರ್ಚು ಮಾಡುವುದರ ಜತೆಗೆ ಪ್ರತಿ ವರ್ಷ ಸದರಿ ಕಟ್ಟಡಗಳ ನಿರ್ವಹಣೆಗಾಗಿ (ಮೆಂಟೆನೆನ್ಸ್) ಉದಾಹರಣೆಗಾಗಿ, ಪ್ರತಿ 4 ರಿಂದ 5 ವರ್ಷಗಳಿಗೊಮ್ಮೆ ದುರಸ್ತಿಕಾರ್ಯ ಕೈಕೊಳ್ಳುವುದು, ಸುಣ್ಣ ಬಣ್ಣದ ವ್ಯವಸ್ಥೆ ಮಾಡುವುದು, ತರಬೇತಿ ಸಂಸ್ಥೆಗೆ ತಗಲಬಹುದಾದ ನೀರು, ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು, ವಿದ್ಯುತ್ ಶುಲ್ಕ ಭರಿಸುವುದು ಮುಂದಿನ ದಿನಗಳಲ್ಲಿ ಅವಶ್ಯಕವಾಗಿ ಮಾಡಲೇ ಬೇಕಾದ ಖರ್ಚು ವೆಚ್ಚಗಳಾಗಿರುತ್ತವೆ. ಈ ರೀತಿ ಮಾಡಲೇ ಬೇಕಾದ ಖರ್ಚು ವೆಚ್ಚಗಳು ಲಕ್ಷಗಟ್ಟಲೇ ಆಗುತ್ತಿದ್ದು, ಈ ವೆಚ್ಚಗಳು ಅನವಶ್ಯಕ ಹಾಗೂ ಪ್ರಸ್ತುತದಲ್ಲಿ ಮೀಸಲಿಟ್ಟ ರೂ.25.00 ಕೋಟಿ ಮೊತ್ತದ ಮೇಲೆ ಬರುವ ಬಡ್ಡಿಯಲ್ಲಿ ಸೌಹಾರ್ದ ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿಯ ಕಾರ್ಯಕ್ರಮಗಳನ್ನು ನೆರವೇರಿಸಬಹುದು. ಕಾರಣ ಉದ್ದೇಶಿತ ಯೋಜನೆಯನ್ನು ಕೈಬಿಡಲು ಕೋರಲಾಗಿದೆ.

**ಉತ್ತರ :** ಆಡಳಿತ ಮಂಡಲಿಯ ಸಭೆಯಲ್ಲಿ ಈಗಾಗಲೇ ಸದರಿ ವಿಷಯದ ಕುರಿತು ತೀರ್ಮಾನಿಸಿದ್ದು, ನಿಯಮಾನುಸಾರ ಸದರಿ ವಿಷಯವನ್ನು ಸಾಮಾನ್ಯ ಸಭೆಗೆ ಮಂಡಿಸಿದೆ, ಹೀಗಾಗಿ ಸದರಿ ವಿಷಯದ ಕುರಿತು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸೂಕ್ತವಾಗಿ ನಿರ್ಣಯಿಸಬಹುದಾಗಿದೆ. ಬೆಳಗಾವಿ ಪ್ರಾಂತದಲ್ಲಿ ಇನ್ನೊಂದು ಸಂಚಾರಿ ನ್ಯಾಯಾಲಯವನ್ನು ಪ್ರಾರಂಭಿಸಲು, ಸಹಕಾರ ಇಲಾಖೆಯೊಂದಿಗೆ ಚರ್ಚಿಸಿ, ಸೂಕ್ತವಾಗಿ ಕ್ರಮವಿಡಲಾಗುವುದು.

ನಂತರ ಸಭೆಯಲ್ಲಿ ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ (ಡಿಡಬ್ಲ್ಯುಡಿ–0002) ಈ ಸೌಹಾರ್ದ ಸಹಕಾರಿಯ ಮಾನ್ಯ ಡೆಲಿಗೇಟ್‌ರವರು ಪೂರಕ ಪ್ರಶ್ನೆಯನ್ನು ಕೇಳಿದರು. ಪ್ರಸ್ತುತ ಕೌಶಲ್ಯಾಭಿವೃದ್ಧಿ ಸಲುವಾಗಿ ರೆಸಿಡೆನ್ಷಿಯಲ್ ಇನ್‌ಸ್ಟಿಟ್ಯೂಟ್ ಮಾಡಲು ರೂ.25 ಕೋಟಿಗಳ ಮೊತ್ತವನ್ನು ಪ್ರಾವಧಾನ ಮಾಡಿರುತ್ತೀರಿ. ಈಗಾಗಲೇ ಸಂಯುಕ್ತ ಸಹಕಾರಿಯಿಂದ ಕೇಂದ್ರ ಕಛೇರಿ ಹಾಗೂ ಬೆಂಗಳೂರು ಪ್ರಾಂತೀಯ ಕಛೇರಿಗೆ ಒಂದು ಕಟ್ಟಡ, ಬೆಳಗಾವಿ, ಕಲಬುರಗಿ ಪ್ರಾಂತೀಯ ಕಛೇರಿಗಳಲ್ಲಿ ವ್ಯವಸ್ಥಿತವಾದ ಕಾರ್ಯಾಲಯ ಇದ್ದು, ಮೈಸೂರು ಪ್ರಾಂತೀಯ ಕಛೇರಿಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಅಲ್ಲಿಯೇ ಕೌಶಲ್ಯಾಭಿವೃದ್ಧಿ ಕಾರ್ಯಗಳನ್ನು ನಡೆಸಬೇಕು. ಉತ್ತರ ಕನ್ನಡ, ಕುಮಟಾ, ಶಿರಸಿಯಿಂದ ಸೌಹಾರ್ದ ಸಹಕಾರಿಗಳು 441 ನ್ಯಾಯಾಲದಲ್ಲಿ ದಾವೆ ಹೂಡಲು ಬೆಳಗಾವಿಗೆ ಬರಬೇಕು. ಇದರಿಂದ 8 ಗಂಟೆಗಳ ಅವಧಿಯ ಪ್ರಯಾಣವನ್ನು ಮಾಡಬೇಕು. ಈ ಹಿನ್ನೆಲೆಯಲ್ಲಿ ಉತ್ತರ ಕನ್ನಡ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ನ್ಯಾಯಾಲಯವನ್ನು ಸ್ಥಾಪನೆ ಮಾಡಲು ಸದರಿ ಮೊತ್ತವನ್ನು ಸದುಪಯೋಗ ಮಾಡಿಕೊಳ್ಳಬೇಕು. ಆ ನಂತರ ರೂ.25 ಕೋಟಿಗಳನ್ನು ಕಟ್ಟಡ ನಿರ್ಮಾಣ ಮಾಡಲು ಉಪಯೋಗಿಸಿಕೊಳ್ಳಬೇಕು. ಪ್ರಸ್ತುತ ಸಭೆಗೆ ಮಂಡಿಸಿರುವ ರೂ.25 ಕೋಟಿಗಳ ಮೊತ್ತವು ಹೆಚ್ಚಿಗೆ ಆಗುತ್ತದೆ. ಇದನ್ನು ರಚನಾತ್ಮಕವಾಗಿ, ಸೌಹಾರ್ದಯುತವಾಗಿ ತಾವು ವಿಚಾರಣೆ ಮಾಡಿ ಈ ಕುರಿತು ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ

ಅಧ್ಯಕ್ಷರು ತಾವು ತಿಳಿಸಿರುವ ಹಾಗೇ ರೂ.25 ಕೋಟಿಗಳ ಮೊತ್ತವನ್ನು ನಿವೇಶನ ಅಥವಾ ಭೂಮಿಯನ್ನು ಖರೀದಿಸಲು ವಿಷಯವನ್ನು ಮಂಡಿಸಲಾಗಿದೆ. ಸೌಹಾರ್ದ ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ ನಿರ್ಮಾಣಕ್ಕೆ ಪ್ರಸ್ತುತ ವಾರ್ಷಿಕ ಸಾಮಾನ್ಯ ಸಭೆಯು ಒಂದು ಎಕರೆಗಿಂತ ಹೆಚ್ಚಿನ ಜಮೀನು/ ನಿವೇಶವನ್ನು ರೂ.25 ಕೋಟಿಗಳೊಳಗೆ ಖರೀದಿಸಲು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದು, ಇದಕ್ಕೆ ತಾವು ಸಹ ಸಮ್ಮತಿ ನೀಡಲು ತಿಳಿಸಿದರು.

<u>**ಜನಧನ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ. (ಡಿಡಬ್ಲ್ಯುಡಿ-0108)**</u>

**ಸೌಹಾರ್ದ ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ ನಿರ್ಮಾಣಕ್ಕೆ ಜಮೀನು ಖರೀದಿಸುವ ಕುರಿತು.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸನ್ 2025-26ನೇ ಸಾಲಿನ ವಾರ್ಷಿಕ ವರದಿ ಪರಿಶೀಲಿಸಲಾಯಿತು. ಲಗತ್ತಿಸಿದ ಆಸ್ತಿ ಜವಾಬ್ದಾರಿ ಪತ್ರಿಕೆಗಳನ್ನು ಸಹ ಅವಲೋಕಿಸಿತು. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯಾಪ್ತಿಯಲ್ಲಿ 4 ಪ್ರಾಂತೀಯ ಕಚೇರಿಗಳಾದ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ಹೊರತುಪಡಿಸಿ ಕೇಂದ್ರ ಸ್ಥಾನಗಳಲ್ಲಿ ಪ್ರಾಂತೀಯ ಕಚೇರಿಗಳು ಸ್ವಂತ ಕಟ್ಟಡ ಕಚೇರಿ ಹೊಂದುವುದರ ಜತೆಗೆ ನ್ಯಾಯಾಲಯದ ಸಂಕೀರ್ಣ, ತರಬೇತಿ ನಡೆಸಲು ಸೂಕ್ತ ಕಟ್ಟಡ ವ ಸಾಕಷ್ಟು ವಿಶಾಲವಾದ ಸ್ಥಳಾವಕಾಶಗಳಿಂದ ಕುಡಿದ ಸುಸಜ್ಜಿತ ಕ್ಯಾಂಪಸ್‌ಗಳನ್ನು ಹೊಂದಿರುತ್ತದೆ. ಪ್ರಸ್ತುತ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಸ್ತುತ ಇರುವ ಜಮೀನುಗಳ ಬೆಲೆಗಳನ್ನು ತಾವೇ ಖುದ್ದಾಗಿ ಪರಿಶೀಲಿಸಿ, ಒಂದು ಎಕರೆಗೆ ಕಡಿಮೆ ಇಲ್ಲದಂತೆ ಗರಿಷ್ಠ ರೂ.25 ಕೋಟಿಗೆ ಜಮೀನನ್ನು ಖರೀದಿಸಲು ಒಪ್ಪಿಗೆ ಕೇಳಿರುತ್ತೀರಿ. ಆದರೆ ಜಮೀನಿನ ಬೆಲೆಯೇ ಇಷ್ಟು ದುಬಾರಿ ಆದರೆ ಮುಂದೆ ಕಟ್ಟಡ ಮತ್ತು ಅದರ ನಿರ್ವಹಣೆ ಇನ್ನು ದುಬಾರಿ ಆಗುವ ಸಾಧ್ಯತೆಗಳೇ ಹೆಚ್ಚು. ಇದರ ಬದಲಾಗಿ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯಾಪ್ತಿಯಲ್ಲಿ 4 ಪ್ರಾಂತೀಯ ಕಚೇರಿಗಳಾದ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ಈ ವಿಭಾಗೀಯ ಮಟ್ಟದಲ್ಲೇ ಸೌಹಾರ್ದ ಸಂಶೋಧನೆ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರಗಳನ್ನು ಹಾಗೂ ಸಂಚಾರಿ ನ್ಯಾಯಾಲಯಗಳನ್ನು ಅಭಿವೃದ್ಧಿ ಪಡಿಸಿ ಸಾಲ ವಸೂಲಾತಿ ಪ್ರಕರಣಗಳು ಅತೀ ಶೀಘ್ರ ಇತ್ಯರ್ಥ ಆಗುವಂತೆ ಮಾಡುವುದರಿಂದ ಎಲ್ಲ ಸಹಕಾರಿಗಳ ಅಭಿವೃದ್ಧಿ ಸಾಧ್ಯ ಹಾಗೂ ಈ ಯೋಜನೆಗೆ ತಗಲುವ ಒಟ್ಟು ಮೊತ್ತವನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಿದರೆ ಅದರಿಂದ ಬರುವ ಬಡ್ಡಿಯಲ್ಲಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಯೋಜನೆಗಳನ್ನು ಸಹಿತ ರೂಪಿಸಬಹುದು ಅನ್ನುವುದು ನನ್ನ ಅನಿಸಿಕೆ. ಹಾಗಾಗಿ ಈ ವಿಷಯವನ್ನು ಕೈಬಿಡುವುದು ಸೂಕ್ತ.

**ಉತ್ತರ** : ಸದರಿ ವಿಷಯವನ್ನು ಸಾಮಾನ್ಯ ಸಭೆಗೆ ಮಂಡಿಸಿದೆ. ಹೀಗಾಗಿ ಸದರಿ ವಿಷಯದ ಕುರಿತು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

ನಂತರ ಸಭೆಯು, ಸಂಯುಕ್ತ ಸಹಕಾರಿಗೆ "ಸೌಹಾರ್ದ" ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ (Souharda Research and Skill Development Training Centre) ನಿರ್ಮಾಣಕ್ಕೆ ಗರಿಷ್ಠ ರೂ.25 ಕೋಟಿಗಳೊಳಗೆ ಒಂದು ಎಕರೆಗಿಂತ ಹೆಚ್ಚಿನ ಜಮೀನು/ ನಿವೇಶನವನ್ನು ಖರೀದಿಸಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ನಿರ್ಣಯ : ಸಂಯುಕ್ತ ಸಹಕಾರಿಗೆ "ಸೌಹಾರ್ದ" ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ (Souharda Research and Skill Development Training Centre) ನಿರ್ಮಾಣಕ್ಕೆ ಗರಿಷ್ಠ ರೂ.25 ಕೋಟಿಗಳೊಳಗೆ ಒಂದು ಎಕರೆಗಿಂತ ಹೆಚ್ಚಿನ ಜಮೀನು/ ನಿವೇಶನವನ್ನು ಖರೀದಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 18 : 2017-18 ರಿಂದ 2019-20ನೇ ಸಾಲಿನವರೆಗೆ ವಾರ್ಷಿಕ ವಂತಿಗೆಯ ಮೇಲಿನ ಜಿಎಸ್‌ಟಿ ಅನ್ನು ಪಾವತಿಸಿರದ ಸೌಹಾರ್ದ ಸಹಕಾರಿಗಳ ಕುರಿತು.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಜಿಎಸ್‌ಟಿ ಕಾಯ್ದೆಯು ದಿನಾಂಕ 01.07.2017ರಂದು ದೇಶದಲ್ಲಿ ಜಾರಿಗೆ ಬಂದಿರುತ್ತದೆ. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳಿಗೆ ಜಿಎಸ್‌ಟಿ ಅನ್ವಯವಾಗುತ್ತದೆಯೇ ಎಂಬುದರ ಕುರಿತು ಗೊಂದಲವಿರುತ್ತದೆ. ಈ ಕಾಯ್ದೆಯಡಿ ಸಂಯುಕ್ತ ಸಹಕಾರಿಯು ದಿನಾಂಕ 06.12.2018ರಂದು ನೋಂದಣಿಯಾಗಿರುತ್ತದೆ. ಸನ್ 2020-21ನೇ ಸಾಲಿನಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ 2017-18 ರಿಂದ 2019-20ನೇ ಸಾಲಿನವರೆಗಿನ ವಾರ್ಷಿಕ ವಂತಿಗೆಯ ಮೇಲೆ ಪಾವತಿಸಲು ಬಾಕಿ ಇರುವ ಜಿಎಸ್‌ಟಿ ಮೊತ್ತವನ್ನು ಪಾವತಿಸುವಂತೆ ನೋಟೀಸು ಕಳುಹಿಸಲಾಗಿದ್ದು, 167 ಸೌಹಾರ್ದ ಸಹಕಾರಿಗಳಿಂದ ರೂ.2,50,086/- ಗಳನ್ನು ಬರಬೇಕಾದ ಮೊತ್ತ ಎಂದು ಆರ್ಥಿಕ ತಃಖ್ತೆಯಲ್ಲಿ ತೋರಿಸಲಾಗುತ್ತಿದೆ. ಸದರಿ ಮೊತ್ತವು ಮೂರು

ವರ್ಷಗಳಿಗಿಂತ ಮೇಲ್ಪಟ್ಟ ಕಾರಣ ಈ ಮೊತ್ತವನ್ನು ರೈಟ್ ಆಫ್ ಮಾಡಬಹುದೆಂದು ಮಾನ್ಯ ಸನ್ನದು ಲೆಕ್ಕಪರಿಶೋಧಕರು ಸಲಹೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ 21.04.2026ರಂದು ನಡೆದ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ರೂ.2,50,086/-ಗಳನ್ನು ರೈಟ್ ಆಫ್ ಮಾಡಲಾಗಿದೆ. ಈ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಅನುಮತಿಗಾಗಿ ಸಭೆಗೆ ವಿಷಯ ಮಂಡಿಸಿದೆ ಎಂದು ತಿಳಿಸಿದರು. ಮುಂದುವರೆದು, ಅನೇಕ ಸೌಹಾರ್ದ ಸಹಕಾರಿಗಳಿಗೆ ಜಿಎಸ್‌ಟಿ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳಬೇಕೇ ಎಂಬುದರ ಕುರಿತು ಗೊಂದಲವಿರುತ್ತದೆ. ಜಿಎಸ್‌ಟಿ ಅನ್ವಯವಾಗುವ ಎಲ್ಲಾ ಸೌಹಾರ್ದ ಸಹಕಾರಿಗಳು ಸಹ ಜಿಎಸ್‌ಟಿ ಕಾಯ್ದೆಯಡಿ ನೋಂದಣಿಯಾಗಬೇಕು ಎಂದು ತಿಳಿಸಿದರು. ಮುಂದುವರೆದು, 2017-18 ರಿಂದ 2019-20ರವರೆಗೆ ಜಿಎಸ್‌ಟಿ ಪಾವತಿಸದೇ ಇರುವ ಸೌಹಾರ್ದ ಸಹಕಾರಿಗಳ ಪಟ್ಟಿಯಲ್ಲಿರುವ ಸೌಹಾರ್ದ ಸಹಕಾರಿಗಳು ನಿಷ್ಕ್ರಿಯ ಹಾಗೂ ಸಮಾಪನೆಗೆ ಶಿಫಾರಸ್ಸು ಮಾಡಿರುವ ಸೌಹಾರ್ದ ಸಹಕಾರಿಗಳಾಗಿರುವುದರಿಂದ ಬಾಕಿ ಇರುವ ಜಿಎಸ್‌ಟಿ ಮೊತ್ತವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು, ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ-0011)**

**ಪ್ರಶ್ನೆ 01 : ಪು.ಸಂ.18 ವಿಷಯ ಸಂಖ್ಯೆ 18-2017-18 ರಿಂದ 2019-20ನೇ ಸಾಲಿನವರೆಗೆ ವಾರ್ಷಿಕ ವಂತಿಗೆಯ ಮೇಲಿನ ಜಿಎಸ್‌ಟಿ ಅನ್ನು ಪಾವತಿಸಿರದ ಸೌಹಾರ್ದ ಸಹಕಾರಿಗಳ ಕುರಿತು. ಜಿಎಸ್‌ಟಿ ಕಾಯ್ದೆ ಅನುಸಾರ ಬಾಕಿ ಇರುವ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು ತಪ್ಪಿದಲ್ಲಿ ಜಿಎಸ್‌ಟಿ ದಂಡ ಪ್ರಮಾಣ ಹೆಚ್ಚಿರುವುದರಿಂದ ಈ ಬಗ್ಗೆ ಆದ್ಯತೆ ನೀಡುವುದು.**

**ಉತ್ತರ :** ಸಂಯುಕ್ತ ಸಹಕಾರಿಯು ನಿಯಮಾನುಸಾರ ಸಹಕಾರಿಗಳ ಪರವಾಗಿ ಜಿಎಸ್‌ಟಿ ಮೊತ್ತವನ್ನು ಪಾವತಿಸಲಾಗಿದೆ. ಸದರಿ ಸಹಕಾರಿಗಳು ಕಾರ್ಯನಿರ್ವಹಿಸದೇ ಸಮಾಪನೆಗೆ ಶಿಫಾರಸ್ಸು ಆಗಿರುವ ಕಾರಣ ಅಂತಹ ಸಹಕಾರಿಗಳ ಜಿಎಸ್‌ಟಿ ಸಂಯುಕ್ತ ಸಹಕಾರಿಗೆ ಪಾವತಿಸದೇ ಇರುವ ಮೊತ್ತವನ್ನು ಲೆಕ್ಕಪರಿಶೋಧಕರ ಸಲಹೆಯಂತೆ ರೈಟ್ ಆಫ್ ಮಾಡಲಾಗಿರುತ್ತದೆ.

ನಂತರ ಸಭೆಯು, 2017-18 ರಿಂದ 2019-20ನೇ ಸಾಲಿನವರೆಗಿನ ವಾರ್ಷಿಕ ವಂತಿಗೆಯ ಮೇಲೆ 167 ಸೌಹಾರ್ದ ಸಹಕಾರಿಗಳಿಂದ ಪಾವತಿಸಲು ಬಾಕಿ ಇರುವ ಜಿಎಸ್‌ಟಿ ಮೊತ್ತ ರೂ.2,50,086/-ಗಳ ಮೊತ್ತವು ಮೂರು ವರ್ಷಗಳಿಗಿಂತಲೂ ಮೇಲ್ಪಟ್ಟ ಕಾರಣ ಮಾನ್ಯ ಸನ್ನದು ಲೆಕ್ಕಪರಿಶೋಧಕರ ಸಲಹೆಯಂತೆ ಹಾಗೂ ದಿನಾಂಕ 21.04.2026ರಂದು ನಡೆದ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಸದರಿ ಮೊತ್ತವನ್ನು ರೈಟ್ ಆಫ್ ಮಾಡಿರುವುದಕ್ಕೆ ಸರ್ವಾನುಮತದಿಂದ ಅನುಮತಿ ನೀಡಿತು.

**ನಿರ್ಣಯ** : 2017-18 ರಿಂದ 2019-20ನೇ ಸಾಲಿನವರೆಗಿನ ವಾರ್ಷಿಕ ವಂತಿಗೆಯ ಮೇಲೆ 167 ಸೌಹಾರ್ದ ಸಹಕಾರಿಗಳಿಂದ ಪಾವತಿಸಲು ಬಾಕಿ ಇರುವ ಜಿಎಸ್‌ಟಿ ಮೊತ್ತ ರೂ.2,50,086/-ಗಳ ಮೊತ್ತವು ಮೂರು ವರ್ಷಗಳಿಗಿಂತಲೂ ಮೇಲ್ಪಟ್ಟ ಕಾರಣ ಮಾನ್ಯ ಸನ್ನದು ಲೆಕ್ಕಪರಿಶೋಧಕರ ಸಲಹೆಯಂತೆ ಹಾಗೂ ದಿನಾಂಕ 21.04.2026ರಂದು ನಡೆದ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಸದರಿ ಮೊತ್ತವನ್ನು ರೈಟ್ ಆಫ್ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 19 : ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯು ಈ ಕೆಳಗಿನ 04 ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದು, ಅದನ್ನು ಮುಂದುವರೆಸಿಕೊಂಡು ಹೋಗಲು ಸಭೆಯು ಅನುಮತಿ ನೀಡಿದಲ್ಲಿ ಅದರಂತೆ ಸದಸ್ಯತ್ವವನ್ನು ಮುಂದುವರೆಸಲಾಗುವುದು. ಆದ್ದರಿಂದ, ಈ ಕುರಿತು ಅನುಮತಿಸಲು ಸಭೆಗೆ ಕೋರಿದರು.

| ಸಂಸ್ಥೆಯ ಹೆಸರು | ಸದಸ್ಯತ್ವ/ ಶೇರು ಮೊತ್ತ |
|---|---|
| ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ - ಶೇರು | ರೂ.1,000.00 |
| ರಾಷ್ಟ್ರಿಯ ಸಹಕಾರ ಮಹಾಮಂಡಲ ನಿ., ನವದೆಹಲಿ (ಎನ್‌ಸಿಯುಐ) - ಪ್ರತಿ ವರ್ಷ ಸದಸ್ಯತ್ವ ಶುಲ್ಕ | ರೂ.20,000.00 |
| ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು - ಶೇರು | ರೂ.10,10,000.00 |
| ಕ.ರಾ.ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು - ಶೇರು | ರೂ.10,00,000.00 |

ನಂತರ ಸಭೆಯು, ಸಂಯುಕ್ತ ಸಹಕಾರಿಯು ಸದಸ್ಯತ್ವ ಹೊಂದಿರುವ ಸಂಸ್ಥೆಗಳಾದ ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ (ಶೇರು), ರಾಷ್ಟ್ರೀಯ ಸಹಕಾರ ಮಹಾಮಂಡಲ ನಿ., ನವದೆಹಲಿ (ಎನ್‌ಸಿಯುಐ) (ಪ್ರತಿ ವರ್ಷ ಸದಸ್ಯತ್ವ ಶುಲ್ಕ), ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು (ಶೇರು), ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು (ಶೇರು) ಈ ಸಂಸ್ಥೆಗಳ ಸದಸ್ಯತ್ವವನ್ನು ಮುಂದುವರೆಸಿಕೊಂಡು ಹೋಗಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ :** ಸಂಯುಕ್ತ ಸಹಕಾರಿಯು ಸದಸ್ಯತ್ವ ಹೊಂದಿರುವ ಸಂಸ್ಥೆಗಳಾದ ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ (ಶೇರು), ರಾಷ್ಟ್ರೀಯ ಸಹಕಾರ ಮಹಾಮಂಡಲ ನಿ., ನವದೆಹಲಿ (ಎನ್‌ಸಿಯುಐ) (ಪ್ರತಿ ವರ್ಷ ಸದಸ್ಯತ್ವ ಶುಲ್ಕ), ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು (ಶೇರು), ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು (ಶೇರು) ಈ ಸಂಸ್ಥೆಗಳ ಸದಸ್ಯತ್ವವನ್ನು ಮುಂದುವರೆಸಿಕೊಂಡು ಹೋಗಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 20 : ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು 2025-26ನೇ ಸಾಲಿನಲ್ಲಿ 271 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅಂತಹ ಪಟ್ಟಿಯನ್ನು ಸಭೆಗೆ ನೀಡಲಾಗಿದೆ. ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 15 ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುತ್ತದೆ. ಈ ಕುರಿತು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2025-26ನೇ ಸಾಲಿನಲ್ಲಿ 271 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುವ ಮಾಹಿತಿಯನ್ನು ಹಾಗೂ ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 271 ಸೌಹಾರ್ದ ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** 2025-26ನೇ ಸಾಲಿನಲ್ಲಿ 271 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುವ ಮಾಹಿತಿಯನ್ನು ಹಾಗೂ ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 271 ಸೌಹಾರ್ದ ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 21 : ಸೌಹಾರ್ದ ಸಹಕಾರಿ ಕಾಯ್ದೆ ಕಲಂ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನೆ.**
**ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್-ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಜೊತೆ ಪೂರಕ ಸಂಸ್ಥೆ ಮಾಡಿದಲ್ಲಿ, ಸಹೋದ್ಯಮ ಸಂಸ್ಥೆ ನಡೆಸುತ್ತಿದ್ದಲ್ಲಿ ಅಂತಹ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳು ಆಯಾ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗೆ ಮಂಡನೆಯಾಗಬೇಕು. ಅದರಂತೆ, ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ-ಕರ್ನಾಟಕ (ಸ್ಯಾಪ್-ಕೆ) ಇದರ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಗೆ ನೀಡಲಾಗಿದ್ದು, ಪರಿಶೀಲಿಸಿ, ಅನುಮೋದಿಸಲು ಸಭೆಗೆ ಕೋರಿದರು. ಸ್ಯಾಪ್-ಕೆ ಮೂಲಕ ಎಂಬಿಎ ಕೋರ್ಸನ್ನು ಮೈಸೂರು ವಿಶ್ವವಿದ್ಯಾಲಯದ ಜೊತೆಗೂಡಿ ನಡೆಸಲಾಗಿದ್ದು, ಈ ಕೋರ್ಸನ್ನು ಅಧ್ಯಯನ ನಡೆಸಿದ ವಿದ್ಯಾರ್ಥಿಗಳು ದೇಶ, ರಾಜ್ಯಗಳ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ-ಕರ್ನಾಟಕ (ಸ್ಯಾಪ್-ಕೆ) ಇದರ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ-ಕರ್ನಾಟಕ (ಸ್ಯಾಪ್-ಕೆ) ಇದರ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 22 : ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಿಂದಿನ ಸಹಕಾರಿ ವರ್ಷದಲ್ಲಿ ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯಂತೆ ರೂ.1,59,76,428/-ಗಳು ವೆಚ್ಚಕ್ಕೆ ಮೀರಿದ ಆದಾಯ ಇರುತ್ತದೆ. ಆದಾಯ ತೆರಿಗೆ ಕಾಯ್ದೆಯಂತೆ ರೂ.52,83,400/-ಗಳ ಮೊತ್ತವನ್ನು ಆದಾಯ ತೆರಿಗೆ ಪಾವತಿಗಾಗಿ ಪ್ರಾವಧಾನ ಮಾಡಲಾಗಿರುತ್ತದೆ. ಮುಂಗಡ, ಟಿಡಿಎಸ್, ಟಿಸಿಎಸ್ ಸೇರಿ ಒಟ್ಟು ರೂ.53,50,739/-ಗಳ ತೆರಿಗೆಯನ್ನು ಈಗಾಗಲೇ ಪಾವತಿಸಲಾಗಿರುತ್ತದೆ. ಸಂಯುಕ್ತ ಸಹಕಾರಿಯಲ್ಲಿ ಸರ್ಕಾರ/ ಸದಸ್ಯರ ಯಾವುದೇ ಪಾಲು ಬಂಡವಾಳ ಇರುವುದಿಲ್ಲ. ಆದ್ದರಿಂದ, ಲಾಭಾಂಶ ಹಂಚಿಕೆಯ ಪ್ರಾವಧಾನವು ಕಾಯ್ದೆಯಲ್ಲಿ ಇಲ್ಲದೇ ಇರುವುದರಿಂದ ಲಾಭಾಂಶ ಹಂಚಿಕೆಯು ಉದ್ಭವಿಸುವುದಿಲ್ಲ. ಕಾಯ್ದೆ/ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಲಾಭ ವಿಂಗಡಣೆ ಮಾಡುವಂತಹ ಯಾವುದೇ ನಿಧಿ ರಚಿತವಾಗಿರುವುದಿಲ್ಲ. ಆದ್ದರಿಂದ, ಉಳಿದ ಹೆಚ್ಚುವರಿಯನ್ನು ಸಾಮಾನ್ಯ ನಿಧಿಗೆ ವರ್ಗಾಯಿಸಲಾಗಿದೆ ಎಂದು ತಿಳಿಸಿದರು.

ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ-0011)**

**ಪ್ರಶ್ನೆ 01 : ವಾರ್ಷಿಕ ಸಭೆಯ ವಿಷಯಗಳಲ್ಲಿ ವಿಷಯ ಸಂಖ್ಯೆ 22-ಪು.ಸಂ-08 ಹಿಂದಿನ ಸಹಕಾರಿಯ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ ನಮೂದಿಸಿರುವ ನಿವ್ವಳ ಲಾಭ ವಿಲೇವಾರಿ ವಿಷಯ ಮಂಡಿಸುವ ಅವಶ್ಯಕತೆ ಇರುವುದಿಲ್ಲ. ಕಾರಣ ಸಂಯುಕ್ತ ಸಹಕಾರಿಯಲ್ಲಿ ಲಾಭವಿಲೇವಾರಿ ಪ್ರಶ್ನೆ ಉದ್ಭವಿಸುವುದಿಲ್ಲ. ಮುಂದಿನ ಸಾಲಿಗೆ. ಈ ವಿಷಯ ಕೈ ಬಿಡುವುದು.**

**ಉತ್ತರ** : ಸನ್ 2013ರ ಪೂರ್ವದಲ್ಲಿ ನಿರ್ಣಯಕ್ಕೆ ಅಗತ್ಯವಿರುವ ವಿಷಯಗಳನ್ನು ಮಾತ್ರ ಮಂಡಿಸಲಾಗುತ್ತಿತ್ತು. ಆದರೆ ತದನಂತರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಾಯ್ದೆ ಕಲಂ 23(3)ರಲ್ಲಿ ಇರುವ ಎಲ್ಲ ವಿಷಯಗಳನ್ನು ಮಂಡಿಸಲು ನಿರ್ಣಯಿಸಿರುತ್ತದೆ. ಆದ್ದರಿಂದ ಅದೇ ರೀತಿ ಕ್ರಮವಿಡಲಾಗಿದೆ.

**ಪ್ರಶ್ನೆ 02 : ಪು.ಸ-ನಂ-18 ವಿಷಯ ಸಂಖ್ಯೆ 22- ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.**

**ನಿವ್ವಳ ಲಾಭದ ವಿಲೇವಾರಿ ವಿಷಯ ಕೈಬಿಟ್ಟಿದಲ್ಲಿ ಯಾವುದೇ ಲಾಭಾಂಶ ಹಂಚಿಕೆ ಉದ್ಭವಿಸುವುದಿಲ್ಲ. ಈ ವಿಷಯ ಚರ್ಚೆಗೆ ಮಂಡಿಸುವ ಅವಶ್ಯಕತೆ ಇರುವುದಿಲ್ಲ.**

**ಉತ್ತರ** : ಸನ್ 2013ರ ಪೂರ್ವದಲ್ಲಿ ನಿರ್ಣಯಕ್ಕೆ ಅಗತ್ಯವಿರುವ ವಿಷಯಗಳನ್ನು ಮಾತ್ರ ಮಂಡಿಸಲಾಗುತ್ತಿತ್ತು. ಆದರೆ ತದನಂತರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಾಯ್ದೆ ಕಲಂ 23(3)ರಲ್ಲಿ ಇರುವ ಎಲ್ಲ ವಿಷಯಗಳನ್ನು ಮಂಡಿಸಲು ನಿರ್ಣಯಿಸಿರುತ್ತದೆ. ಆದ್ದರಿಂದ ಅದೇ ರೀತಿ ಕ್ರಮವಿಡಲಾಗಿದೆ.

ನಂತರ ಸಭೆಯು, ಸಂಯುಕ್ತ ಸಹಕಾರಿಯಲ್ಲಿ ಸರ್ಕಾರ/ ಸದಸ್ಯರ ಯಾವುದೇ ಪಾಲು ಬಂಡವಾಳ ಇಲ್ಲದೇ ಇರುವುದರಿಂದ ಲಾಭಾಂಶ ಹಂಚಿಕೆಯು ಉದ್ಭವಿಸುವುದಿಲ್ಲವಾದ ಕಾರಣ ಮತ್ತು ಕಾಯ್ದೆ/ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಲಾಭ ವಿಂಗಡಣೆ ಮಾಡುವಂತಹ ಯಾವುದೇ ನಿಧಿ ರಚಿತವಾಗಿಲ್ಲದೇ ಇರುವುದರಿಂದ ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯಂತೆ ರೂ.1,59,76,428/-ಗಳು ವೆಚ್ಚಕ್ಕೆ ಮೀರಿದ ಆದಾಯ ಇದ್ದು, ಆದಾಯ ತೆರಿಗೆ ಕಾಯ್ದೆಯಂತೆ ಆದಾಯ ತೆರಿಗೆ ಪಾವತಿಯ ನಂತರದ ಉಳಿದ ಹೆಚ್ಚುವರಿ ಮೊತ್ತವನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾಯಿಸಿರುವುದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ನಿರ್ಣಯ : ಸಂಯುಕ್ತ ಸಹಕಾರಿಯಲ್ಲಿ ಸರ್ಕಾರ/ ಸದಸ್ಯರ ಯಾವುದೇ ಪಾಲು ಬಂಡವಾಳ ಇಲ್ಲದೇ ಇರುವುದರಿಂದ ಲಾಭಾಂಶ ಹಂಚಿಕೆಯು ಉದ್ಭವಿಸುವುದಿಲ್ಲವಾದ ಕಾರಣ ಮತ್ತು ಕಾಯ್ದೆ/ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಲಾಭ ವಿಂಗಡಣೆ ಮಾಡುವಂತಹ ಯಾವುದೇ ನಿಧಿ ರಚಿತವಾಗಿಲ್ಲದೇ ಇರುವುದರಿಂದ ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯಂತೆ ರೂ.1,59,76,428/-ಗಳು ವೆಚ್ಚಕ್ಕೆ ಮೀರಿದ ಆದಾಯ ಇದ್ದು, ಆದಾಯ ತೆರಿಗೆ ಕಾಯ್ದೆಯಂತೆ ಆದಾಯ ತೆರಿಗೆ ಪಾವತಿಯ ನಂತರದ ಉಳಿದ ಹೆಚ್ಚುವರಿ ಮೊತ್ತವನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾಯಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 23 :** **ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.**

ನಡವಳಿ : ಕಾರ್ಯಾಚರಣೆ ಕೊರತೆ ಯಾವುದೂ ಇಲ್ಲದಿರುವುದರಿಂದ ಪುನರವಲೋಕನ ಮಾಡುವ ಅಗತ್ಯ ಕಂಡು ಬರುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಕಾರ್ಯಾಚರಣೆ ಕೊರತೆ ಯಾವುದು ಇಲ್ಲದಿರುವುದರಿಂದ ಪುನರವಲೋಕನ ಮಾಡುವ ಅಗತ್ಯ ಕಂಡು ಬರದೇ ಇರುವ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 24 :** **ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಉಪವಿಧಿಗಳ ಪ್ರಕಾರ ಕೇವಲ ಕಟ್ಟಡ ನಿಧಿಗೆ ಮಾತ್ರ ನಿಧಿಯನ್ನು ಮೀಸಲಿಡಲು ಪ್ರಾವಧಾನವಿರುತ್ತದೆ. ಅದರಂತೆ, 2025–26ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಗೆ ಸ್ವೀಕೃತವಾಗಿರುವ ಒಟ್ಟು ವಾರ್ಷಿಕ ವಂತಿಗೆಯ ಮೊತ್ತದಲ್ಲಿ ಶೇ.10ರಷ್ಟು ಅಂದರೆ ರೂ.56,59,843/–ಗಳ ಮೊತ್ತವನ್ನು ಕಟ್ಟಡ ನಿಧಿಗಾಗಿ ಪ್ರಸಕ್ತ ಸಾಲಿನಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಕುರಿತು ಅನುಮೋದಿಸಲು ಸಭೆಗೆ ಕೋರಿದರು. ಮೇಲಿನ ವಿಷಯದ ಕುರಿತು ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು.

**ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ. (ಕೆಡಬ್ಲ್ಯುಆರ್–0016)**

**ಪ್ರಶ್ನೆ 01 : ಸೌಹಾರ್ದ ಕಾಯ್ದೆಯಲ್ಲಿ ಉಲ್ಲೇಖಿಸಿದಂತೆ ಪ್ರತಿ ಸೌಹಾರ್ದ ಸಹಕಾರಿ ಸಂಘವು ತನ್ನ ಲಾಭಾಂಶದಲ್ಲಿ ಶೇ.20% ಕಾರ್ಯಾಚರಣೆ ಮೀಸಲು ನಿಧಿಗೆ ವಿಂಗಡಣೆ ಮಾಡುತ್ತಿದ್ದು, ಸದರಿ ಬಳಕೆಯ ಬಗ್ಗೆ ಸ್ಪಷ್ಟೀಕರಣ.**

**ಉತ್ತರ :** ಕಾರ್ಯಾಚರಣೆ ಮೀಸಲು ನಿಧಿಯನ್ನು ಅನಿರೀಕ್ಷಿತ ನಷ್ಟ ಮತ್ತು ಸಾದಿಲ್ವಾರು ವೆಚ್ಚಗಳಿಗೆ ಬಳಸಬಹುದು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ಉಪವಿಧಿಗಳ ಪ್ರಕಾರ 2025–26ನೇ ಸಾಲಿನಲ್ಲಿ ರೂ.56,59,843/–ಗಳ ಮೊತ್ತವನ್ನು ಕಟ್ಟಡ ನಿಧಿಗೆ ಸೇರ್ಪಡೆ ಮಾಡಿರುವುದಕ್ಕೆ ಸರ್ವಾನುಮತದಿಂದ ಅನುಮೋದನೆ ನೀಡಿತು.

ನಿರ್ಣಯ : ಸಂಯುಕ್ತ ಸಹಕಾರಿಯ ಉಪವಿಧಿಗಳ ಪ್ರಕಾರ 2025–26ನೇ ಸಾಲಿನಲ್ಲಿ ರೂ.56,59,843/–ಗಳ ಮೊತ್ತವನ್ನು ಕಟ್ಟಡ ನಿಧಿಗೆ ಸೇರ್ಪಡೆ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 25 :** **ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.**

ನಡವಳಿ : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 26 :** **ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**

ನಡವಳಿ : ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 27 : ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.**

**ನಡವಳಿ :** ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡಲು ಕಾಯ್ದೆ ಪ್ರಕಾರ ಅವಕಾಶ ಇರುವುದಿಲ್ಲ. ಅದರಂತೆ, ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಸಾಲಗಳು ಮತ್ತು ಮುಂಗಡಗಳನ್ನು ನೀಡಿರುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡಲು ಕಾಯ್ದೆ ಪ್ರಕಾರ ಅವಕಾಶ ಇರುವುದಿಲ್ಲ. ಅದರಂತೆ, ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಸಾಲಗಳು ಮತ್ತು ಮುಂಗಡಗಳನ್ನು ನೀಡದೇ ಇರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 28 : ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.**

**ನಡವಳಿ :** ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 29 : ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು-ವೆಚ್ಚಗಳ ವಿವರಗಳನ್ನು ಪರಿಶೀಲಿಸಿ, ಅನುಮೋದಿಸುವ ಕುರಿತು.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಪ್ರಮುಖ ಕಾರ್ಯಗಳು ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಮಾತ್ರವಲ್ಲದೇ ಶಾಸನಾತ್ಮಕ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಆಸ್ತಿಗಳನ್ನು ಎಬಿಜೆ ಮಾಡುವುದು, ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸುವುದು ಸೇರಿದಂತೆ ಈ ಕಾರ್ಯಗಳನ್ನು ನಿರ್ವಹಿಸಲು ಕೆಲವು ವೆಚ್ಚಗಳು ಬರುತ್ತವೆ. ಈ ಶಾಸನಾತ್ಮಕ ವೆಚ್ಚಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಿ, ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು, ದಿನಾಂಕ 31.03.2026ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು 2025-26ನೇ ಸಾಲಿನಲ್ಲಿ ರೂ.5,73,947/-ರಷ್ಟು ಮೊತ್ತವನ್ನು ಪಾವತಿಸಲಾಗಿದೆ. ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಈ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ನಂತರ ಸಭೆಯು, ದಿನಾಂಕ 31.03.2026ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು 2025-26ನೇ ಸಾಲಿನಲ್ಲಿ ರೂ.5,73,947/-ರಷ್ಟು ಮೊತ್ತವನ್ನು ಪಾವತಿಸಿರುವುದಕ್ಕೆ ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲು ಸೂಚಿಸಿತು.

**ನಿರ್ಣಯ :** ದಿನಾಂಕ 31.03.2026ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು 2025-26ನೇ ಸಾಲಿನಲ್ಲಿ ರೂ.5,73,947/-ರಷ್ಟು ಮೊತ್ತವನ್ನು ಪಾವತಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲು ಸಭೆಯು ಸೂಚಿಸಿತು.

**ವಿಷಯ 30 : ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಲ್ಲಿ ಸುಸ್ಥಿ ಸಾಲಗಳು ಬರುವುದಿಲ್ಲ. ಆದರೆ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮೇಲೆ ಶಾಸನಾತ್ಮಕ ಕಾರ್ಯಗಳಿಗೆ ವೆಚ್ಚ ಮಾಡುವ ಸಂದರ್ಭದಲ್ಲಿ, ವಿವಿಧ ನ್ಯಾಯಾಲಯಗಳಲ್ಲಿ, 441 ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಂಯುಕ್ತ ಸಹಕಾರಿಯಿಂದ ವೆಚ್ಚ ಪಾವತಿ ಮಾಡಲಾಗುತ್ತಿದೆ. ಸಂಯುಕ್ತ ಸಹಕಾರಿಯ ವತಿಯಿಂದ ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು ಇಲ್ಲಿಯವರೆಗೆ ಒಟ್ಟು ರೂ.7,30,349/-ಗಳ ಮೊತ್ತವನ್ನು ಪಾವತಿಸಲಾಗಿದೆ. ಇದು ಸಾಲದ ಮೊತ್ತವಾಗಿರುವುದಿಲ್ಲ. ಬದಲಾಗಿ ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆಯಬೇಕಾದ ಮೊತ್ತವಾಗಿದ್ದು, ಈ ಮೊತ್ತವನ್ನು ಬರತಕ್ಕ ಖಾತೆಯಲ್ಲಿ ಇರಿಸಲಾಗಿದೆ. ಆದರೆ, ಆ ಸೌಹಾರ್ದ ಸಹಕಾರಿಗಳು ಸಮಾಪನೆಯ ಹಂತದಲ್ಲಿರುವ ಹಾಗೂ ಸದರಿ ಮೊತ್ತವನ್ನು ಮರು ಪಾವತಿಸಲು ಅಶಕ್ತವಾಗಿರುವುದರಿಂದ ಬರತಕ್ಕ ಖಾತೆಯಲ್ಲಿರುವ ಮೊತ್ತವನ್ನು ಮುಂದುವರೆಸುವ ಅಥವಾ ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ (Write off) ಮಾಡುವ ಬಗ್ಗೆ ತೀರ್ಮಾನಿಸಲು ಮಂಡಿಸಿದೆ. ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ಮೊತ್ತದ ವಿವರಗಳು ಈ ಕೆಳಗಿನಂತಿದ್ದು, ಅದರಂತೆ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಗಾಗಿ ಸಭೆಗೆ ಕೋರಿದರು. ಈ ಮೊತ್ತವನ್ನು ಸಂಬಂಧಪಟ್ಟ ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆಯಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಭೆಯು ಸಹಮತ ವ್ಯಕ್ತಪಡಿಸಿತು.

| ಕ್ರ. ಸಂ. | **ಸಹಕಾರಿಯ ಹೆಸರು** | **ಮೊತ್ತ** |
|---|---|---|
| 1 | ಪ್ರಸನ್ನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ. (ವಿಜೆಎನ್-0053) | 3,000.00 |
| 2 | ಶರ್ಮಾನ್ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಪುತ್ತೂರು. (ಎಂಎನ್‌ಜಿ-0053) | 35,000.00 |
| 3 | ಶ್ರೀ ಗುರುಸೌರ್ವಭೌಮ ಸೌಹಾರ್ದ ಸಹಕಾರಿ ನಿ., ಬೆಂಗಳೂರು. (ಬಿಜಿಯು-0280) | 2,50,000.00 |
| 4 | ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. (ಬಿಜಿಯು-0154) | 2,900.00 |
| 5 | ಶ್ರೀ ಭೀಮಾಂಭಿಕಾ ಮಹಿಳಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ. (ಬಿಜಿಎಂ-0144) | 13,490.00 |
| 6 | ಶ್ರೀ ಗಜಾನನ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ. (ಬಿಜಿಎಂ-0290) | 7,920.00 |
| | **ಒಟ್ಟು** | **3,12,310.00** |

ನಂತರ ಸಭೆಯು, ದಿನಾಂಕ 31.03.2026ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ಹಾಗೂ ನಿಯಂತ್ರಣಾತ್ಮಕ ವೆಚ್ಚಗಳಿಗಾಗಿ ಮತ್ತು ಕಾನೂನು ಕ್ರಮವಿಡಲು ಸಂಯುಕ್ತ ಸಹಕಾರಿಯಿಂದ ಪಾವತಿಸಲಾಗಿರುವ ರೂ.7,30,349/-ರಷ್ಟು ಮೊತ್ತದಲ್ಲಿ ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ರೂ.3,12,310/-ಗಳ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ (Write off) ಮಾಡಿಕೊಳ್ಳಲು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಈ ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ (Write off) ಮಾಡಿಕೊಳ್ಳಲಾದ ರೂ.3,12,310/-ಗಳ ಮೊತ್ತದಲ್ಲಿ ಈ ಪಟ್ಟಿಯಲ್ಲಿರುವ ಯಾವುದಾದರೂ ಸೌಹಾರ್ದ ಸಹಕಾರಿಗಳಿಂದ ಮೊತ್ತ ಬರುವ ಸಾಧ್ಯತೆ ಇದ್ದಲ್ಲಿ ಅಂತಹ ಸೌಹಾರ್ದ ಸಹಕಾರಿಗಳಿಂದ ಮೊತ್ತವನ್ನು ಸಂಯುಕ್ತ ಸಹಕಾರಿಗೆ ಪಡೆದುಕೊಳ್ಳಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ನಿರ್ಣಯ** : ದಿನಾಂಕ 31.03.2026ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ಹಾಗೂ ನಿಯಂತ್ರಣಾತ್ಮಕ ವೆಚ್ಚಗಳಿಗಾಗಿ ಮತ್ತು ಕಾನೂನು ಕ್ರಮವಿಡಲು ಸಂಯುಕ್ತ ಸಹಕಾರಿಯಿಂದ ಪಾವತಿಸಲಾಗಿರುವ ರೂ.7,30,349/-ರಷ್ಟು ಮೊತ್ತದಲ್ಲಿ ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ರೂ.3,12,310/-ಗಳ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ (Write off) ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಈ ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ (Write off) ಮಾಡಿಕೊಳ್ಳಲಾದ ರೂ.3,12,310/-ಗಳ ಮೊತ್ತದಲ್ಲಿ ಈ ಪಟ್ಟಿಯಲ್ಲಿರುವ ಯಾವುದಾದರೂ ಸೌಹಾರ್ದ

ಸಹಕಾರಿಗಳಿಂದ ಮೊತ್ತ ಬರುವ ಸಾಧ್ಯತೆ ಇದ್ದಲ್ಲಿ ಅಂತಹ ಸೌಹಾರ್ದ ಸಹಕಾರಿಗಳಿಂದ ಮೊತ್ತವನ್ನು ಸಂಯುಕ್ತ ಸಹಕಾರಿಗೆ ಪಡೆದುಕೊಳ್ಳಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 31 : ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.**

**ನಡವಳಿ :** ಮಂಡಲಿಯ ಯಾವುದೇ ನಿರ್ದೇಶಕರನ್ನು ತೆಗೆದು ಹಾಕುವ ಪ್ರಸಂಗ ಉದ್ಭವಿಸಿಲ್ಲವಾದ್ದರಿಂದ ಪ್ರಸಕ್ತ ವರ್ಷದಲ್ಲಿ ಇದರ ಅನ್ವಯಿಸುವಿಕೆ ಇಲ್ಲದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಮಂಡಲಿಯ ಯಾವುದೇ ನಿರ್ದೇಶಕರನ್ನು ತೆಗೆದು ಹಾಕುವ ಪ್ರಸಂಗ ಉದ್ಭವಿಸಿಲ್ಲವಾದ್ದರಿಂದ ಪ್ರಸಕ್ತ ವರ್ಷದಲ್ಲಿ ಇದರ ಅನ್ವಯಿಸುವಿಕೆ ಇಲ್ಲದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 32 : 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.**

**ನಡವಳಿ :** ಸೌಹಾರ್ದ ಸಹಕಾರಿ ಕಾಯ್ದೆ ಕಲಂ 65ರಂತೆ ಪ್ರಸಕ್ತ ಸಾಲಿನಲ್ಲಿ ಯಾವುದೇ ವಿಚಾರಣೆ ನಡೆದಿಲ್ಲದಿರುವುದರಿಂದ ಈ ವಿಷಯವು ಅನ್ವಯಿಸದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಸೌಹಾರ್ದ ಸಹಕಾರಿ ಕಾಯ್ದೆ ಕಲಂ 65ರಂತೆ ಪ್ರಸಕ್ತ ಸಾಲಿನಲ್ಲಿ ಯಾವುದೇ ವಿಚಾರಣೆ ನಡೆದಿಲ್ಲದಿರುವುದರಿಂದ ಈ ವಿಷಯವು ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 33 : ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.**

**ನಡವಳಿ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಂತೆ ಸೌಹಾರ್ದ ಸಹಕಾರಿಗಳ ಸದಸ್ಯತ್ವವು ಸಂಯುಕ್ತ ಸಹಕಾರಿಯಲ್ಲಿ ಕಡ್ಡಾಯವಾಗಿರುವುದರಿಂದ ಯಾವುದೇ ಸಹಕಾರಿಯ ಸದಸ್ಯತ್ವವನ್ನು ನಿರಾಕರಿಸಲು ಸಾಧ್ಯವಿಲ್ಲದಿರುವುದರಿಂದ ಇದು ಅನ್ವಯಿಸದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಂತೆ ಸೌಹಾರ್ದ ಸಹಕಾರಿಗಳ ಸದಸ್ಯತ್ವವು ಸಂಯುಕ್ತ ಸಹಕಾರಿಯಲ್ಲಿ ಕಡ್ಡಾಯವಾಗಿರುವುದರಿಂದ ಯಾವುದೇ ಸಹಕಾರಿಯ ಸದಸ್ಯತ್ವವನ್ನು ನಿರಾಕರಿಸಲು ಸಾಧ್ಯವಿಲ್ಲದಿರುವುದರಿಂದ ಇದು ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 34 : ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.**

**ನಡವಳಿ :** ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು 2025–26ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಗೆ ಅಗತ್ಯವಿರುವ ಕಿರಿಯ ಅಧಿಕಾರಿ ಹುದ್ದೆಗೆ ಹಾಗೂ ಸಹಾಯಕ ಹುದ್ದೆಗಳಿಗೆ ದಿನಾಂಕ 16.12.2024ರಂದು ನಡೆದ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ದಿನಾಂಕ 02.01.2025ರಂದು ನೇಮಕಾತಿ ಪತ್ರಿಕಾ ಪ್ರಕಟಣೆಯನ್ನು ನೀಡಿ, 01 ಕಿರಿಯ ಅಧಿಕಾರಿ ಹುದ್ದೆಗೆ ಹಾಗೂ 03 ಸಹಾಯಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸಲು ದಿನಾಂಕ 20.01.2025ರಂದು ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಕಿರಿಯ ಅಧಿಕಾರಿ ಹಾಗೂ ಸಹಾಯಕ ಹುದ್ದೆಗಳಿಗೆ ಸಿಬ್ಬಂದಿಗಳ ನೇರ ನೇಮಕಾತಿ ಪ್ರಕ್ರಿಯೆಯು ಸಿಬ್ಬಂದಿ ನೇಮಕಾತಿ ಉಪ ಸಮಿತಿಯ ಮೂಲಕ ಜರುಗಿರುತ್ತದೆ. ಈ ಸಿಬ್ಬಂದಿ ನೇಮಕಾತಿ ಉಪ ಸಮಿತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು, ಸದಸ್ಯರಾಗಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಸಹಕಾರಿ ಸಂಘಗಳ ಮಾನ್ಯ ಅಪರ ನಿಬಂಧಕರಾದ (ನಿ) ಶ್ರೀ ಸಿ.ಎಸ್.ವೀರೇಶ, ಸಹಕಾರಿ ಸಂಘಗಳ ಮಾನ್ಯ ಅಪರ ನಿಬಂಧಕರಾದ (ನಿ) ಶ್ರೀ ಹೆಚ್.ಎಸ್.ನಾಗರಾಜಯ್ಯ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಇರುತ್ತಾರೆ. ಕಿರಿಯ ಅಧಿಕಾರಿ ಹುದ್ದೆಗೆ ಹಾಗೂ ಸಹಾಯಕ ಹುದ್ದೆಗಳಿಗೆ

ಲಿಖಿತ ಪರೀಕ್ಷೆಯನ್ನು ದಿನಾಂಕ 27.07.2025ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಈ ಸಂಸ್ಥೆಯ ಮೂಲಕ ನಡೆಸಲಾಗಿತ್ತು. ದಿನಾಂಕ 19.09.2025ರಂದು ಸಿಬ್ಬಂದಿ ನೇಮಕಾತಿ ಉಪ ಸಮಿತಿಯ ಮೂಲಕ ಅಭ್ಯರ್ಥಿಗಳ ಸಂದರ್ಶನವನ್ನು ನಡೆಸಲಾಗಿರುತ್ತದೆ. ದಿನಾಂಕ 29.10.2025ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ಅನುಮೋದನೆಯಾದಂತೆ ಆಯ್ಕೆ ಪಟ್ಟಿಯಲ್ಲಿನ ಈ ಕೆಳಗಿನ 04 ಅಭ್ಯರ್ಥಿಗಳಿಗೆ ನೇಮಕಾತಿ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಇದರಲ್ಲಿ 04 ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿದ್ದು, ಸದರಿ ಸಿಬ್ಬಂದಿಗಳಿಗೆ ಸ್ಥಳ ನಿಯುಕ್ತಿ ಮಾಡಿ, ಕಾರ್ಯಹಂಚಿಕೆ ಮಾಡಲಾಗಿದೆ. ವಿವರಗಳು ಈ ಕೆಳಗಿನಂತಿದೆ.

| **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.** | | | |
|---|---|---|---|
| **2025–26ನೇ ಸಾಲಿನಲ್ಲಿ ಕಿರಿಯ ಅಧಿಕಾರಿ ಹಾಗೂ ಸಹಾಯಕ ಹುದ್ದೆಗಳಿಗೆ ಸಿಬ್ಬಂದಿ ನೇಮಕಾತಿಯಲ್ಲಿ ಸೇವೆಗೆ ಹಾಜರಾದ ಅಭ್ಯರ್ಥಿಗಳ ವಿವರಗಳು** | | | |
| **ಕ್ರ. ಸಂ.** | **ಹೆಸರು** | **ಹುದ್ದೆ** | **ಸ್ಥಳ ನಿಯುಕ್ತಿ ಆದೇಶ** |
| **ಕೇಂದ್ರ ಕಛೇರಿ** | | | |
| 1 | ಸವಿತಾ ಎನ್ ಇ | ಕಿರಿಯ ಅಧಿಕಾರಿ | ಕೇಂದ್ರ ಕಛೇರಿ, ಬೆಂಗಳೂರು. |
| **ಕೇಂದ್ರ ಕಛೇರಿ** | | | |
| 2 | ಸುಧಾ ಎಸ್ | ಸಹಾಯಕಿ | ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು. |
| **ಬೆಳಗಾವಿ ಪ್ರಾಂತೀಯ ಕಛೇರಿ** | | | |
| 3 | ಗೀತಾ ಶಿವಲಿಂಗಪ್ಪ ಗೋಡಿ | ಸಹಾಯಕಿ | ಬೆಳಗಾವಿ ದಾವಾ ಪಂಚಾಯಿತಿ ನ್ಯಾಯಾಲಯ, ಬೆಳಗಾವಿ ಪ್ರಾಂತೀಯ ಕಛೇರಿ. |
| 4 | ಮಂಜುಳಾ ರಾಜಶೇಖರ ತೆಲಸಂಗ | ಸಹಾಯಕಿ | ಬೆಳಗಾವಿ ದಾವಾ ಪಂಚಾಯಿತಿ ನ್ಯಾಯಾಲಯ, ಬೆಳಗಾವಿ ಪ್ರಾಂತೀಯ ಕಛೇರಿ. |

ಹಾಗೆಯೇ, ಸಂಯುಕ್ತ ಸಹಕಾರಿಗೆ ಅಗತ್ಯವಿರುವ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಗುತ್ತಿಗೆ ಆಧಾರದ ಸಿಬ್ಬಂದಿ ನೇಮಕಾತಿಗೆ 2024–25ನೇ ಸಾಲಿನಲ್ಲಿ ದಿನಾಂಕ 25.06.2024ರಂದು ಹೊರಡಿಸಲಾಗಿದ್ದ ಅಧಿಸೂಚನೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿದ್ದ ಕೆಲವು ಅಭ್ಯರ್ಥಿಗಳು ರಾಜೀನಾಮೆ ನೀಡಿರುವ ಕಾರಣದಿಂದ ಅದೇ ಪಟ್ಟಿಯಲ್ಲಿರುವ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಕಳುಹಿಸಲಾಗಿತ್ತು. ಇದರಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಒಬ್ಬ ಸಿಬ್ಬಂದಿ ಹಾಗೂ ಕಿರಿಯ ಸಹಾಯಕ ಹುದ್ದೆಗೆ ಒಬ್ಬ ಸಿಬ್ಬಂದಿಯು ಸೇವೆಗೆ ಹಾಜರಾಗಿರುತ್ತಾರೆ. ಸದರಿ ಸಿಬ್ಬಂದಿಗಳಿಗೆ ಸ್ಥಳ ನಿಯುಕ್ತಿ ಮಾಡಿ, ಕಾರ್ಯಹಂಚಿಕೆ ಮಾಡಲಾಗಿದೆ. ವಿವರಗಳು ಈ ಕೆಳಗಿನಂತಿದೆ.

| **ಕ್ರ. ಸಂ.** | **ಹೆಸರು** | **ಪ್ರಾಂತ** | **ಸ್ಥಳ ನಿಯುಕ್ತಿ ಆದೇಶ** |
|---|---|---|---|
| **ಸೌಹಾರ್ದ ಅಭಿವೃದ್ಧಿ ಅಧಿಕಾರಿ** | | | |
| 1 | ಸುಕರಾಜ | ಕಲಬುರಗಿ ಪ್ರಾಂತ | ಬೀದರ್ ಜಿಲ್ಲೆ |
| **ಕಿರಿಯ ಸಹಾಯಕ** | | | |
| 2 | ಬಾಬು | ಬೆಳಗಾವಿ ಪ್ರಾಂತ | ಧಾರವಾಡ ಜಿಲ್ಲಾ ಸಂಪರ್ಕ ಕಛೇರಿ |

ಮೇಲ್ಕಂಡ ಪಟ್ಟಿಯಲ್ಲಿರುವ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಯಾರು ಇರುವುದಿಲ್ಲ ಎಂದು ತಿಳಿಸಿದರು.

ನಂತರ ಸಭೆಯು, 2025–26ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಗೆ ಅಗತ್ಯವಿದ್ದ ಕಿರಿಯ ಅಧಿಕಾರಿ ಹುದ್ದೆಗೆ ಹಾಗೂ ಸಹಾಯಕ ಹುದ್ದೆಗಳಿಗೆ ನಡೆದಿರುವ ಖಾಯಂ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳಲ್ಲಿ ಮತ್ತು ಸಂಯುಕ್ತ ಸಹಕಾರಿಗೆ ಅಗತ್ಯವಿದ್ದ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಗುತ್ತಿಗೆ ಆಧಾರದ ಸಿಬ್ಬಂದಿ ನೇಮಕಾತಿಗೆ 2024–25ನೇ ಸಾಲಿನಲ್ಲಿ ಹೊರಡಿಸಲಾಗಿದ್ದ ಅಧಿಸೂಚನೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಕಾಯ್ದಿರಿಸಿದ ಪಟ್ಟಿಯಿಂದ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾದ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ

ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಇಲ್ಲದೇ ಇರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : 2025–26ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಗೆ ಅಗತ್ಯವಿದ್ದ ಕಿರಿಯ ಅಧಿಕಾರಿ ಹುದ್ದೆಗೆ ಹಾಗೂ ಸಹಾಯಕ ಹುದ್ದೆಗಳಿಗೆ ನಡೆದಿರುವ ಖಾಯಂ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳಲ್ಲಿ ಮತ್ತು ಸಂಯುಕ್ತ ಸಹಕಾರಿಗೆ ಅಗತ್ಯವಿದ್ದ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಗುತ್ತಿಗೆ ಆಧಾರದ ಸಿಬ್ಬಂದಿ ನೇಮಕಾತಿಗೆ 2024–25ನೇ ಸಾಲಿನಲ್ಲಿ ಹೊರಡಿಸಲಾಗಿದ್ದ ಅಧಿಸೂಚನೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಕಾಯ್ದಿರಿಸಿದ ಪಟ್ಟಿಯಿಂದ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾದ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಇಲ್ಲದೇ ಇರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 35** : **ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2025ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ದಿನಾಂಕ 12.09.2025 ರಿಂದ ಜಾರಿಗೆ ಬಂದಿವೆ. ಕಾಯ್ದೆ ಪ್ರಕಾರ ಕಾಯ್ದೆ ತಿದ್ದುಪಡಿ ಅಂಶಗಳಿಗೆ ಅನುಗುಣವಾಗಿ ಉಪವಿಧಿಯನ್ನು ತಿದ್ದುಪಡಿ ಮಾಡಿಕೊಳ್ಳಲು ಮುಂಬರುವ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಬೇಕಿರುತ್ತದೆ. ಆದರೆ, ಸದರಿ ತಿದ್ದುಪಡಿಗಳಿಗೆ ಸಂಬಂಧಿಸಿದ ನಿಯಮಗಳು ಇದುವರೆಗೂ ಜಾರಿಗೆ ಬಂದಿರುವುದಿಲ್ಲ. ತಿದ್ದುಪಡಿ ಅಂಶಗಳಾದ ಮತ ಚಲಾವಣೆ, ಮಂಡಲಿಯಲ್ಲಿ ಮೀಸಲಾತಿ, ನಿರ್ದೇಶಕರ ಸಂಖ್ಯೆ, ಚುನಾವಣಾ ವಿಧಾನ, ಆಸ್ತಿ ಜವಾಬ್ದಾರಿ ಘೋಷಣೆ, ಪದಾಧಿಕಾರಿ ಚುನಾವಣೆಗಳಿಗೆ ಸಂಬಂಧಿಸಿದಂತೆ ನಿಯಮಗಳ ಅಗತ್ಯತೆ ಇದ್ದು, ನಿಯಮಗಳು ಜಾರಿಗೆ ಬಂದ ನಂತರವಷ್ಟೇ ಅವುಗಳಿಗೆ ಸ್ಪಷ್ಟತೆ ಸಿಗಲಿದೆ. ಅದಕ್ಕೆ ಅನುಗುಣವಾಗಿ ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಅಲ್ಲದೇ, ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಗೌ॥ ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಬೆಂಗಳೂರು, ಧಾರವಾಡ ಹಾಗೂ ಕಲಬುರಗಿ ಪೀಠಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳ ವಿಚಾರಣೆ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು ಪ್ರಸ್ತಾವನೆಯು ಪ್ರಸ್ತುತ ಇರುವುದಿಲ್ಲ ಎಂದು ತಿಳಿಸಿದರು.

ನಂತರ ಸಭೆಯು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2025ರಲ್ಲಿ ಮಾಡಲಾದ ತಿದ್ದುಪಡಿಗಳು ದಿನಾಂಕ 12.09.2025 ರಿಂದ ಜಾರಿಗೆ ಬಂದಿದ್ದರೂ, ತಿದ್ದುಪಡಿ ಅಂಶಗಳಿಗೆ ಸಂಬಂಧಿಸಿದ ನಿಯಮಗಳು ಇನ್ನೂ ಜಾರಿಗೆ ಬಂದಿರುವುದಿಲ್ಲ ಹಾಗೂ ಮತ ಚಲಾವಣೆ, ಮಂಡಲಿಯಲ್ಲಿ ಮೀಸಲಾತಿ, ನಿರ್ದೇಶಕರ ಸಂಖ್ಯೆ, ಚುನಾವಣಾ ವಿಧಾನ, ಆಸ್ತಿ–ಜವಾಬ್ದಾರಿ ಘೋಷಣೆ ಮತ್ತು ಪದಾಧಿಕಾರಿಗಳ ಚುನಾವಣೆ ಸೇರಿದಂತೆ ವಿವಿಧ ಅಂಶಗಳಿಗೆ ನಿಯಮಗಳ ಮೂಲಕ ಸ್ಪಷ್ಟತೆ ಅಗತ್ಯವಿರುತ್ತದೆ. ಅಲ್ಲದೇ, ತಿದ್ದುಪಡಿಗಳಿಗೆ ಸಂಬಂಧಿಸಿದ ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ವಿಚಾರಣೆಯಲ್ಲಿರುವ ಹಿನ್ನೆಲೆಯಲ್ಲಿ, ನಿಯಮಗಳು ಜಾರಿಗೆ ಬಂದು ಹಾಗೂ ನ್ಯಾಯಾಲಯದ ಪ್ರಕರಣಗಳಲ್ಲಿ ಸ್ಪಷ್ಟತೆ ದೊರೆತ ನಂತರ ಕಾಯ್ದೆ ತಿದ್ದುಪಡಿ ಅಂಶಗಳಿಗೆ ಅನುಗುಣವಾಗಿ ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ವಿಷಯವನ್ನು ಮುಂಬರುವ ವಾರ್ಷಿಕ ಸಾಮಾನ್ಯ ಸಭೆಗೆ ಅಥವಾ ವಿಶೇಷ ಸಾಮಾನ್ಯ ಸಭೆಗೆ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಿತು.

**ನಿರ್ಣಯ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2025ರಲ್ಲಿ ಮಾಡಲಾದ ತಿದ್ದುಪಡಿಗಳು ದಿನಾಂಕ 12.09.2025 ರಿಂದ ಜಾರಿಗೆ ಬಂದಿದ್ದರೂ, ತಿದ್ದುಪಡಿ ಅಂಶಗಳಿಗೆ ಸಂಬಂಧಿಸಿದ ನಿಯಮಗಳು ಇನ್ನೂ ಜಾರಿಗೆ ಬಂದಿರುವುದಿಲ್ಲ ಹಾಗೂ ಮತ ಚಲಾವಣೆ, ಮಂಡಲಿಯಲ್ಲಿ ಮೀಸಲಾತಿ, ನಿರ್ದೇಶಕರ ಸಂಖ್ಯೆ, ಚುನಾವಣಾ ವಿಧಾನ, ಆಸ್ತಿ–ಜವಾಬ್ದಾರಿ ಘೋಷಣೆ ಮತ್ತು ಪದಾಧಿಕಾರಿಗಳ ಚುನಾವಣೆ ಸೇರಿದಂತೆ ವಿವಿಧ ಅಂಶಗಳಿಗೆ ನಿಯಮಗಳ ಮೂಲಕ ಸ್ಪಷ್ಟತೆ ಅಗತ್ಯವಿರುತ್ತದೆ. ಅಲ್ಲದೇ, ತಿದ್ದುಪಡಿಗಳಿಗೆ ಸಂಬಂಧಿಸಿದ ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ವಿಚಾರಣೆಯಲ್ಲಿರುವ ಹಿನ್ನೆಲೆಯಲ್ಲಿ, ನಿಯಮಗಳು ಜಾರಿಗೆ ಬಂದು ಹಾಗೂ ನ್ಯಾಯಾಲಯದ ಪ್ರಕರಣಗಳಲ್ಲಿ ಸ್ಪಷ್ಟತೆ ದೊರೆತ ನಂತರ ಕಾಯ್ದೆ ತಿದ್ದುಪಡಿ ಅಂಶಗಳಿಗೆ ಅನುಗುಣವಾಗಿ ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ವಿಷಯವನ್ನು ಮುಂಬರುವ ವಾರ್ಷಿಕ ಸಾಮಾನ್ಯ ಸಭೆಗೆ ಅಥವಾ ವಿಶೇಷ ಸಾಮಾನ್ಯ ಸಭೆಗೆ ಮಂಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 36 : ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯನ್ನು ರಚಿಸಿ ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗಿದೆ. ಈ ನಡತೆ ಸಂಹಿತೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿಯೂ ಸಹ ಲಭ್ಯವಿರುತ್ತದೆ. ಈ ನಡತೆ ಸಂಹಿತೆಯನ್ನು ಎಲ್ಲಾ ಸೌಹಾರ್ದ ಸಹಕಾರಿಗಳು ಸಹ ಪಾಲನೆ ಮಾಡಲು ತಿಳಿಸಿದರು.

ನಂತರ ಸಭೆಯು, ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯನ್ನು ರಚಿಸಿ ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡಿರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯನ್ನು ರಚಿಸಿ ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 37 : ಸಂಯುಕ್ತ ಸಹಕಾರಿಯ ಸಮಾಪನ.**

**ನಡವಳಿ** : ಸಂಯುಕ್ತ ಸಹಕಾರಿಯ ಸಮಾಪನೆ ವಿಷಯವು ಅನ್ವಯಿಸದಿರುವುದನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ ಸಮಾಪನೆ ವಿಷಯವು ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 38 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.**

**ನಡವಳಿ** : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು ಯಾವುದು ಇಲ್ಲದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು ಯಾವುದು ಇಲ್ಲದಿರುವ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 39 : ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.**

**ನಡವಳಿ** : ಮೇಲಿನ ವಿಷಯದ ಸಂದರ್ಭದಲ್ಲಿ ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯವನ್ನು ಚರ್ಚಿಸಲು ಇಚ್ಛಿಸುವವರು ವಿಷಯಗಳನ್ನು ದಿನಾಂಕ 01.09.2026ರೊಳಗಾಗಿ kssfcladmin@souharda.coop ಈ ಇ-ಮೇಲ್ ಐಡಿಗೆ ಕಳುಹಿಸಲು ತಿಳಿಸಲಾಗಿತ್ತು. ಅದರಂತೆ, 1) ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಚಿಕ್ಕಮಗಳೂರು. (ಸಿಕೆಎಮ್-0055), 2) ದಿ ಜುಮನಾಳ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ವಿಜಯಪುರ. (ವಿಜೆಪಿ-0142), 3) ಶ್ರೀ ಚನ್ನಬಸವೇಶ್ವರ ಸೌಹಾರ್ದ ಸಹಕಾರಿ ಮತ್ತು ವೀರರಾಣಿ ಚೆನ್ನಮ್ಮ ಸೌಹಾರ್ದ ಸಂಕೇಶ್ವರ, 4) ಯು.ಕೆ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ, ಉತ್ತರ ಕನ್ನಡ. (ಕೆಡಬ್ಲ್ಯೂಆರ್-0058), 5) ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು. (ಬಿಜಿಯು-0228), 6) ಕೊಡವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಕೊಡಗು. (ಎಂಡಿಕೆ-0010), 7) ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ-0011), 8) ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ. (ಕೆಡಬ್ಲ್ಯುಆರ್-0016), 9) ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ. (ಡಿಡಬ್ಲ್ಯುಡಿ-0002), 10) ಜನಧನ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ. (ಡಿಡಬ್ಲ್ಯುಡಿ-0108), 11) ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು. (ಆರ್‌ಸಿಆರ್-0095) ಈ 11 ಸದಸ್ಯ ಸಹಕಾರಿಗಳಿಂದ ಒಟ್ಟು 33 ಪ್ರಶ್ನೆಗಳು ಸ್ವೀಕೃತವಾಗಿರುತ್ತದೆ. ಈ ಪ್ರಶ್ನೆಗಳಿಗೆ ಲಿಖಿತ ರೂಪದಲ್ಲಿ ಉತ್ತರಗಳನ್ನು ಒದಗಿಸಲಾಗಿದೆ. ಇದಕ್ಕೆ ಒಂದು ಉಪ ಪ್ರಶ್ನೆಯನ್ನು ಕೇಳಲು ಅವಕಾಶ ಇರುತ್ತದೆ. ಇದರೊಂದಿಗೆ ಸದರಿಯವರ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಉಳಿದ ಸದಸ್ಯ ಸಹಕಾರಿಗಳಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಗುತ್ತದೆ. ಇವುಗಳನ್ನು ಹೊರತುಪಡಿಸಿ ಇನ್ನಾವುದೇ ವಿಷಯಗಳಿದ್ದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯವನ್ನು ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಅಜೆಂಡಾವಾರು ವಿಷಯಗಳ ಮಂಡನೆಯ ನಂತರ ಲಿಖಿತವಾಗಿ ಪ್ರಶ್ನೆ ಕೇಳಿರುವ ಸೌಹಾರ್ದ ಸಹಕಾರಿಗಳ ಪ್ರಶ್ನೆಗಳಿಗೆ ಈಗಾಗಲೇ ಲಿಖಿತವಾಗಿ ಉತ್ತರಗಳನ್ನು ನೀಡಲಾಗಿದ್ದು, ಸದರಿಯವರುಗಳಿಗೆ ಪೂರಕ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಯಿತು. ಲಿಖಿತವಾಗಿ ಕೇಳಲಾಗಿದ್ದ ಪ್ರಶ್ನೆಗಳು ಹಾಗೂ ಅವುಗಳಿಗೆ ನೀಡಲಾಗಿದ್ದ ಉತ್ತರಗಳ ವಿವರಗಳು ಈ ಕೆಳಗಿನಂತಿದೆ;

**ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಚಿಕ್ಕಮಗಳೂರು. (ಸಿಕೆಎಮ್–0055)**

**ಪ್ರಶ್ನೆ 01** : **ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಪ್ರತಿ ಜಿಲ್ಲೆಗೂ ಪ್ರಾತಿನಿಧ್ಯ ದೊರೆಯುವಂತೆ ಉಪವಿಧಿ ತಿದ್ದುಪಡಿ ಮಾಡುವ ಕುರಿತು.**

**ಉತ್ತರ** : ತಮ್ಮ ಒಕ್ಕೂಟ ಸಹಕಾರಿಯು ವ್ಯಕ್ತಪಡಿಸಿರುವ ಜಿಲ್ಲಾವಾರು ಪ್ರಾತಿನಿಧ್ಯದ ಬೇಡಿಕೆಯನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ. ಮುಂದುವರೆದು, ಸೌಹಾರ್ದ ಸಹಕಾರಿ ಕಾಯ್ದೆಗೆ 2025ರಲ್ಲಿ ಸದರಿ ವಿಷಯದ ಕುರಿತು ಆಗಿರುವ ತಿದ್ದುಪಡಿಗಳಲ್ಲಿ ಮೇಲಿನ ವಿಷಯ ಸೇರಿದಂತೆ ಇತರೆ ಅಂಶಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಸದರಿ ವಿಷಯದ ಕುರಿತು ಸೂಕ್ತವಾಗಿ ತೀರ್ಮಾನಿಸಲಾಗುವುದು.

**ದಿ ಜುಮನಾಳ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ವಿಜಯಪುರ. (ವಿಜೆಪಿ–0142)**

**ಪ್ರಶ್ನೆ 01** : ಪಂಚಾಯತ್ ಪ್ರಕರಣಗಳ ದಾಖಲಾದ ಮೇಲೆ ಅವಾರ್ಡ್ ಆಗಲು, ಕನಿಷ್ಠ ಎಷ್ಟು ದಿನಗಳು ಬೇಕು. ಇದನ್ನು ಸರಳೀಕರಣಗೊಳಿಸಬೇಕು.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ನಿ., 441 ಇಲ್ಲಿ ದಾಖಲಾಗುವ ದಾವಾ ಪ್ರಕರಣ ಕಡತಗಳು ದಾಖಲಾದ ಮೇಲೆ ಕರ್ನಾಟಕ ಸಿವಿಲ್ ತಿದ್ದುಪಡಿ ಕಾಯ್ದೆ– 2024ರ ಪ್ರಕಾರ ವಿವಾದಾಂಶಗಳ ರಚನೆಯಾದ ನಂತರ 12 ತಿಂಗಳೊಳಗೆ ಪ್ರಕರಣವನ್ನು ಇತ್ಯರ್ಥಪಡಿಸಬೇಕೆಂದು ನಿಯಮವಿರುತ್ತದೆ. ಈ ನಿಯಮವನ್ನು ಅನ್ವಯಿಸುವ ಕುರಿತು ಮಾನ್ಯ ಪೀಠಾಧಿಕಾರಿಗಳು ನಿರ್ಧರಿಸಬಹುದಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ– 1997ರ ಕಲಂ–37(ಎ) ಅಧಿಭಾರ ದಾವೆಗಳಿಗೆ ಮಾತ್ರ 12 ತಿಂಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು ಎಂದಿರುತ್ತದೆ. ಆದಾಗ್ಯೂ ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು 18 ತಿಂಗಳುಗಳವರೆಗೆ ವಿಸ್ತರಿಸಬಹುದು.

**ಉತ್ತರ** : **ಸರಳೀಕರಣ:– ಮಾನ್ಯ ಪೀಠಾಧಿಕಾರಿಗಳು ನಿಯಮಾನುಸಾರವಾಗಿ ಕ್ರಮವಿಡುತ್ತಾರೆ.**

**ಪ್ರಶ್ನೆ 02** : **ಅಮಲ್ಜಾರಿ ಪ್ರಕರಣ ದಾಖಲಿಸಲು ಬೆಳಗಾವಿ ಹೋಗುವುದು ತೊಂದರೆಯಾಗುತ್ತಿದ್ದು, ಪ್ರತಿ ಮೂರು ಅಥವಾ ನಾಲ್ಕು ಜಿಲ್ಲೆಗಳಿಗೆ ಒಬ್ಬರಂತೆ ನಿಯಮ 441ರಲ್ಲಿ ಒಬ್ಬ ಸಹಾಯಕ ನಿಬಂಧಕರನ್ನು ಏಕೆ ನೇಮಿಸಿಕೊಳ್ಳಬಾರದು. ನೇಮಿಸಿಕೊಂಡರೆ ಸಾಲ ವಸೂಲಾತಿ ಬೇಗ ಆಗುತ್ತದೆ.**

**ಉತ್ತರ** : ಪ್ರಸ್ತುತ ಬೆಂಗಳೂರು ಮತ್ತು ಬೆಳಗಾವಿ ಪೀಠಗಳಿಗೆ ಒಬ್ಬ ಪೂರ್ಣಕಾಲಿಕ ಸಹಾಯಕ ನಿಬಂಧಕರು ಕಾರ್ಯನಿರ್ವಹಿಸುತ್ತಿದ್ದಾರೆ. ಬೆಳಗಾವಿ ಪೀಠಕ್ಕೆ ಪ್ರತ್ಯೇಕವಾಗಿ ಸಹಾಯಕ ನಿಬಂಧಕರು ಅಗತ್ಯವಿದ್ದಲ್ಲಿ ಸಹಕಾರ ಇಲಾಖೆ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮವಿಡಲಾಗುವುದು.

**ಪ್ರಶ್ನೆ 03** : **ಜಿಲ್ಲಾ ಸಂಯೋಜಕರನ್ನೇ ಮಾರಾಟಾಧಿಕಾರಿಯನ್ನಾಗಿ ಮಾಡಬಹುದಲ್ಲವೇ.**

**ಉತ್ತರ** : ಸಂಯುಕ್ತ ಸಹಕಾರಿಯ ಸೌಹಾರ್ದ ಅಧಿಕಾರಿಗಳ ವ್ಯಾಪ್ತಿಗೆ ಪ್ರಸ್ತುತ ಸರಾಸರಿ 150 ರಿಂದ 200 ಸೌಹಾರ್ದ ಸಹಕಾರಿಗಳು ಬರುತ್ತದೆ. ಸದರಿ ಸಹಕಾರಿಗಳಿಗೆ ಸಂಬಂಧಿಸಿದ ಶಾಸನಾತ್ಮಕ ಕಾರ್ಯನಿರ್ವಹಣೆ, ತರಬೇತಿಗಳನ್ನು ಆಯೋಜಿಸುವುದು, ಇತ್ಯಾದಿ ಕಾರ್ಯಗಳ ಹೆಚ್ಚಿನ ಒತ್ತಡ ಇರುತ್ತದೆ. ಹೀಗಾಗಿ ಮಾರಾಟಾಧಿಕಾರಿಯನ್ನಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸುವುದು ಕಷ್ಟಸಾಧ್ಯವಾಗುತ್ತದೆ. ಆದಗ್ಯೂ ತಮ್ಮ ಸಲಹೆಯನ್ನು ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.

ನಂತರ ಸಭೆಯಲ್ಲಿ ದಿ ಜುಮನಾಳ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ವಿಜಯಪುರ (ವಿಜೆಪಿ–0142) ಈ ಸೌಹಾರ್ದ ಸಹಕಾರಿಯ ಮಾನ್ಯ ಡೆಲಿಗೇಟ್‌ರವರು ಪೂರಕ ಪ್ರಶ್ನೆಯನ್ನು ಕೇಳಿದರು. ನಾನು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಲಾಗಿರುತ್ತದೆ. ಬೆಳಗಾವಿಯ 441 ನ್ಯಾಯಾಲಯಕ್ಕೆ ಇನ್ನೊಬ್ಬರು ಸಹಾಯಕ ನಿಬಂಧಕರನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದು, ಇದು ಸಂತೋಷದ ವಿಷಯ. ಅದರಂತೆ, ವಿಜಯಪುರ ಜಿಲ್ಲೆಯಲ್ಲಿಯೇ ತಿಂಗಳಲ್ಲಿ ಎರಡು ದಿನ ಪ್ರಕರಣಗಳ ಇತ್ಯರ್ಥ ಮಾಡಿದರೆ ತುಂಬಾ ಒಳ್ಳೆಯದು ಎಂದು ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಮನವಿ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಸಂಪರ್ಕ ಸಭೆಯ ಸಂದರ್ಭದಲ್ಲಿಯೂ ಸಹ ಈ ಪ್ರಶ್ನೆಯನ್ನು ತಾವು ಕೇಳಿರುತ್ತೀರಿ. ಹಾಗೆಯೇ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿಯೂ ಸಹ ಮಾನ್ಯ ನಿರ್ದೇಶಕರು ಈ ಕುರಿತು ಪ್ರಶ್ನೆಯನ್ನು ಕೇಳಿರುತ್ತಾರೆ. ಸಾಧ್ಯತೆಗಳನ್ನು ಹಾಗೂ ಇತಿಮಿತಿಗಳನ್ನು ನೋಡಿಕೊಂಡು ಸಂಚಾರಿ ನ್ಯಾಯ ಪೀಠ

ಸಾಧ್ಯವಾಗುತ್ತದೆಯೇ ಎಂದು ಪರಿಶೀಲಿಸಿ, ಅಲ್ಲಲ್ಲಿಯೇ ಬಂದು ಪ್ರಕರಣಗಳನ್ನು ಇತ್ಯರ್ಥಪಡಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

**<u>ಶ್ರೀ ಚನ್ನಬಸವೇಶ್ವರ ಸೌಹಾರ್ದ ಸಹಕಾರಿ ಮತ್ತು ವೀರರಾಣಿ ಚೆನ್ನಮ್ಮ ಸೌಹಾರ್ದ ಸಂಕೇಶ್ವರ</u>**

**ಪ್ರಶ್ನೆ 01** : **ಸುಮಾರು 36 ವರ್ಷ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹಿರಿಯ ನಾಗರೀಕರಿಗೆ ಕಾಶಿ, ರಾಮೇಶ್ವರ ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ಕರುಣಿಸಿದ ಮತ್ತು ಅಂಗವಿಕಲ ಮಕ್ಕಳಿಗೆ ಧನಸಹಾಯ ಮಾಡಿದ ಅಂಗವಿಕಲ ಮತ್ತು ವಯೋವೃದ್ದನಿಗೆ ಸತ್ಕರಿಸುವ ಸಲುವಾಗಿ ವಿನಂತಿ ಪತ್ರ. ಬೆಳಗಾವಿ ಜಿಲ್ಲೆಯ ಸಂಕೇಶ್ವರ ಪಟ್ಟದಲ್ಲಿರುವ ಸೌಹಾರ್ದ ಸಹಕಾರಿಯ ವತಿಯಿಂದ ತಮಗೆ ಪತ್ರ ಬರೆದು ವಿನಂತಿಸಿಕೊಳ್ಳವುದೇನೆಂದರೆ ಹುಕ್ಕೇರಿ ತಾಲ್ಲೂಕಿನ ಗೊಟುರ ಗ್ರಾಮದ ಶಂಕರ ಕಾಡಪ್ಪಾ ಕಬ್ಬೂರಿ ಇವರು ಸಮಾಜದ ಎಲೆಮರೆಯ ಕಾಯಿಯಂತೆ ಇರುವ ಅಪ್ರತಿಮ ಪ್ರಭತ್ವ ಮತ್ತು ಕ್ರೀಯಾಶಿಲತೆಯನ್ನು ಗುರುತಿಸಿ ನಮ್ಮ ಸಹಕಾರಿಯಿಂದ ಅವರನ್ನು ಸತ್ಕರಿಸಲು ಅವರಿಂದ ಸ್ವವಿವರ ಅರ್ಜಿ ತೆಗೆದುಕೊಂಡಿದ್ದೇವೆ. ಅವರ ಅರ್ಜಿಯನ್ನು ನಮ್ಮ ಸಹಕಾರಿಯು ಕೂಲಂಕುಶವಾಗಿ ಬಡತನದಿಂದ ಬಳಲುತ್ತಿರುವನ ಅಂಗವಿಕಲ ಮತ್ತು ವಯೋವೃದ್ದರಾದ ಅವರಿಗೆ ಇನ್ನು ಹೆಚ್ಚಿನ ಅನುಕೂಲವಾಗಲು ಮತ್ತು ನಮ್ಮ ರಾಜ್ಯದ ಎಲ್ಲಾ ಸಹಕಾರಿಯ ಶಾಖೆಗಳ ಪದಾಧಿಕಾರಿಗಳು ಮತ್ತು ನೌಕರ ವರ್ಗದವರು ರಿಯಾಯತಿ ದರದಲ್ಲಿ ಕಾಶೀ, ರಾಮೇಶ್ವರ, ಮುಂತಾದ ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ಸಿಗಲಿ ಅಂತಾ ನಿರ್ಧರಿಸಿ, ದಿನಾಂಕ 08.09.2026ರಂದು ನಡೆಯುವ ಸಹಕಾರಿಯ ವಾರ್ಷಿಕ ಸಭೆಯಲ್ಲಿ ಅವರನ್ನು ಸತ್ಕರಿಸಿದರೆ ರಾಜ್ಯದ ಹಳ್ಳಿಗಳಲ್ಲಿರುವ ಎಲ್ಲಾ ಸೌಹಾರ್ದ ಸಂಯುಕ್ತ ಸಹಕಾರಿ ಶಾಖೆಗಳಿಗೆ ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ಲಭಿಸಬಹುದಾ ಅಂತ ತಿಳಿದು ಸದರಿಯವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಬಗ್ಗೆ ಪುರಾವೆಗಳನ್ನ ಈ ಪತ್ರದ ಜೊತೆಗೆ ಕಳಹಿಸಿ ಕೊಟ್ಟಿರುತ್ತವೆ. ಬೆಳಗಾವಿ ಜಿಲ್ಲೆಯ ಕೆಲವೊಂದು ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ಮತ್ತು ನೌಕರ ವರ್ಗದವರು ಅವರೊಂದಿಗೆ ಪುಣ್ಯಕ್ಷೇತ್ರಗಳ ತೀರ್ಥಯಾತ್ರೆ ಮಾಡಿಕೊಂಡ ಉದಾಹರಣೆ ಇರುತ್ತದೆ. (ಶ್ರೀ ಚನ್ನಬಸವೇಶ್ವರ ಸೌಹಾರ್ದ ಸಹಕಾರಿ ಮತ್ತು ಶ್ರೀ ವೀರರಾಣಿ ಚೆನ್ನಮ್ಮ ಸಹಕಾರಿ ಸೌಹಾರ್ದ, ಸಂಕೇಶ್ವರ) ಆದ ಕಾರಣ ಮೇಲಿನವರಾದ ನಾವು ಕಳುಹಿಸಿದ ಪತ್ರವನ್ನು ಕೂಲಂಕುಶವಾಗಿ ಪರಿಶೀಲಿಸಿ ಅವರು ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿದ ಅಸಾಧಾರಣ ಸೇವೆಯನ್ನು ಪರಿಗಣಿಸಿ ಅಂಗವಿಕಲ ಮತ್ತು ವಯೋವೃದ್ದರೂ ಆದ ಅವರನ್ನ ಸತ್ಕರಿಸಬೇಕೆಂದು ವಿನಂತಿ ಪೂರ್ವಕವಾಗಿ ನಮ್ಮ ಸಹಕಾರಿ ವತಿಯಿಂದ ಕೇಳಿಕೊಳ್ಳುತ್ತೇವೆ.**

**ಒಂದು ವೇಳೆ ನಮ್ಮ ಪತ್ರಕ್ಕೆ ಮನ್ನಣೆ ಕೊಟ್ಟು ಸದರಿಯವರನ್ನು ಸತ್ಕರಿಸಿದಾದಲ್ಲಿ ಪತ್ರದೊಂದಿಗೆ ನಾವು ಕಳಿಸಿದ ಅವರ ಸ್ವವಿವರದಲ್ಲಿರುವ ವಿಳಾಸಕ್ಕೆ ನೇರವಾಗಿ ತಿಳಿಸಿದರೆ ಅವರು ಅತೀವ ಅನಂದದಿಂದ ಸಭೆಗೆ ಬಂದು ಸತ್ಕಾರ ಸ್ವೀಕರಿಸುತ್ತಾರೆ.**

**ಉತ್ತರ** : ಸಮಾಜದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ಹಿರಿಯ ನಾಗರೀಕರನ್ನು ಗುರುತಿಸಿ ಗೌರವಿಸುವುದು ಹಾಗೂ ಅವರ ಸೇವೆಯನ್ನು ಸ್ಮರಿಸುವುದು ತಮ್ಮ ಸಹಕಾರಿಯ ಕಾರ್ಯವು ಶ್ಲಾಘನೀಯವಾಗಿದೆ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ, ವ್ಯಕ್ತಿಗಳಿಗೆ/ ಸಹಕಾರಿ ಸಂಸ್ಥೆಗಳಿಗೆ ಗುರುತಿಸಿ, ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮತ್ತು ಸಹಕಾರ ಸಪ್ತಾಹದಲ್ಲಿ ಸನ್ಮಾನಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ತಮ್ಮ ಮನವಿಯನ್ನು ಪರಿಗಣಿಸಲಾಗುವುದು.

**<u>ಯು.ಕೆ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ, ಉತ್ತರ ಕನ್ನಡ. (ಕೆಡಬ್ಲ್ಯೂಆರ್-0058)</u>**

**ಪ್ರಶ್ನೆ 01** : **ಸೌಹಾರ್ದ ಸಹಕಾರಿ ಕೋರ್ಟ್‌ನ ಕೆಲಸವನ್ನು ಕೋ-ಆಪರೇಟಿವ್ ಸಹಕಾರ ಸಂಘಗಳ ಕಾಯ್ದೆ, ಕಲಂ 1959 ಮತ್ತು ನಿಯಮ 1960ರ ಅನ್ವಯ ವಸೂಲಾತಿ ಕೆಲಸವನ್ನು ಸಹಕಾರ ಸಂಘಗಳ ನಿಬಂಧಕರು ಅಥವಾ ಅವರಿಂದ ಅಧಿಕಾರಲ್ಪಟ್ಟ ಕೆಳಗಿನ ಅಧಿಕಾರಿಗಳು ಹಾಗೂ ಗೌರವ ಮಧ್ಯಸ್ಥಗಾರರಿಗೆ ವಹಿಸಿಕೊಟ್ಟಲ್ಲಿ ವಸೂಲಾತಿ ಪ್ರಕ್ರಿಯೆ ಶೀಘ್ರವಾಗಿ ಆಗಬಹುದು ಎಂಬುದು ನಮ್ಮ ಅಭಿಪ್ರಾಯವಾಗಿದೆ.**

**ಉತ್ತರ** : ತಮ್ಮ ಸಲಹೆಯಂತೆ ಸಹಕಾರ ಇಲಾಖೆಯೊಂದಿಗೆ ಚರ್ಚಿಸಿ, ಸೂಕ್ತ ಕ್ರಮವಿಡಲಾಗುವುದು.

**ಪ್ರಶ್ನೆ 02** : **ಈಗಾಗಲೇ ಸೌಹಾರ್ದ ನ್ಯಾಯಾಲಯ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ನ್ಯಾಯಾಲಯಗಳಲ್ಲಿ ವಿಭಾಗೀಯ ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳು ವಿಲೇ ಆಗಲು ವಿಳಂಬವಾಗುತ್ತಿದ್ದು, ಇದನ್ನು ಜಿಲ್ಲಾ ಮಟ್ಟದಲ್ಲಿ ನ್ಯಾಯಾಲಯ ರೂಪಿಸಿದ್ದಲ್ಲಿ ಇಲ್ಲವೇ ಹೆಚ್ಚುವರಿ ನ್ಯಾಯಧೀಶರನ್ನು ನೇಮಕ ಮಾಡಿಕೊಂಡಲ್ಲಿ ವ್ಯಾಜ್ಯ ವಿಲೇ ಶೀಘ್ರವಾಗಿ ಆಗುವುದೆಂದು ನಮ್ಮ ಅಭಿಪ್ರಾಯವಾಗಿದೆ.**

**ಉತ್ತರ** : ಪ್ರಸ್ತುತ ದಾಖಲಾಗುತ್ತಿರುವ ದಾವಾ ಪ್ರಕರಣಗಳ ಸಂಖ್ಯೆಗಳಿಗೆ ಅನುಗುಣವಾಗಿ ಬೆಂಗಳೂರು ಮತ್ತು ಬೆಳಗಾವಿ ಪೀಠಗಳಲ್ಲಿ ಮಾತ್ರ ಕಾರ್ಯನಿರ್ವಹಿಸಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾದ ಸಂದರ್ಭದಲ್ಲಿ ಸಹಕಾರ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮವಿಡಲಾಗುವುದು.

**ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು. (ಬಿಜಿಯು–0228)**

**ಪ್ರಶ್ನೆ 01 : ಸೌಹಾರ್ದ ನ್ಯಾಯಾಲಯದಲ್ಲಿ ಸಹಕಾರಿಗಳು ಸುಸ್ತಿ ಸಾಲಗಾರ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸುವಾಗ ನಿಗದಿತ ಶುಲ್ಕವನ್ನು ಪಾವತಿಸುತ್ತೆ. ಅವಾರ್ಡ್ ಆದ ನಂತರ ಅಂತಿಮ ಹರಾಜು ಪ್ರಕಟಣೆ ಹೊರಡಿಸುವಾಗಲೂ ಸಹ ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ. ನಂತರ ದಾಖಲೆ ಪರಿಶೀಲನೆಗಾಗಿ ಪಡೆದ ಸುಸ್ತಿದಾರ ಸದಸ್ಯನ ಮೂಲ ಪತ್ರಗಳನ್ನು ಹಿಂದಕ್ಕೆ ಪಡೆಯುವಾಗಲೂ ಶುಲ್ಕವನ್ನು ಪಾವತಿಸಬೇಕಾಗಿದೆ.**

**ಆದರೆ ಸಿವಿಲ್ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸುವಾಗ ಒಮ್ಮೆ ಮಾತ್ರ ಶುಲ್ಕ ಪಾವತಿಸಬೇಕಾಗಿದ್ದು, ಪ್ರಕರಣ ಡಿಕ್ರಿ ಆಗುವವರೆಗೂ ಯಾವುದೇ ಶುಲ್ಕ ಪಾವತಿಸಬೇಕಾಗಿರುವುದಿಲ್ಲ.**

**ಆದ್ದರಿಂದ ಸಿವಿಲ್ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವಂತೆ ಸೌಹಾರ್ದ ನ್ಯಾಯಾಲಯದಲ್ಲಿಯೂ ಸಹ ಇದೇ ಕ್ರಮವನ್ನು ಅನುಸರಿಸುವಂತೆ ಕೋರಿದೆ.**

ಉತ್ತರ : ಈ ಕುರಿತು ಸಂಯುಕ್ತ ಸಹಕಾರಿಯು ನಿಬಂಧಕರೊಂದಿಗೆ ಸಮಾಲೋಚಿಸಿ, ಅಗತ್ಯ ಕ್ರಮವಹಿಸಲಾಗುವುದು.

**ಪ್ರಶ್ನೆ 02 : ಸೌಹಾರ್ದ ನ್ಯಾಯಾಲಯದಲ್ಲಿ ಪೀಠಾಧಿಕಾರಿಗಳನ್ನು ಆಯ್ಕೆ ಮಾಡುವ ಬಗ್ಗೆ ಸೌಹಾರ್ದ ನ್ಯಾಯಾಲಯಕ್ಕೆ ಪೀಠಾಧಿಪತಿಗಳಾಗಿ ಬರುವ ಸಹಕಾರ ಇಲಾಖೆಯ ಅಧಿಕಾರಿಗಳು ನಿರಂತರವಾಗಿ ಆಗಿಂದ್ದಾಗ್ಗೆ ವರ್ಗಾವಣೆಗೊಳ್ಳುತ್ತಿದ್ದು ಇದರಿಂದ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು ಹೆಚ್ಚುತ್ತಿವೆ. ಕೆಲವು ಪ್ರಕರಣಗಳಲ್ಲಿ ವರ್ಷಾನುಗಟ್ಟಲೇ ತಡವಾಗುತ್ತಿದ್ದು, ಸಹಕಾರಿಗಳ ಅನುತ್ಪಾದಕ ಆಸ್ತಿ ಮಾತ್ರ ಹೆಚ್ಚಾಗುತ್ತಿದೆ. ಉದಾಹರಣೆಗೆ ನಮ್ಮ ಸಹಕಾರಿಯ ಒಬ್ಬ ಸುಸ್ತಿದಾರನ 2 ಖಾತೆಗೆ ಸಂಬಂಧಿಸಿದಂತೆ ಅವರ ವಿರುದ್ಧ 2024–25ನೇ ಸಾಲಿನಲ್ಲಿ ಅಂದರೆ 1 ವರ್ಷ 5 ತಿಂಗಳ ಹಿಂದೆ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದ ಮೊತ್ತ 1 ಕೋಟಿ 95 ಲಕ್ಷ ರೂ.ಗಳು ಇದ್ದು ಈ ಪ್ರಕರಣ ಇನ್ನೂ ವಾದಿಸಾಕ್ಷ್ಯ ಹಂತದಲ್ಲಿಯೇ ಬಾಕಿ ಇದೆ. ಇದನ್ನು ತಪ್ಪಿಸಲು ನಗರೇಶ್ವರ ಸೌಹಾರ್ದ ಸಹಕಾರಿಯ ಸಲಹೆ:**

ಉತ್ತರ : ಸದರಿ ವಿಷಯದ ಕುರಿತು ಮಾನ್ಯ ಸಹಕಾರ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತವಾಗಿ ಕ್ರಮವಿಡಲಾಗುವುದು.

ನಂತರ ಸಭೆಯಲ್ಲಿ ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು (ಬಿಜಿಯು–0228) ಈ ಸೌಹಾರ್ದ ಸಹಕಾರಿಯ ಮಾನ್ಯ ಡೆಲಿಗೇಟ್‌ರವರು ಪೂರಕ ಪ್ರಶ್ನೆಯನ್ನು ಕೇಳಿದರು. ಸೌಹಾರ್ದ ಸಹಕಾರಿಗಳ 441 ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಲಿಖಿತವಾಗಿ ಪ್ರಶ್ನೆಗಳನ್ನು ಕೇಳಿರುತ್ತೇನೆ. ಸೌಹಾರ್ದ ಸಹಕಾರಿಗಳ 441 ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯಕ್ಕಿಂತ 3 ಬಾರಿ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ದಾವೆ ದಾಖಲಿಸುವಾಗ, ಅವಾರ್ಡ್ ಮಾಡುವಾಗ, ಮೂಲ ಪ್ರತಿಗಳನ್ನು ಹಿಂಪಡೆದುಕೊಳ್ಳುವ ಸಂದರ್ಭದಲ್ಲಿ ಈ ರೀತಿ ಮೂರು ಬಾರಿ ಶುಲ್ಕವನ್ನು ಪಾವತಿಸಲಾಗುತ್ತಿದೆ. ಇದು ಅತ್ಯಧಿಕವಾಗುತ್ತಿದೆ. ಇದನ್ನು ಪರಿಶೀಲಿಸಬೇಕು. ಈಗಾಗಲೇ ಸಂಯುಕ್ತ ಸಹಕಾರಿಗೆ ನ್ಯಾಯಾಲಯ ವಿಭಾಗದ ಶುಲ್ಕದಿಂದ ರೂ.3 ಕೋಟಿ 70 ಲಕ್ಷಗಳ ಲಾಭ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯ ಶುಲ್ಕವನ್ನು ಕಡಿಮೆ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಕಾನೂನು ಪ್ರಕಾರ ನ್ಯಾಯಾಲಯದ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ಇದನ್ನು ಕಡಿಮೆ ಮಾಡಬೇಕೆಂದಲ್ಲಿ ತಿದ್ದುಪಡಿಯಾಗಬೇಕು. ಈ ಕುರಿತು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಸೌಹಾರ್ದ ಸಹಕಾರಿಗಳ ನ್ಯಾಯಾಲಯಗಳಲ್ಲಿ ತುಂಬಾ ವಿಳಂಬವಾಗಿ ಪ್ರಕರಣಗಳ ವಿಚಾರಣೆ ಆಗುತ್ತಿದೆ. 1.5 ವರ್ಷಗಳು, 2 ವರ್ಷಗಳಾದರೂ ಸಹ ಪ್ರಕರಣಗಳು ಇತ್ಯರ್ಥವಾಗುತ್ತಿರುವುದಿಲ್ಲ. ಈ ಕುರಿತು ಸಲಹೆಯನ್ನು ಸಹ ನೀಡಲಾಗಿದೆ. ನ್ಯಾಯಾಲಯ ವಿಭಾಗಕ್ಕೆ ನಿವೃತ್ತ ಅಧಿಕಾರಿಗಳನ್ನು ತೆಗೆದುಕೊಳ್ಳಬಹುದು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು 441 ನ್ಯಾಯಾಲಯಕ್ಕೆ ಸಹಕಾರ ಇಲಾಖೆಯ ಅಧಿಕಾರಿಗಳನ್ನೇ ನೇಮಕ ಮಾಡಿಕೊಳ್ಳಬೇಕು. ಇದು ಸಂಯುಕ್ತ ಸಹಕಾರಿಯ ವ್ಯಾಪ್ತಿಯಲ್ಲಿ ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಡೆಲಿಗೇಟ್‌ರವರು ಮಾತನಾಡಿ ಈ ಕುರಿತು ಮಾನ್ಯ ಸಹಕಾರ ಸಚಿವರನ್ನು ಭೇಟಿ ಮಾಡಿ ಆದೇಶ ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಿವೃತ್ತ ಅಧಿಕಾರಿಗಳನ್ನು 5 ವರ್ಷಗಳಿಗೆ ತೆಗೆದುಕೊಳ್ಳುವ ಹಾಗೇ ಆದೇಶ ಹೊರಡಿಸಿದರೆ ಅನುಕೂಲವಾಗುತ್ತದೆ. ಪ್ರಕರಣಗಳ ಇತ್ಯರ್ಥವು ವಿಳಂಬವಾಗುವುದರಿಂದ ಕ್ರೋಢೀಕೃತ ಎನ್‌ಪಿಎ ಹೆಚ್ಚಾಗುತ್ತದೆ. ಇದರಿಂದ ಸೌಹಾರ್ದ ಸಹಕಾರಿಯ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಹಾಗೂ ಎಷ್ಟು ಮೊತ್ತ ಬಾಕಿ ಇದೆ ಎಂದು ಉಲ್ಲೇಖವಾಗುತ್ತದೆ. 'ಎ' ವರ್ಗದ ಲೆಕ್ಕಪರಿಶೋಧನೆಗೆ ಅರ್ಹತೆಯನ್ನು ಹೊಂದಿದ್ದರೂ ಸಹ ಎನ್‌ಪಿಎ ಮೊತ್ತ ಹೆಚ್ಚಾಗಿದೆ ಎಂಬ ಕಾರಣಕ್ಕೆ 'ಎ' ವರ್ಗದಿಂದ 'ಬಿ', 'ಸಿ' ವರ್ಗಗಳಿಗೆ ಸೌಹಾರ್ದ ಸಹಕಾರಿಯು ಹೋದಲ್ಲಿ ಈ ಕುರಿತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗುತ್ತದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳ 441 ನ್ಯಾಯಾಲಯದಲ್ಲಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಬೇಕು ಎಂದು ತಿಳಿಸಿದರು. ಇದಕ್ಕೆ

ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಸೌಹಾರ್ದ ಸಹಕಾರಿಗಳ 441 ನ್ಯಾಯಾಲಯದ ಕುರಿತು ಸಾಕಷ್ಟು ಪ್ರಯತ್ನ ಆಗಿದೆ. ಕೆಲವೊಂದು ಬಾರಿ ನೇಮಕವಾಗುವ ಅಧಿಕಾರಿಗಳು ಶೀಘ್ರವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಿರುತ್ತಾರೆ. ಇನ್ನೂ ಕೆಲವೊಂದು ಬಾರಿ ಬೇರೆ ಅಧಿಕಾರಿಗಳು ನೇಮಕವಾದಾಗ ವಿಳಂಬವಾಗಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿರುತ್ತಾರೆ. ಪ್ರಸ್ತುತ ಇರುವ ಅಧಿಕಾರಿಯವರು ವರ್ಗಾವಣೆಯಾಗಿದ್ದು, ಆ ಸ್ಥಾನಕ್ಕೆ ನೇಮಕವಾಗಿರುವ ಅಧಿಕಾರಿಯು ಇನ್ನೂ ಸಹ ಅಧಿಕಾರ ಸ್ವೀಕಾರ ಮಾಡಿಕೊಂಡಿರುವುದಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳೂ ಸಹ ಇವೆ. ಅಲ್ಲದೇ, ಪ್ರತಿವಾದಿಯವರು ಸಹ ವಕೀಲರನ್ನು ನೇಮಕ ಮಾಡಿಕೊಂಡು ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಕಾರಣಗಳಿವೆ. ಆದಷ್ಟು ಶೀಘ್ರವಾಗಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

**ಕೊಡವ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೊಡಗು. (ಎಂಡಿಕೆ–0010)**

**ಪ್ರಶ್ನೆ 01** : **ನಮ್ಮ ಮಾತೃ ಸಂಸ್ಥೆಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಎಂಬುದಾಗಿ ಇದ್ದು ಇದನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಬ್ಯಾಂಕ್ ಎಂಬುದಾಗಿ RBI ನಿಂದ ಪರವಾನಗಿಯನ್ನು ಪಡೆದುಕೊಳ್ಳವುದರೊಂದಿಗೆ ಇದೊಂದು ಬೇರೆ ವಿಧದ ರಾಜ್ಯ ಸೌಹಾರ್ದ ಬ್ಯಾಂಕಾಗಿ ವ್ಯವರಿಸಲು ಸಾಧ್ಯವಾಗುತ್ತದೆ. ಏಕೆಂದರೆ ಇಲಾಖೆಯ ಸುತ್ತೋಲೆಯಂತೆ ಕೆಳಹಂತದ ಸೌಹಾರ್ದ ಸಂಸ್ಥೆಗಳು ತಮ್ಮಲ್ಲಿರುವ ಕ್ಷೇಮನಿಧಿಯನ್ನು ಡಿಸಿಸಿ ಬ್ಯಾಂಕಿನಲ್ಲಿ ಅಥವಾ ಅಪೆಕ್ಸ್ ಬ್ಯಾಂಕಿನಲ್ಲಿ ಹೂಡುವಂತೆ ತಾಕೀತು ಮಾಡಲಾಗಿದ್ದು, ಈಗಾಗಲೇ ಈ ಬ್ಯಾಂಕಿನಲ್ಲಿ ಕ್ಷೇಮ ನಿಧಿಯನ್ನು ಹೂಡಲಾಗಿರುತ್ತದೆ.**

**ಆದ್ದರಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಬ್ಯಾಂಕ್ ಆದಲ್ಲಿ ನಮ್ಮ ಠೇವಣಾತಿಯನ್ನು ತಮ್ಮ ಮಾತೃ ಸಂಸ್ಥೆಯಲ್ಲಿ ಹೂಡಲು ಅನುಕೂಲವಾಗುತ್ತದೆ, ಅಲ್ಲದೇ ಯಾವುದೇ ಸಮಯದಲ್ಲಿ ವಾಪಾಸ್ ಪಡೆಯಲು ಸುಲಭ ಆಗುತ್ತದೆ. ಹಾಗೆಯೇ ಅವಶ್ಯಕತೆ ಇರುವ ಸೌಹಾರ್ದ ಸಂಸ್ಥೆಗಳು ತಮ್ಮ ಮಾತೃ ಸಂಸ್ಥೆಯಿಂದಲೇ ಸಾಲ ಹೊಂದಿಕೊಳ್ಳಬಹುದಾಗಿದೆ. ಇದು ಬಹಳಷ್ಟು ಪ್ರಯೋಜನಕಾರಿ ಅಂಶವಾಗಿರುತ್ತದೆ.**

**ನಮ್ಮ ಸದಸ್ಯತ್ವ ಸಂಖ್ಯೆ ಎಂಡಿಕೆ 0010 ಎಂದು ನಮೂದಿಸಲಾಗಿದೆ, ಎಂಡಿಕೆಯ ಸಂಪೂರ್ಣ ವಿವರಣೆ (Full form) ನಮಗೆ ಗೊತ್ತಿಲ್ಲ, ಆದರೂ ಮಡಿಕೇರಿ ಡಿಸ್ಟ್ರಿಕ್ಟ್ ಕೊಡಗು ಎಂದು ಭಾವಿಸಲಾಗಿದೆ. ಆದರೆ ಇದು ತಪ್ಪಾಗಿರುತ್ತದೆ ಇದು ನೈಜವಾಗಿ ಕೊಡಗು ಡಿಸ್ಟ್ರಿಕ್ಟ್ ಮಡಿಕೇರಿ ಎಂದು ಆಗಬೇಕು. ನಮ್ಮ ಸೌಹಾರ್ದ ಇರುವುದು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ. ಆದ್ದರಿಂದ ಎಂಡಿಕೆ ಬದಲಾಗಿ "ಕೆಡಿಎಂ–0010" ಎಂದು ಸದಸ್ಯತ್ವ ಸಂಖ್ಯೆಯನ್ನು ಬದಲಾಯಿಸಬೇಕಾಗಿ ಕೋರುತ್ತೇವೆ. ಮಡಿಕೇರಿ ಇದು ಒಂದು ತಾಲ್ಲೂಕು ಹಾಗೂ ಕೊಡಗು ಜಿಲ್ಲೆಯ ರಾಜಧಾನಿ, ಕೊಡಗು ಜಿಲ್ಲೆಯಲ್ಲಿ ಐದು ತಾಲ್ಲೂಕುಗಳು ಒಳಗೊಂಡಿರುತ್ತದೆ. ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ, ಪೊನ್ನಂಪೇಟೆ ಹಾಗೂ ಕುಶಾಲನಗರ. ಆದ್ದರಿಂದ ಜಿಲ್ಲೆ ಕೊಡಗು ಆಗಬೇಕಾಗಿದ್ದು, ಮಡಿಕೇರಿ ಜಿಲ್ಲೆ ಎಂದು ಕರೆಯಲ್ಪಡುವುದಿಲ್ಲ. ಇದನ್ನು ತಾವುಗಳು ಸರಿಪಡಿಸಬೇಕಾಗಿ ಕೋರುತ್ತೇವೆ.**

**ಕೊಡಗು ಜಿಲ್ಲೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಈ ಸಂಸ್ಥೆಯಲ್ಲಿ ಒಂದು ನಿರ್ದೇಶಕ ಸ್ಥಾನವನ್ನು ನೀಡಬೇಕಾಗಿ ಕೋರಿಕೆ. ಕೊಡಗು ಜಿಲ್ಲೆಯು ಭೌಗೋಳಿಕವಾಗಿ ಮಲೆನಾಡು ಗುಡ್ಡಗಾಡು ಪ್ರದೇಶ ಆಗಿರುತ್ತದೆ. ಇದು ಕರ್ನಾಟಕ ರಾಜ್ಯದ ಅತೀ ಸಣ್ಣ ಜಿಲ್ಲೆಯಾಗಿದ್ದು, ಇಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಕಡಿಮೆ ಇರಬಹುದು, ಆದರೆ ಸಹಕಾರಿಯ ಆರ್ಥಿಕ ಹಾಗೂ ಎಲ್ಲಾ ಬೆಳವಣಿಗೆಯು ರಾಜ್ಯದಲ್ಲಿ ಉತ್ತಮವಾಗಿರುತ್ತದೆ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಯ ಒಂದು ನಿರ್ದೇಶಕ ಸ್ಥಾನವನ್ನು ಈ ಜಿಲ್ಲೆಗೆ ಕಾಯ್ದಿರಿಸಬೇಕಾಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಪ್ರಯುಕ್ತವಾಗಿ ಒಕ್ಕೊರಿಲಿನಿಂದ ಕೋರುತ್ತೇವೆ.**

**ಸಂಯುಕ್ತ ಸಹಕಾರಿಯ ಒಂದು ಕಛೇರಿಯನ್ನು ಈ ಜಿಲ್ಲೆಯಲ್ಲಿ ತೆರೆಯಬೇಕಾಗಿಯೂ ಇದರಿಂದ ಇಲ್ಲಿ ಸೌಹಾರ್ದ ಸಹಕಾರಿ ಸಂಘಗಳು ಮತ್ತಷ್ಟು ಬೆಳೆಯಲು ಅನುಕೂಲವಾಗುತ್ತದೆ. ಆಗಿಂದ್ದಾಗೆ ನಮ್ಮ ಕುಂದು ಕೊರತೆಗಳನ್ನು ನಿವಾರಿಸಿ ಮುಂದುವರೆಯಲು ಹಾಗೂ ತಮ್ಮ ಸಲಹೆ ಸೂಚನೆಗಳನ್ನು ತ್ವರಿತ ಗತಿಯಿಂದ ತಮ್ಮ ಸಿಬ್ಬಂದಿಯ ಸಹಕಾರದಿಂದ ಪಾಲಿಸಲು ಅನುಕೂಲವಾಗುತ್ತದೆ. ಆದ್ದರಿಂದ ಸಂಯುಕ್ತ ಸಹಕಾರಿಯ ಒಂದು ಕಛೇರಿಯನ್ನು ಕೊಡಗು ಜಿಲ್ಲೆಯಲ್ಲಿ ತೆರೆಯುವುದು ಸೂಕ್ತ ಎಂದು ಭಾವಿಸುತ್ತದೆ.**

**ಉತ್ತರ** : ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರಡಿ ರಚಿತವಾದಂತ ಸಹಕಾರ ಶಾಸನಬದ್ಧ ಸಹಕಾರ ಸಂಸ್ಥೆಯಾಗಿದೆ. ಸೌಹಾರ್ದ ಸಹಕಾರಿ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅಧಿಕಾರ ಮತ್ತು ಕರ್ತವ್ಯಗಳ ಕುರಿತು ಉಲ್ಲೇಖಿಸಿದೆ. ಹೀಗಾಗಿ ಬ್ಯಾಂಕಿಂಗ್ ಪರವಾನಿಗೆ ಪಡೆಯಲು ಅವಕಾಶವಿರುವುದಿಲ್ಲ.

ತಮ್ಮ ಸಲಹೆಯು ಉತ್ತವಾಗಿದೆ. ಮುಂದಿನ ದಿನಗಳಲ್ಲಿ ಸೂಕ್ತವಾಗಿ ಚರ್ಚಿಸಿ, ತೀರ್ಮಾನಿಸಲಾಗುವುದು.

ಪ್ರಸ್ತುತ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರ ಸಂಖ್ಯೆ ಕಾಯ್ದೆ ಅನುಸಾರ 21 ಗರಿಷ್ಠ ಇರುತ್ತದೆ. ಆಡಳಿತ ಮಂಡಲಿ ನಿರ್ದೇಶಕರ ಸಂಖ್ಯೆಗೆ ಸಂಬಂಧಿಸಿದಂತೆ 2025ರಲ್ಲಿ ತಿದ್ದುಪಡಿಯಾಗಿದ್ದು,

ಪ್ರಕರಣ ನ್ಯಾಯಾಲಯದಲ್ಲಿ ಇರುತ್ತದೆ. ತೀರ್ಪಿಗೆ ಅನುಗುಣವಾಗಿ ಆಡಳಿತ ಮಂಡಲಿಯಲ್ಲಿ ಸದರಿ ವಿಷಯದ ಕುರಿತು ಚರ್ಚಿಸಲಾಗುವುದು.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಈಗಾಗಲೇ 100ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಲು ನಿರ್ಣಯಿಸಿದೆ. ಆದಾಗ್ಯೂ, ಕಡಿಮೆ ಸಂಖ್ಯೆಯ ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಲ್ಲಿ ಕಛೇರಿಗಳನ್ನು ಪ್ರಾರಂಭಿಸಿದಲ್ಲಿ, ಸದರಿ ಕಛೇರಿಗಳಿಗೆ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಬೇಕಾಗುತ್ತದೆ. ಅಂತಹ ಕಛೇರಿಗಳಲ್ಲಿ ನಿರೀಕ್ಷಿತ ಪ್ರಮಾಣದ ಕಾರ್ಯಭಾರ ಇಲ್ಲದಿರುವುದರಿಂದ, ಸಿಬ್ಬಂದಿಯ ಮಾನವ ಸಂಪನ್ಮೂಲದ ಸಮರ್ಪಕ ಬಳಕೆಯಾಗದಿರುವ ಸಾಧ್ಯತೆ ಇದೆ. ಆದಗ್ಯೂ ತಮ್ಮ ಸಲಹೆಯನ್ನು ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.

ಆದ್ದರಿಂದ, ತಮ್ಮ ಸಲಹೆಯನ್ನು ಆಡಳಿತ ಮಂಡಲಿಯ ಸಭೆಯಲ್ಲಿ ಸೂಕ್ತವಾಗಿ ಚರ್ಚಿಸಿ, ಅಗತ್ಯವಿರುವ ನಿರ್ಧಾರವನ್ನು ಕೈಗೊಳ್ಳಲಾಗುವುದು.

**ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., ಶಿವಮೊಗ್ಗ. (ಎಸ್‌ಎಂಜಿ–0011)**

**ಪ್ರಶ್ನೆ 01 : ಪು.ಸ–ನಂ–34– ಸೌಹಾರ್ದ ದಾವಾ ಪಂಚಾಯಿತಿಯಲ್ಲಿ 9834 ಪ್ರಕರಣಗಳು ಬಾಕಿ ಇದ್ದು ಇರುವುದಾಗಿ ತಿಳಿಸಿದ್ದೀರಿ. ತ್ವರಿತ ವಿಲೇವಾರಿ ಬೇಗ ಮಾಡಿಸಲು ಕ್ರಮ ಕೈಗೊಳ್ಳುವುದು.**

ಉತ್ತರ : ಸದರಿ ವಿಷಯವು ಅಮಲ್ಜಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ. ಈ ಕುರಿತು ಮಾನ್ಯ ವಸೂಲಾತಿ ಅಧಿಕಾರಿಗಳು 9,834 ಪ್ರಕರಣಗಳಿಗೆ ಸಂಬಂಧಿಸಿದಂತೆ ಸಹಕಾರಿಗಳ ಮಾರಾಟಾಧಿಕಾರಿಗಳಿಗೆ ನೇಮಕ ಪತ್ರವನ್ನು ನೀಡಿ ಕಾಲ–ಕಾಲಕ್ಕೆ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ. ತ್ವರಿತ ವಿಲೇವಾರಿ ಮಾಡುವುದು ಆಯಾ ಸಹಕಾರಿಗಳ ಮಾರಾಟಾಧಿಕಾರಿಗಳ ಕರ್ತವ್ಯವಾಗಿರುತ್ತದೆ.

**ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ ನಿ., ಕುಮಟಾ ಉತ್ತರ ಕನ್ನಡ. (ಕೆಡಬ್ಲ್ಯುಆರ್–0016)**

**ಪ್ರಶ್ನೆ 01 : ವಿಷಯಪಟ್ಟಿಯಲ್ಲಿ ಸೂಚಿಸಿದ ಇನ್ನಿತರ ವಿಷಯಗಳ ಬಗ್ಗೆ.**

ಉತ್ತರ : ಮೇಲ್ಕಂಡ ಪ್ರಶ್ನೆಗಳಿಗೆ ಸಂಬಂಧಿಸಿದ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ವಿಷಯಗಳನ್ನು ಮಂಡಿಸಿದೆ.

**ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು. (ಆರ್‌ಸಿಆರ್–0095)**

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 24 ಮಂಡಲಿಯ ರಚನೆ.**

**ಪ್ರಶ್ನೆ 01 : ವೃತ್ತಿಪರ ನಿರ್ದೇಶಕರನ್ನ ಆಡಳಿತ ಮಂಡಳಿಯು ಸಹಮತದಿಂದ (ಕೋಆಪ್ಟ್) ನಾಮ ನಿರ್ದೇಶನ ಮಾಡುವುದು ಕಡ್ಡಾಯವೇ?**

ಉತ್ತರ : ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಪ್ರತಿಯೊಂದು ಸಹಕಾರಿಯು ಸಹಮತದ ಮೂಲಕ ವೃತ್ತಿಪರ ನಿರ್ದೇಶಕರನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ 24(1)ರಲ್ಲಿ ನೇಮಕ ಮಾಡಿಕೊಳ್ಳುವುದು ಕಡ್ಡಾಯವಿರುತ್ತದೆ.

**ಪ್ರಶ್ನೆ 02 : ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಷ್ಟು ಸೌಹಾರ್ದ ಸಹಕಾರಿಗಳಲ್ಲಿ ಈ ರೀತಿಯ ನೇಮಕಾತಿಗಳನ್ನು ಮಾಡಲಾಗಿದೆ.**

ಉತ್ತರ : ಸಹಕಾರಿಗಳಿಗೆ ತರಬೇತಿಗಳಲ್ಲಿ ಹಾಗೂ ಸಭೆಗಳಲ್ಲಿ ಸದರಿ ವಿಷಯದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

**ಪ್ರಶ್ನೆ 03 : ನಾಮ ನಿರ್ದೇಶನ ಮಾಡಿಕೊಳ್ಳದಿದ್ದರೆ ಯಾವ ರೀತಿಯ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗಿದೆ.**

ಉತ್ತರ : ಕಾಯ್ದೆಯನ್ನು ಪಾಲನೆ ಮಾಡದಿದ್ದಲ್ಲಿ, ಕಾಯ್ದೆಯಲ್ಲಿನ ಪ್ರಾವಧಾನದಂತೆ ಕ್ರಮವಿಡಲಾಗುವುದು.

ನಂತರ ಸಭೆಯಲ್ಲಿ ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು (ಆರ್‌ಸಿಆರ್–0095) ಈ ಸೌಹಾರ್ದ ಸಹಕಾರಿಯ ಮಾನ್ಯ ಡೆಲಿಗೇಟ್‌ರವರು ಪೂರಕ ಪ್ರಶ್ನೆಗಳನ್ನು ಕೇಳಿದರು. ಸೌಹಾರ್ದ ಸಹಕಾರಿಗಳಲ್ಲಿ ವೃತ್ತಿಪರ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಕಾಯ್ದೆಯಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಈ ಕುರಿತು ಕೇಳಿರುವ ಪ್ರಶ್ನೆಗೆ ಈಗಾಗಲೇ ಲಿಖಿತವಾಗಿ ಉತ್ತರವನ್ನು ನೀಡಲಾಗಿರುತ್ತದೆ. ಬಹಳಷ್ಟು ಸೌಹಾರ್ದ ಸಹಕಾರಿಗಳಲ್ಲಿ ವೃತ್ತಿಪರ ನಿರ್ದೇಶಕರು ಇಲ್ಲದೇ ಇರುವುದರಿಂದ ಬಹಳ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಹಾಗೆಯೇ, ವೃತ್ತಿಪರ ನಿರ್ದೇಶಕರು ಇಲ್ಲದೇ ಇರುವುದರಿಂದ ಅನೇಕ ಸಂಸ್ಥೆಗಳು ಮುಚ್ಚಲು ಒಂದು ಕಾರಣ ಆಗಿದೆ. ಹಾಗಾಗಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ದಿನಗಳಲ್ಲಿ ಅದನ್ನು ಕಡ್ಡಾಯಗೊಳಿಸಬೇಕೆಂದು ಮನವಿ ಸಲ್ಲಿಸಿದರು. ಒಂದು ವೇಳೆ, ಕಡ್ಡಾಯ ಮಾಡದೇ ಇದ್ದರೇ, ಮಾನದಂಡಗಳನ್ನು ಮಾಡದೇ ಇದ್ದರೆ ಎಲ್ಲಾ ಸಂದರ್ಭಗಳಲ್ಲಿಯೂ ಸಂಯುಕ್ತ ಸಹಕಾರಿಯಿಂದಲೇ ಪರಿಹಾರ ನೀಡಲು ಸಾಧ್ಯವಿರುವುದಿಲ್ಲ. ವೃತ್ತಿಪರ ನಿರ್ದೇಶಕರು ಇದ್ದರೆ ಬಹಳ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಪ್ರತಿಯೊಂದು ಸೌಹಾರ್ದ ಸಹಕಾರಿಯೂ ಸಹ ವೃತ್ತಿಪರ ನಿರ್ದೇಶಕರನ್ನು ಹೊಂದಬೇಕು ಎಂದು ಮಾನ್ಯ ನಿರ್ದೇಶಕರು ಸಲಹೆ ನೀಡಿರುತ್ತಾರೆ. ತಾವೆಲ್ಲರೂ ಸಹ ತಮ್ಮ ತಮ್ಮ

ಸಂಸ್ಥೆಗಳಲ್ಲಿ ಇಬ್ಬರು ವೃತ್ತಿಪರ ನಿರ್ದೇಶಕರನ್ನು ಹೊಂದಿದ್ದಲ್ಲಿ ಉತ್ತಮವಾಗಿರುತ್ತದೆ ಎಂಬುದಕ್ಕೆ ನಾವು ಸಹ ಸಹಮತ ವ್ಯಕ್ತಪಡಿಸುತ್ತೇವೆ. ದಯವಿಟ್ಟು ಎಲ್ಲಾ ಸೌಹಾರ್ದ ಸಹಕಾರಿಗಳು ಸಹ ವೃತ್ತಿಪರ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲು ವಿನಂತಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಕಳೆದ ತಿಂಗಳು ಕೇರಳದಲ್ಲಿ ಜಿಎಸ್‌ಟಿಯು ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ ಎಂದು ಆದೇಶ ನೀಡಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸಿರುತ್ತೇನೆ. ಅದನ್ನು ತಾವು ಗಮನಿಸಬೇಕು. ಪರಸ್ಪರ ತಿಳುವಳಿಕೆಯ ಆಧಾರದ ಮೇಲೆ ನಡೆಯುವ ಸಂಸ್ಥೆಗಳಿಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲ ಎಂದು ಈ ಆದೇಶದಲ್ಲಿ ತಿಳಿಸಿರುತ್ತಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಈ ಆದೇಶವು ಬಹಳ ಹಿಂದೆಯೇ ಬಿದ್ದು ಹೋಗಿರುತ್ತದೆ. ಈ ಕುರಿತು ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗಡೆರವರು ಬಹಳ ಹೋರಾಡಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಡೆಲಿಗೇಟ್‌ರವರು ಮಾತನಾಡಿ ಈ ಆದೇಶವು ಇತ್ತೀಚಿನ ಆದೇಶವಾಗಿದ್ದು, ಸದರಿ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸಲಾಗಿದ್ದು, ತಾವು ಸಹ ಪರಿಶೀಲಿಸಬೇಕು. ಈ ಆದೇಶವು ಇಡೀ ರಾಜ್ಯದಲ್ಲಿರುವ ಎಲ್ಲಾ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ, ಸದಸ್ಯರಿಗೆ ಅನುಕೂಲವಾಗುತ್ತದೆ. ನ್ಯಾಯಾಲಯವೇ ಒಪ್ಪಿಕೊಂಡ ಮೇಲೆ ಈ ಕುರಿತು ಸಂಯುಕ್ತ ಸಹಕಾರಿಯಿಂದ ಪ್ರಯತ್ನ ಮಾಡಬೇಕು. ಇದನ್ನು ಆಡಳಿತ ಮಂಡಲಿಯು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಈ ಕುರಿತು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಸೌಹಾರ್ದ ಸಹಕಾರಿಗಳ ಮಾನ್ಯ ಡೆಲಿಗೇಟ್‌ಗಳು ವಾರ್ಷಿಕ ಸಾಮಾನ್ಯ ಸಭೆಯ ಚರ್ಚೆಯಲ್ಲಿ ಭಾಗವಹಿಸಿ, ಕೆಲವೊಂದು ಪ್ರಶ್ನೆಗಳನ್ನು ಕೇಳಿದರು ಹಾಗೂ ಸಲಹೆಗಳನ್ನು ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸಿ, ಸದರಿ ಪ್ರಶ್ನೆಗಳಿಗೆ ಸ್ಥಳದಲ್ಲಿಯೇ ಉತ್ತರಿಸಿದರು ಹಾಗೂ ಸಲಹೆಗಳನ್ನು ಆಡಳಿತ ಮಂಡಲಿಯಲ್ಲಿ ಚರ್ಚಿಸಿ, ಕ್ರಮವಿಡುವುದಾಗಿ ತಿಳಿಸಿದರು.

ಮಾನ್ಯ ಸಹಕಾರಿ ಪ್ರತಿನಿಧಿಗಳು ಸ್ಥಳದಲ್ಲಿಯೇ ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ಸಹ ಸ್ಥಳದಲ್ಲಿಯೇ ಉತ್ತರಗಳನ್ನು ನೀಡಿರುತ್ತಾರೆ. ಆದರೆ, ನಿಯಮಾನುಸಾರ ಈ ಪ್ರಶ್ನೋತ್ತರಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಲು ಇಚ್ಛಿಸಿ ಬಂದಿರುವ ಎಲ್ಲಾ ಲಿಖಿತ ಕೋರಿಕೆಯ ಪ್ರಶ್ನೆಗಳಿಗೆ ಉತ್ತರಿಸಲಾಯಿತು ಹಾಗೂ ಸಭೆಯಲ್ಲಿ ಸ್ಥಳದಲ್ಲಿಯೇ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಹ ಮಾನ್ಯ ಅಧ್ಯಕ್ಷರು ಉತ್ತರ ನೀಡಿರುತ್ತಾರೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸಭೆಯು ಅದನ್ನು ಸರ್ವಾನುಮತದಿಂದ ಅನುಮೋದಿಸಿತು..

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಎಲ್ಲಾ ವಿಷಯಗಳು ಮುಕ್ತಾಯವಾದ ಹಿನ್ನೆಲೆಯಲ್ಲಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಂತರ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಹಕಾರ ಸಚಿವರು, ಮಂತ್ರಿಮಂಡಲದ ಎಲ್ಲಾ ಮಾನ್ಯ ಸದಸ್ಯರು, ಕರ್ನಾಟಕ ರಾಜ್ಯದ ಮಾನ್ಯ ವಿಧಾನ ಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕೇಂದ್ರ ಸರ್ಕಾರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಮಾನ್ಯ ಸಚಿವರುಗಳು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ರಾಜ್ಯಸಭಾ ಸದಸ್ಯರು, ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಮಾನ್ಯ ಸಹಕಾರ ಸಂಘಗಳ ನಿಬಂಧಕರು, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಸಹಕಾರಿ ಸಂಸ್ಥೆಗಳ ಮತ್ತು ಎಲ್ಲಾ ಮಹಾಮಂಡಳಗಳ ಮಾನ್ಯ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು, ಸಹಕಾರಿ ಗಣ್ಯರು, ಸಹಕಾರಿ ಅಧಿಕಾರಿಗಳು ಹಾಗೂ ಮಾಧ್ಯಮ ಮಿತ್ರರು, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಎಸ್.ಆರ್.ಸತೀಶ್ಚಂದ್ರ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಹೆಚ್.ವಿ.ರಾಜೀವ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು, ಸಂಯುಕ್ತ ಸಹಕಾರಿಯ ಹಿಂದಿನ ಹಾಗೂ ಪ್ರಸಕ್ತ ಆಡಳಿತ ಮಂಡಲಿಗಳ ಎಲ್ಲಾ ಮಾನ್ಯ ಸದಸ್ಯರುಗಳು, ಅಧಿಕಾರಿಗಳು, ಸಿಬ್ಬಂದಿಯವರು, ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ತರಬೇತುದಾರರು, ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳು, ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರು, ನ್ಯಾಯವಾದಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಅಧಿಕಾರಿಗಳು, ಬೆಂಗಳೂರಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಮಾನ್ಯ ಅಧ್ಯಕ್ಷರು, ಮಾನ್ಯ ಪ್ರಾದೇಶಿಕ ನಿರ್ದೇಶಕರು ಹಾಗೂ ಆಡಳಿತ ಮಂಡಲಿ ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳು, ರಾಷ್ಟ್ರಮಟ್ಟದ ಸಂಸ್ಥೆಗಳಾದ ಆರ್‌ಬಿಐ, ಎನ್‌ಸಿಯುಐ, ಎನ್‌ಸಿಸಿಇ, ಎನ್‌ಸಿಸಿಟಿ, ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್, ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ಐಸಿಎ)ಯ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಡಿಸಿಬಿಎಂ

ಕೋರ್ಸನ್ನು ರೂಪಿಸುವಲ್ಲಿ ಸಹಕಾರ ನೀಡಿದ ಡಾ. ಯಶವಂತ ಡೋಂಗ್ರೆ, ಶ್ರೀ ಸಿ ಎನ್ ಪರಶಿವಮೂರ್ತಿ, ಡಾ. ಎಸ್.ಎ.ಸಿದ್ಧಾಂತಿ ಹಾಗೂ ಈ ಕೋರ್ಸ್‌ನ ಅಧ್ಯಯನ ಸಾಹಿತ್ಯ ಸಿದ್ಧಪಡಿಸಿ, ಸಂಪರ್ಕ ವರ್ಗ ತರಗತಿಗಳನ್ನು ನಡೆಸುತ್ತಿರುವ ಎಲ್ಲಾ ವಿಷಯ ತಜ್ಞರು ಹಾಗೂ ಸಂಪನ್ಮೂಲ ವ್ಯಕ್ತಿಗಳು, ಸೌಹಾರ್ದ ಸಹಕಾರಿ ಕ್ಷೇತ್ರದ ಮತ್ತು ಸಂಯುಕ್ತ ಸಹಕಾರಿಯ ಬೆಳವಣಿಗೆ, ಪ್ರಗತಿ ಮತ್ತು ಯಶಸ್ಸಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾ ಹಿತೈಷಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಹಾಗೂ ವೈಯಕ್ತಿಕವಾಗಿ ಮಾನ್ಯ ಅಧ್ಯಕ್ಷರು ಕೃತಜ್ಞತೆಗಳನ್ನು ಸಲ್ಲಿಸಿ, ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ಹಾಗೂ ಸಹಯೋಗವನ್ನು ಕೋರಿದರು.

ಸಭೆಯ ಕೊನೆಯಲ್ಲಿ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಟ್ಟ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರಿಗೆ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರಿಗೆ, ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರುಗಳಿಗೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ, ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರಿಗೆ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ, ಸಕಾರಾತ್ಮಕವಾಗಿ ಸ್ಪಂದಿಸಿದ ವಿವಿಧ ಸೌಹಾರ್ದ ಸಹಕಾರಿಗಳ ಮಾನ್ಯ ಡೆಲಿಗೇಟುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ.ವಿಜಯ್ ಇವರು ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**

Karnataka State Souharda Federal Cooperative Ltd.
Reg. No.
RSR / SOU / ACT / 136 /
Regn 051 / 2001-02
dated 04-01-2002
Bangalore

**ದಿನಾಂಕ : 06.10.2026**
**ಸ್ಥಳ : ಬೆಂಗಳೂರು**

**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕ**